Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–15 | ಏಪ್ರಿಲ್ 8–14, 2024 | ಪುಟ 16 | ರೂ.10/–
Volume-18 | Issue-15 | April 8-14, 2024 | Pages:16 | Price: 10/-



ಎಡಪಕ್ಷಗಳ ಬಲ ಹೆಚ್ಚಳ, ಸೆಕ್ಯುಲರ್ ಸರ್ಕಾರದ ರಚನೆ ಪ್ರತಿಪಾದನೆ:

ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಬಿಡುಗಡೆ



ಪತಂಜಲಿ ಬಾಬಾಗೆ 'ಸುಪ್ರೀಂ' ಛೀಮಾರಿ

ಇ.ಡಿ. ಬಾಲ ಕತ್ತರಿಸಿ ಪ್ರಜಾಪ್ರಭುತ್ವ ರಕ್ಷಿಸಿ

ನ್ಯಾಯದ ಸೋಗಿನಲ್ಲಿ ವಕೀಲರ 'ಅನ್ಯಾಯ'ದ ಪತ್ರ

ಅಮಿತ್ ಶಾ ಹೇಳಿದ ಸುಳ್ಳುಗಳು

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಗೊಂದು ಭವ್ಯವಾದ ಇತಿಹಾಸ ಹಾಗೂ ಪರಂಪರೆ ಇದೆ. ಕೆಚ್ಚೆದೆಯ ಹೋರಾಟಗಳು, ತ್ಯಾಗ ಬಲಿದಾನಗಳ ಹಿನ್ನೆಲೆ ಇದೆ. ಈ ಹಿನ್ನೆಲೆಯನ್ನು ಮಸುಕು ಮಾಡುವ ಸಂಚುಗಳೂ ಇವೆ. ಈ ಸನ್ನಿವೇಶದಲ್ಲಿ ಚರಿತ್ರೆಯ ಹೆಜ್ಜೆ ಗುರುತುಗಳನ್ನು ನೆನಪಿಸಿಕೊಳ್ಳುವ ಒಂದು ಲೇಖನ. (ಕಳೆದ ಸಂಚಿಕೆಯ ಉಳಿದ ಭಾಗ)

ಮಹಿಳಾ ದಿನಾಚರಣೆಯ ವಿಶೇಷ ಲೇಖನ

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಭವ್ಯ ಇತಿಹಾಸ ಮತ್ತು ಪರಂಪರೆ





ಡಾ. ಕೆ. ಹೇಮಲತ
ಸಿ.ಐ.ಟಿ.ಯು.
ಅಖಿಲ ಭಾರತ ಅಧ್ಯಕ್ಷರು

ಕ್ಲಾರಾ ಜೆಟ್ಕಿನ್

ಅಂತರ ರಾಷ್ಟ್ರೀಯ ಮಹಿಳಾ ದಿನದ ಆಚರಣೆಯನ್ನು ತರುವಲ್ಲಿ ಸಹಕರಿಸಿದವರು ಪ್ರಖ್ಯಾತ ಸಮಾಜವಾದಿ ಮುಖಂಡರಾದ ಕ್ಲಾರಾಜೆಟ್ಕಿನ್. 1889 ರಲ್ಲಿ ನಡೆದ ಎರಡನೇ ಇಂಟರ್ನ್ಯಾಶನಲ್ (ಸಮಾಜವಾದಿ) ಸಂಸ್ಥಾಪನಾ ಸಭೆಯಲ್ಲಿ 19 ರಾಷ್ಟ್ರಗಳಿಂದ ಬಂದ 400 ಪ್ರತಿನಿಧಿಗಳ, 8 ಮಹಿಳೆಯರಲ್ಲಿ ಒಬ್ಬರಾಗಿದ್ದರು. ಅವರು ಮಹಿಳೆಯರ ಸಮಾನ ಹಕ್ಕುಗಳಿಗೆ, ಮತದಾನದ ಹಕ್ಕನ್ನು ಒಳಗೊಂಡು, ಸಮಾನ ಕೆಲಸಕ್ಕೆ ಸಮಾನ ವೇತನಗಳಿಗಾಗಿ ಸಭೆಯು ಅಂಗೀಕಾರ ನೀಡಬೇಕೆಂದು ಕೋರಿದರು. ಸಭೆಯು ಪುರುಷ ಕಾರ್ಮಿಕರು, ಮಹಿಳೆಯರನ್ನು ಸಮಾನ ಹಕ್ಕುಗಳ ಆಧಾರದ ಮೇಲೆ ತಮ್ಮ ಶ್ರೇಣಿಗಳಿಗೆ ಕರೆದೊಯ್ಯುವ ಕರ್ತವ್ಯವಿದೆ ಮತ್ತು ಎರಡೂ ವರ್ಗದ ಕಾರ್ಮಿಕರಿಗೂ ಸಮಾನ ವೇತನ ತತ್ವಶಃವಾಗಿ ಯವುದೇ ರಾಷ್ಟ್ರೀಯತೆಯ ತಾರತಮ್ಯವಿಲ್ಲದೆ ನೀಡಬೇಕೆಂಬ ನಿರ್ಣಯವನ್ನು ಅಂಗೀಕರಿಸಿತು.

1907 ರಲ್ಲಿ ಸ್ಟಟಗಾರ್ಟ್‌ನಲ್ಲಿ ನಡೆದ 'ಅಂತರ ರಾಷ್ಟ್ರೀಯ ಸಮಾಜವಾದಿ ಸಭೆ'ಯಲ್ಲಿ ಮೊದಲ 'ಅಂತರ ರಾಷ್ಟ್ರೀಯ ಸಮಾಜವಾದಿ ಮಹಿಳೆಯರ ಸಮ್ಮೇಳನ'ವನ್ನು ಹಮ್ಮಿಕೊಳ್ಳಲಾಯಿತು. 15 ರಾಷ್ಟ್ರಗಳಿಂದ 59 ಮಹಿಳೆಯರು ಈ ಸಮ್ಮೇಳನದಲ್ಲಿ ಭಾಗವಹಿಸಿದರು. ಅಂತರ ರಾಷ್ಟ್ರೀಯ ಮಹಿಳಾ ವಿಭಾಗವನ್ನು ಸ್ಥಾಪಿಸಲಾಯಿತು ಮತ್ತು ಜೆಟ್ಕಿನ್‌ರವರು ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

ಅಂತರಾಷ್ಟ್ರೀಯ ಮಹಿಳಾ ದಿನದ ಜನನ

ಅಮೆರಿಕಾದ ಮಹಿಳಾ ಕಾರ್ಮಿಕರ ಮತ್ತು ಸಮಾಜವಾದಿ ಸೋದರಿಯರ ಹೋರಾಟಗಳು, 1910 ರಲ್ಲಿ ನಡೆದ ಎರಡನೇ ಇಂಟರ್ ನ್ಯಾಶನಲ್ ಸಮ್ಮೇಳನದಲ್ಲಿ ಕ್ಲಾರಾಜೆಟ್ಕಿನ್‌ರವರು ನೀಡಿದ ಪ್ರಸ್ತಾವನೆಗೆ ಸ್ಫೂರ್ತಿಯಾಗಿತ್ತು. ಪ್ರತಿ ವರ್ಷದಲ್ಲಿ ಒಂದು ನಿರ್ದಿಷ್ಟವಾದ ದಿನವು ವಿಶ್ವದಾದ್ಯಂತ ಮಹಿಳೆಯರ ಬೇಡಿಕೆಗಳಿಗಾಗಿ ಕೇಂದ್ರೀಕರಿಸಲು ಆಚರಿಸುವಂತೆ ಪ್ರಸ್ತಾಪಿಸಲಾಯಿತು.

ಆ ಸಮ್ಮೇಳನವು ಮಹಿಳೆಯರ ಮತದಾನದ ಹಕ್ಕಿನ ಮಹತ್ವವನ್ನು ಕೂಡ ದೃಢೀಕರಣಗೊಳಿಸಿತು. ಆಸ್ತಿ ಇದ್ದವರಿಗೆ ಮತ್ತು ಆಸ್ತಿ ತೆರಿಗೆ ಕಟ್ಟುವವರಿಗೆ ಮಾತ್ರ ಮತದಾನದ ಹಕ್ಕು ನೀಡುವ ವ್ಯವಸ್ಥೆಗೆ ಬದಲಾಗಿ ವಯಸ್ಕ ಮಹಿಳಾ ಮತ್ತು ಪುರುಷರಿಗೆ ಸಾರ್ವತ್ರಿಕ ಮತದಾನದ ಹಕ್ಕಿಗಾಗಿ ಕರೆ ನೀಡಿದರು. ಮಾತೃತ್ವ ಪ್ರಯೋಜನಕ್ಕಾಗಿ ಕೂಡ ಕರೆ ನೀಡಲಾಯಿತು ಮತ್ತು ರಾತ್ರಿಯಲ್ಲಿನ ಕೆಲಸವು ಮಹಿಳಾ ಕಾರ್ಮಿಕರ ಆರೋಗ್ಯಕ್ಕೆ ಹಾನಿಕಾರಕವಾದ್ದರಿಂದ ಅದನ್ನು ವಿರೋಧಿಸಬೇಕೆಂಬ ಕರೆಯನ್ನು ಸಹ ನೀಡಿತು.

ಆರಂಭದಲ್ಲಿ, ಮಾರ್ಚ್ 19 ರಂದು ಅಂತರಾಷ್ಟ್ರೀಯ ಮಹಿಳಾ ದಿನವನ್ನು ಮೊದಲ ಬಾರಿಗೆ ಆಚರಿಸಬೇಕೆಂಬುದಾಗಿ ತೀರ್ಮಾನವಾಗಿತ್ತು. ಈ ದಿನದಂದು 1848 ರಲ್ಲಿ ಕಾರ್ಮಿಕ ವರ್ಗದ ತೀವ್ರವಾದ ಹೋರಾಟ ಪರ್ಶಿಯಾದಲ್ಲಿ ಭುಗಿಲೆದ್ದ ಕಾರಣ ರಾಜನು ಸಾರ್ವತ್ರಿಕ ಮತದಾನಕ್ಕೆ ತತ್ವಶಃವಾಗಿ ಒಪ್ಪಲು ಬಲವಂತಪಡಿಸಲಾದ ಕಾರಣ ಈ ದಿನವನ್ನು ಆಯ್ಕೆ ಮಾಡಲಾಗಿತ್ತು. ಇತಿಹಾಸದಲ್ಲಿ ಪ್ರಾಯಶಃ ಇದೇ ಮೊದಲ ಬಾರಿಗೆ ಆಳುವ ವರ್ಗವು ತತ್ವಶಃವಾಗಿ ಮಾತ್ರವಾದರೂ ಸಮಾನ ರಾಜಕೀಯ ಹಕ್ಕನ್ನು ಮಹಿಳೆಯರಿಗಾಗಿ ನೀಡಲು ಒಪ್ಪಿಕೊಂಡಿತ್ತು.

ಮೊದಲಲ್ಲಿ, ಅಮೆರಿಕಾದ ಸಮಾಜವಾದಿ ಪಕ್ಷದ ಘೋಷಣೆಗೆ ಅನುಗುಣವಾಗಿ, ಮೊದಲ ರಾಷ್ಟ್ರೀಯ ಮಹಿಳಾ ದಿನವನ್ನು 28 ನೇ ಫೆಬ್ರವರಿಯಂದು ಆಚರಿಸಲಾಗಿತ್ತು, 1913ರವರೆಗೂ ಮಹಿಳೆಯರು ರಾಷ್ಟ್ರೀಯ ಮಹಿಳಾ ದಿನವನ್ನು ಫೆಬ್ರವರಿ ತಿಂಗಳ ಕೊನೆಯ ಭಾನುವಾರದಂದು ಆಚರಿಸಿಕೊಂಡು ಬಂದರು.

19 ಮಾರ್ಚ್ 1911 ರ ಅಂತರಾಷ್ಟ್ರೀಯ ಮಹಿಳಾ ದಿನಕ್ಕೆ ಆಸ್ಟ್ರೀಯ, ಡೆನ್ಮಾರ್ಕ್, ಜರ್ಮನಿ ಮತ್ತು ಸ್ವಿಟ್ಜರ್‌ಲ್ಯಾಂಡನ್ನು ಒಳಗೊಂಡು ವಿವಿಧ ರಾಷ್ಟ್ರಗಳ ಮಹಿಳೆಯರ ಪ್ರಚಂಡವಾದ ಪ್ರತಿಕ್ರಿಯೆ ದೊರಕಿತು. ಒಂದು ಮಿಲಿಯನ್‌ಗೂ ಮೀರಿ ಮಹಿಳೆಯರು ಮತ್ತು ಪುರುಷರು ಅಂತರಾಷ್ಟ್ರೀಯ ಮಹಿಳಾದಿನದ ಮೆರವಣಿಗೆಯಲ್ಲಿ ಪಾಲ್ಗೊಂಡು, ಮಹಿಳೆಯರ ಕೆಲಸ ಮಾಡುವ, ಮತದಾನದ ಹಕ್ಕಿಗಾಗಿ, ತರಬೇತಿ ನೀಡುವುದಕ್ಕಾಗಿ, ಸಾರ್ವಜನಿಕ ಕಛೇರಿಗಳನ್ನು ನಿರ್ವಹಿಸುವುದಕ್ಕಾಗಿ ಮತ್ತು ತಾರತಮ್ಯ ಅಂತ್ಯಗೊಳಿಸುವುದಕ್ಕಾಗಿ ಪ್ರಚಾರವನ್ನು ಮಾಡಿದರು. ಹೆಚ್ಚಿನ ಸಂಖ್ಯೆಯಲ್ಲಿ ಪುರುಷರು ಬದಲಾವಣೆಗಾಗಿ ಮನೆಯಲ್ಲಿ ಮಕ್ಕಳೊಂದಿಗೆ ಉಳಿದರು, ಸೆರೆಯಾಗಿದ್ದ ಗೃಹಿಣಿಯರು ಸಭೆಗಳಿಗೆ ಹೊರಟರು.

25 ಮಾರ್ಚ್ 1911 ರಂದು, ಟ್ರೈಯಾಂಗಲ್ ಸಂಸ್ಥೆಯಲ್ಲಿ ಅಗ್ನಿ ಅವಘಡ ಸಂಭವಿಸಿ, 140 ಕ್ಕೂ ಹೆಚ್ಚು ಮಹಿಳಾ ಗಾರ್ಮೆಂಟ್ ಕಾರ್ಮಿಕರು ಸಾವಿಗೀಡಾದರು, ಹೆಚ್ಚಾಗಿ ವಲಸೆ ಬಂದ ಯುವ ಕಾರ್ಮಿಕರು. ಇದು ಅಮೆರಿಕಾದ ಗಾರ್ಮೆಂಟ್ ಕಾರ್ಖಾನೆಗಳಲ್ಲಿನ ನಿಷ್ಪ್ರಷ್ಟವಾದ ಮತ್ತು ಅಪಾಯಕಾರಿಯಾದ ಕೆಲಸದ ಸ್ಥಿತಿಗಳ ಬಗ್ಗೆ ಗಮನ ಸೆಳೆಯಿತು. ಮುಂಬರುವ ಅಂತರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ ಇದು ಕೇಂದ್ರಬಿಂದುವಾಯಿತು.

1913 ರಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನದ ಆಚರಣೆಯನ್ನು ಮಾರ್ಚ್ 8ಕ್ಕೆ ಬದಲಾವಣೆಗೊಳಿಸಲಾಯಿತು. ಇದು ನ್ಯೂಯಾರ್ಕ್‌ನ ಮಹಿಳಾ ಗಾರ್ಮೆಂಟ್ ಕಾರ್ಮಿಕರು 1857 ರಲ್ಲಿ ಮುಷ್ಕರಕ್ಕೆ ತೊಡಗಿದ ದಿನ. ರಷ್ಯನ್ ಕ್ರಾಂತಿಯ ಪ್ರದರ್ಶನಗಳು ಕೂಡ ಶುರುವಾಗಿದ್ದು 1917 ರ ಅಂತರಾಷ್ಟ್ರೀಯ ಮಹಿಳಾ ದಿನದಂದು ಎಂಬುದು ಕುತೂಹಲಕಾರಿಯಾದ ಸಂಗತಿ. 10,000ಕ್ಕೂ ಅಧಿಕ ಕಾರ್ಮಿಕ ವರ್ಗದ ಮಹಿಳೆಯರು ಚಳಿಯಲ್ಲಿ, ಹಿಮ ಆವರಿಸಿದ ಸೆಂಟ್ ಪೀಟರ್ಸ್ ಬರ್ಗ್ ರಸ್ತೆಗಳಲ್ಲಿ ತಮ್ಮ ಹಸಿದ ಮಕ್ಕಳಿಗಾಗಿ ಆಹಾರ ಮತ್ತು ತಮ್ಮ ಪುರುಷರನ್ನು ಯುದ್ಧ ಭೂಮಿಯಿಂದ ವಾಪಾಸು ಕರೆತರುವಂತೆ ಬೇಡಿಕೆಗಳನ್ನಿಟ್ಟುಕೊಂಡು ಮೆರವಣಿಗೆ ನಡೆಸಿದರು. ಕೆಲವೇ ದಿನಗಳಲ್ಲಿ ಮಾಸ್ಕೊದ ಕಾರ್ಮಿಕ ವರ್ಗವು ಈ ಬಂಡಾಯದಲ್ಲಿ ಸೇರಿಕೊಂಡ ಕಾರಣ ತ್ಸಾರ್ (ರಾಜನು) ತನ್ನ ಅಧಿಕಾರವನ್ನು ತ್ಯಜಿಸಬೇಕಾಯಿತು. ದುಡಿಯುವ ವರ್ಗವು ಜಗತ್ತಿನ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಅಧಿಕಾರವನ್ನು ಹಿಡಿಯಿತು.

ವಿಶ್ವ ಸಂಸ್ಥೆ ಮತ್ತು ಅಂತರಾಷ್ಟ್ರೀಯ ಮಹಿಳಾ ದಿನ

ಯಾವುದು ಸಮಾಜವಾದಿ ಮಹಿಳೆಯರ ಕರೆಯೊಂದಿಗೆಶುರುವಾಯಿತೊ,ಅದುಕ್ರಮೇಣವಾಗಿ ವಿಶ್ವಾದ್ಯಂತ ಪ್ರತಿಧ್ವನಿಸುತ್ತಾ, ದೇಶವಾದ ಮೇಲೆ ದೇಶಗಳು 8 ನೇ ಮಾರ್ಚ್ ಅನ್ನು ಅಂತರ ರಾಷ್ಟ್ರೀಯ ಮಹಿಳಾ ದಿನವಾಗಿ ಒಪ್ಪಿಕೊಂಡವು. 1972 ರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ, ಮಹಿಳೆಯರ ವಿಶ್ವ ಸಮ್ಮೇಳನವನ್ನು ಮಹಿಳೆಯರ ಪ್ರಗತಿಗಾಗಿ ಕಾರ್ಯತಂತ್ರಗಳನ್ನು ರೂಪಿಸಲು ವಿಶ್ವದ ಗಮನವನ್ನು ಕೇಂದ್ರೀಕರಿಸಬೇಕೆಂಬ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. 1975 ರಲ್ಲಿ ಮೆಕ್ಸಿಕೊದಲ್ಲಿ ಮೊದಲ ಮಹಿಳಾ ವಿಶ್ವ ಸಮ್ಮೇಳನವನ್ನು ಆಯೋಜಿಸಲಾಯಿತು, ಆ ವರ್ಷವನ್ನು ಅಂತರಾಷ್ಟ್ರೀಯ ಮಹಿಳೆಯರ ವರ್ಷವೆಂದು ಘೋಷಿಸಲಾಯಿತು ಮತ್ತು ಅಂತರಾಷ್ಟ್ರೀಯ ಮಹಿಳಾ ದಶಕ 1976–85ದ ಸಲಹೆ ನೀಡಲಾಯಿತು. 1977 ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಎಲ್ಲಾ ರಾಷ್ಟ್ರಗಳಲ್ಲಿಯೂ ಮಹಿಳೆಯರ ಸಮಸ್ಯೆಗಳ ಬಗ್ಗೆ ಕೇಂದ್ರೀಕೃತವಾಗಲು ಒಂದು ದಿನದ ಆಚರಣೆಯ ನಿರ್ಣಯವನ್ನು ಅಂಗೀಕರಿಸಲಾಯಿತು. 150 ರಾಷ್ಟ್ರಗಳು ಈ ನಿರ್ಣಯವನ್ನು ಬೆಂಬಲಿಸಿದವು ಮತ್ತು ತಮ್ಮ ರಾಷ್ಟ್ರಗಳಲ್ಲಿ ಯಾವುದೇ ರೀತಿಯ ತಾರತಮ್ಯವನ್ನು ಹೋಗಲಾಡಿಸುವುದಾಗಿ ಮತ್ತು ಅಲ್ಲಿಯವರೆಗೂ ಮಹಿಳಾ ದಿನವು ಆದ್ಯತೆಯ ಕಾರ್ಯಕ್ರಮದಡಿಯಲ್ಲಿ ಇರುವುದೆಂದು ಘೋಷಿಸಿದವು. ಯಾವುದೇ ನಿರ್ದಿಷ್ಟವಾದ ದಿನವನ್ನು ನಿರ್ಣಯದಲ್ಲಿ ಮಂಡಿಸಲಿಲ್ಲದಿದ್ದರೂ ಹೆಚ್ಚಿನ ರಾಷ್ಟ್ರಗಳೆಲ್ಲವೂ 8 ಮಾರ್ಚ್ ಎಂದು ತೀರ್ಮಾನಿಸಿದವು.

ಇಂದಿನ ಅಂತರಾಷ್ಟ್ರೀಯ ಮಹಿಳಾ ದಿನ

ಎರಡನೇ ಸಮಾಜವಾದಿ ಮಹಿಳೆಯರ ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನದ ಆಚರಣೆಯ ನಿರ್ಧಾರ ಮಾಡುತ್ತಾ ಬೇಡಿಕೆಗಳನ್ನು ಎತ್ತಿದ್ದರೋ, ಅವು ಈ ದಿನಗಳಲ್ಲಿಯೂ ಪ್ರಸ್ತುತವಾಗಿವೆ. ಸಮಾನ ವೇತನ ಮತ್ತು ಎಂಟು ಗಂಟೆಗಳ ಕೆಲಸದ ಅವಧಿಯು ನೂರು ವರ್ಷ ಕಳೆದರೂ ಬಹಳಷ್ಟು ಮಹಿಳೆಯರಿಗೆ ದಕ್ಕದೇ ಉಳಿದು ಕೊಂಡಿದೆ. ಭಾರತದ ಮಹಿಳೆಯರಿಗೆ ಶಾಸಕಾಂಗಗಳಲ್ಲಿ ಅವರ ಸೂಕ್ತವಾದ ಸ್ಥಳಗಳನ್ನು ನಿರಾಕರಿಸಲಾಗಿದೆ.

ಈ ಅಂತರಾಷ್ಟ್ರೀಯ ಮಹಿಳಾ ದಿನದಂದು ಅದರ ಮೂಲವಾದ ಚಾರಿತ್ರ್ಯವನ್ನು ರಕ್ಷಿಸಲು ನಾವು ಪಣತೊಡುತ್ತಾ, ಶೋಷಣೆ ಮತ್ತು ದಬ್ಬಾಳಿಕೆಗಳ ವಿರುದ್ಧ ನಡೆದ ಹೋರಾಟಗಳನ್ನು ನೆನೆಯುವ ದಿನವಾಗಿಸಬೇಕು. ನಾವು ಮಹಿಳೆಯರ ಮೇಲಿನ ದಬ್ಬಾಳಿಕೆಗೆ ನಿಜವಾದ ಕಾರಣಗಳ ಮತ್ತು ಅದನ್ನು ಹಿಮ್ಮೆಟ್ಟಿಸುವ ಅವಶ್ಯಕತೆಯ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸಲು ಶಕ್ತಿಯುತ ಚಳುವಳಿಯನ್ನು ಪ್ರಾರಂಭಿಸೋಣ.

ಪರ್ಯಾಯಗಳ ಇರುವಿಕೆಯನ್ನು ಮತ್ತು ಅದನ್ನು ಗಳಿಸಲು ಒಗ್ಗೂಡಿ ಹೋರಾಡುವ ಅವಶ್ಯಕತೆ ಇದೆ ಎಂದು ಸಾರೋಣ. ನಾವು ನಮ್ಮ ಐಕ್ಯತೆಯನ್ನು ವಿಶ್ವಾದ್ಯಂತ ತಮಗೆ ಸೂಕ್ತವಾದ ಹಕ್ಕುಗಳಿಗಾಗಿ ಹೋರಾಡುತ್ತಿರುವ ಮಹಿಳೆಯರಿಗಾಗಿ ವ್ಯಕ್ತಪಡಿಸೋಣ. ನಾವು ನಮ್ಮನ್ನು ಶೋಷಣೆಮುಕ್ತ ಸಮಾಜವನ್ನು ಸ್ಥಾಪಿಸಲು ನಿರಂತರವಾದ ಹೋರಾಟವನ್ನು ಪ್ರಾರಂಭಿಸಲು ಪುನಃ ಸಮರ್ಪಿಸಿಕೊಳ್ಳೋಣ. ●



ಕ್ಲಾರಾ ಜೆಟ್ಕಿನ್ ಮತ್ತು ರೋಸಾ ಲಗ್ಸಂಬರ್ಗ್

ಸಂಪಾದಕೀಯ

ಚುನಾವಣಾ ಚರ್ಚೆ: ವ್ಯಕ್ತಿ ಆಧಾರಿತವೋ, ವಿಷಯಾಧಾರಿತವೋ?

ದೇಶದ 18 ನೆಯ ಸಾರ್ವತ್ರಿಕ ಚುನಾವಣೆಯ ಪ್ರಕ್ರಿಯೆಗಳು ಬಿರುಸಿನಿಂದ ಆರಂಭವಾಗಿವೆ. ಎರಡು ಹಂತಗಳಲ್ಲಿ ಮತದಾನ ನಡೆಯಲಿರುವ ಕರ್ನಾಟಕದಲ್ಲಿ ಮೊದಲ ಹಂತಕ್ಕೆ ನಾಮಪತ್ರಗಳು ಸಲ್ಲಿಕೆಯಾಗಿವೆ. ಜೊತೆಯಲ್ಲಿ ಪ್ರಚಾರ ಕಾರ್ಯವೂ ನಡೆದಿದೆ.

ಆರಂಭದಲ್ಲಿ ಕೆಲವು ಅನುಮಾನಗಳಿದ್ದರೂ ನಿಗದಿತ ಅವಧಿಯೊಳಗೆ ಚುನಾವಣೆಗಳನ್ನು ನಡೆಸುತ್ತಿರುವುದು ಸ್ವಾಗತಾರ್ಹವಾಗಿದೆ. ದೇಶದಲ್ಲಿ ಏಳು ಹಂತಗಳಲ್ಲಿ ನಡೆಯುತ್ತಿರುವ ಮತದಾನವನ್ನು ನಿಷ್ಪಕ್ಷಪಾತದಿಂದಲೂ, ಪಾರದರ್ಶಕವಾಗಿಯೂ ನಡೆಸಬೇಕಾಗಿರುವುದು ಆಯೋಗದ ಆದ್ಯ ಕರ್ತವ್ಯ ಮತ್ತು ಬಹು ದೊಡ್ಡ ಹೊಣೆಗಾರಿಕೆ.

ಚುನಾವಣಾ ಪ್ರಕ್ರಿಯೆಯನ್ನು ಬಾಧಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಒಂದು ಮತೀಯ ಧ್ರುವೀಕರಣ ಮತ್ತು ವಿಭಜಕ ವಾಗ್ದಾಳಿಗಳು ಆತಂಕಕಾರಿಯಾಗಿ ಹೆಚ್ಚಿರುವುದು. ರಾಜಕೀಯ ಪಕ್ಷಗಳು, ರಚನಾತ್ಮಕ ಸಂವಾದ ಮತ್ತು ಚರ್ಚೆಯಲ್ಲಿ ತೊಡಗುವ ಬದಲು, ಕೋಮು ಉದ್ವಿಗ್ನತೆಯನ್ನು ಹುಟ್ಟುಹಾಕಲು ಮತ್ತು ಚುನಾವಣಾ ಲಾಭಕ್ಕಾಗಿ ಧಾರ್ಮಿಕ ಮತ್ತು ಜಾತಿಯ ಅಸ್ಮಿತೆಗಳನ್ನು ಬಳಸಿಕೊಳ್ಳುವುದನ್ನು ಹೆಚ್ಚಾಗಿ ಆಶ್ರಯಿಸುತ್ತಿವೆ. ಇದು ರಾಷ್ಟ್ರದ ಐಕ್ಯತೆಗೆ ಧಕ್ಕೆ ತರುವುದಲ್ಲದೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರ ನಂಬಿಕೆಯನ್ನು ಕುಗ್ಗಿಸುತ್ತದೆ. ಹಾಗೇ ನಿಂದನಾತ್ಮಕ ಆರೋಪಗಳಲ್ಲಿಯೂ ತೊಡಗಿರುವುದೂ ವಿಷಾದನೀಯ ಬೆಳವಣಿಗೆ.

ಇದಲ್ಲದೆ, ಹಣ ಮತ್ತು ತೋಳ್ಬಲದ ಶಕ್ತಿಯ ವ್ಯಾಪಕ ಪ್ರಭಾವವು ಚುನಾವಣಾ ಪ್ರಕ್ರಿಯೆಯ ಮೇಲೆ ಕಪ್ಪು ಮೋಡದಂತೆ ಹಬ್ಬುತ್ತಿರುವುದೂ ಮುಂದುವರಿದಿದೆ. ಇತ್ತೀಚಿನ ಚುನಾವಣೆಗಳಲ್ಲಿ ಭ್ರಷ್ಟಾಚಾರ, ಮತಗಳ ಖರೀದಿ ಮತ್ತು ಬೆದರಿಕೆಯ ನಿದರ್ಶನಗಳು ಸರ್ವೇಸಾಮಾನ್ಯವಾಗಿವೆ. ಆ ಮೂಲಕ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಬುಡಮೇಲು ಮಾಡುತ್ತವೆ. ರಾಜಕೀಯ ಪಕ್ಷಗಳು ಇಂತಹ ಅನೈತಿಕ ಕೃತ್ಯಗಳನ್ನು ಬಿಟ್ಟು ಚುನಾವಣಾ ಪ್ರಕ್ರಿಯೆಯ ಸಮಗ್ರತೆಯನ್ನು ಎತ್ತಿಹಿಡಿಯುವುದು ಮತ್ತು ಎಲ್ಲಾ ಅಭ್ಯರ್ಥಿಗಳಿಗೆ ಸರಿಸಮನಾದ ಅವಕಾಶಗಳನ್ನು ಖಾತ್ರಿಪಡಿಸುವುದು ಅಗತ್ಯವಾಗಿದೆ.

ಹಸಿವು, ಬಡತನ, ಬೆಲೆ ಏರಿಕೆ, ಅನಾರೋಗ್ಯ, ನಿರುದ್ಯೋಗ ಮುಂತಾದ ಜನರ ಬದುಕಿನ ಬವಣೆಗಳು ಹಾಗೂ ಬರ, ಪರಿಸರ ನಾಶ, ಭ್ರಷ್ಟಾಚಾರ, ಕೃಷಿ ಬಿಕ್ಕಟ್ಟು, ಮತನಿರಪೇಕ್ಷತೆ ಹಾಗೂ ಪ್ರಜಾಪ್ರಭುತ್ವಕ್ಕೆ ಬಂದಿರುವ ಆಪತ್ತು ಮುಂತಾದ ದೇಶದ ಜ್ವಲಂತ ಸಮಸ್ಯೆಗಳ ಆಧಾರದಲ್ಲಿ ಹಾಗೂ ಸರಕಾರದ ಸಾಧನೆ ವೈಫಲ್ಯಗಳು, ಭವಿಷ್ಯತ್ತಿಗೆ ಪಕ್ಷಗಳ ಪ್ರಣಾಳಿಕೆಗಳ ಆಧಾರದಲ್ಲಿ ನಡೆಯಬೇಕಾದ ಪ್ರಚಾರ ಹಾಗೂ ಇತರ ಚರ್ಚೆಗಳು ವ್ಯಕ್ತಿ ಕೇಂದ್ರಿತ ಆಗುತ್ತಿರುವ ವಿಷಾದದ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ.

ನರೇಂದ್ರ ಮೋದಿಯವರು ಅತ್ಯಂತ ಪ್ರಬಲ ನಾಯಕರೆಂಬುದು ಮತ್ತು ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಬೇಕು ಎಂಬುದು ಬಿಜೆಪಿ ಮತ್ತು ಎನ್.ಡಿ.ಎ. ಕೂಟದ ಒಂದು ಪ್ರಮುಖವಾದ ಮತ್ತು ಪ್ರಚಾರವಾಗಿದೆ. ಹಾಗೆಯೇ ನರೇಂದ್ರ ಮೋದಿಯವರಿಗೆ ಸರಿಸಮನಾದವರು, ವಿರೋಧಿ ಮೈತ್ರಿಕೂಟವಾದ 'ಇಂಡಿಯಾ'ದಲ್ಲಿ ಯಾರಿದ್ದಾರೆ ಎಂಬ ಪ್ರಶ್ನೆಯನ್ನೂ ಎತ್ತಲಾಗುತ್ತಿದೆ. ವ್ಯಕ್ತಿಗಳ ಆಧಾರದಲ್ಲಿ ಚರ್ಚೆಗಳನ್ನು ನಡೆಸಲು ಭಾರತ ದೇಶದಲ್ಲಿರುವುದು ಅಧ್ಯಕ್ಷೀಯ ಮಾದರಿ ಸರಕಾರವಲ್ಲ. ನಮ್ಮದು ಸಂಸದೀಯ ಮಾದರಿ ಸರಕಾರ. ದೇಶದ ಜನತೆ ದೇಶದ ಪಾರ್ಲಿಮೆಂಟಿಗೆ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ಹೆಚ್ಚಿನ ಸ್ಥಾನಗಳನ್ನು ಪಡೆದ ಪಕ್ಷ ಅಥವಾ ಒಕ್ಕೂಟದ ಸಂಸದರು ಸೇರಿ ಪ್ರಧಾನಿ ಯಾರೆಂದು ಚುನಾಯಿಸುತ್ತಾರೆ. ಇಲ್ಲಿ ಎಲ್ಲರೂ ದೇಶದ ಸಂಸತ್ತಿಗೆ ಉತ್ತರದಾಯಿತ್ವ ಹೊಂದಿರುತ್ತಾರೆ. ದೇಶಕ್ಕೆ ಸಂಬಂಧಿಸಿದ ಎಲ್ಲ ಪ್ರಮುಖ ನೀತಿ ನಿರ್ಧಾರಗಳು ದೇಶದ ಪಾರ್ಲಿಮೆಂಟಿನಲ್ಲಿ ಸಮರ್ಪಕವಾಗಿ ಚರ್ಚಿತವಾಗಿ ಅಂಗೀಕಾರವಾಗಿ ಜಾರಿಗೆ ಬರಬೇಕು. ಈ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನೆ ಹಳಿ ತಪ್ಪಿಸಿರುವ ಬಿಜೆಪಿ ಮತ್ತು ಎನ್.ಡಿ.ಎ. ಕೂಟ ವ್ಯಕ್ತಿ ಕೇಂದ್ರಿತವಾಗಿ ಚರ್ಚೆಗಳನ್ನು ನಡೆಸುತ್ತಿರುವುದು ಜನರ ಹಾದಿ ತಪ್ಪಿಸುವ ಕುತಂತ್ರದ ಅದರ ನೀತಿಗೆ ಸಹಜವಾಗಿಯೇ ಇದೆ.

ಇನ್ನು, ಕಾಂಗ್ರೆಸ್ ಸಚಿವ 'ದಿನೇಶ್ ಗುಂಡೂರಾವ್ ಅವರ ಮನೆಯಲ್ಲೇ ಅರ್ಧ ಪಾಕಿಸ್ತಾನ ಇದೆ' ಎಂದು ಬಿಜೆಪಿ ಶಾಸಕ ಬಸವನಗೌಡ ಪಾಟೀಲ ಯತ್ನಾಳ್ ಅವರು ಹೇಳಿರುವುದು ಮತೀಯ ದ್ವೇಷದ ಹೇಳಿಕೆಯೇ ಸರಿ. ದಿನೇಶ್ ಗೂಂಡೂರಾವ್ ಅವರ ಪತ್ನಿ ಟಬು ರಾವ್ ಅವರು ಮುಸ್ಲಿಂ ಧರ್ಮಕ್ಕೆ ಸೇರಿರುವುದರಿಂದ ಯತ್ನಾಳ್ ಅವರು ಈ ರೀತಿ ಅವಹೇಳನಕಾರಿಯಾಗಿ ಟೀಕಿಸಿದ್ದಾರೆ. ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದಲ್ಲಿ ಎನ್.ಐ.ಎ.ಯು ತೀರ್ಥಹಳ್ಳಿಯ ಬಿಜೆಪಿ ಪದಾಧಿಕಾರಿಯನ್ನು ಬಂಧಿಸಿದೆ ಎಂಬ ದಿನೇಶ್ ಅವರ ಹೇಳಿಕೆಗೆ ಪ್ರತಿಕ್ರಿಯೆಯಾಗಿ ಯತ್ನಾಳ್ ಈ ಮಾತನ್ನು ಹೇಳಿದ್ದಾರೆ. ಯತ್ನಾಳ್ ಅವರ ಬಳಿ ಯಾವುದಾದರೂ ಸ್ಪಷ್ಟೀಕರಣ ಅಥವಾ ಸಮರ್ಥನೆ ಇದ್ದರೆ ಅದನ್ನು ಆರೋಗ್ಯಕರ ಭಾಷೆಯಲ್ಲಿ ವ್ಯಕ್ತಪಡಿಸಬಹುದೇ ಹೊರತು, ಕಾರಣವೇ ಇಲ್ಲದೇ, ದಿನೇಶ್ ಅವರ ಪತ್ನಿಯ ಮತಧರ್ಮವನ್ನು ಎಳೆದು ತರುವುದು ಸಲ್ಲದು. ಹಾಗೆಯೇ 'ಇಂಡಿಯಾ ಕೂಟ ಆಡಳಿತ ನಡೆಸಲು ಅಸಮರ್ಥ ಎನ್ನುವುದನ್ನು ಕುಹಕ ರೀತಿಯಲ್ಲಿ ಬಿಂಬಿಸಲು ಬಳಸಿದ 'ವಧು ಆಯ್ಕೆ' ಯ ಬಿಜೆಪಿ ವೀಡಿಯೋ ಕೂಡ ಮಹಿಳೆಯನ್ನು ಭೋಗದ ವಸ್ತು ಎಂದು ಕಾಣುವ ಅದರ ಮನುವಾದಿ ಚಿಂತನೆಯ ಪ್ರತಿಬಿಂಬವಾಗಿದೆ.

ಇನ್ನು ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರ ಸ್ಪರ್ಧೆಯ ಕುರಿತು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು, ಶಾಸಕರೂ ಆದ ಶಾಮನೂರು ಶಿವಶಂಕರಪ್ಪ ಅವರು 'ಮಹಿಳೆ ಅಡುಗೆ ಮಾಡಲು ಮಾತ್ರ ಲಾಯಕ್ಕು' ಎಂದು ಆಡಿರುವ ಮಾತು ಸ್ಪಷ್ಟವಾಗಿ ಮಹಿಳಾ ನಿಂದನೆಯ ಮಾತು. ಇವು ಖಂಡನಾರ್ಹ. ಇವೆಲ್ಲಾ ಕೆಲವು ಉದಾಹರಣಗಳಷ್ಟೆ.

ಚುನಾವಣೆಯ ವಿಚಾರ, ಪ್ರಚಾರಗಳು ಆರೋಗ್ಯಕರ ಭಾಷೆಯಲ್ಲಿರಬೇಕು. ಪ್ರಜಾಸತ್ತಾತ್ಮಕ ಚರ್ಚೆಗೆ ಪೂರಕವಾಗಿರಬೇಕು. ನೀತಿ ಆಧಾರಿತ ಚರ್ಚೆಗಳು ದೇಶದ ಭವಿಷ್ಯತ್ತಿಗೆ ಆಧಾರವಾಗ ಬಲ್ಲವು. ಈ ಚೌಕಟ್ಟು ಮೀರಿದವರ ವಿರುದ್ಧ ಚುನಾವಣಾ ಆಯೋಗವು ತುರ್ತು ಕ್ರಮ ವಹಿಸಬೇಕು. ಈ ವಿಷಯದಲ್ಲಿ ವಿಳಂಬವಾಗಿ ಕ್ರಮವಹಿಸುವುದಾದರೆ ಅದರೆ ಹೆಚ್ಚಿನ ಅರ್ಥವಿಲ್ಲ. ●


ಅಮಿತ್ ಶಾ ಹೇಳಿದ ಸುಳ್ಳುಗಳು

ಈ ವಾರ

ಎಸ್.ವೈ.ಗುರುಶಾಂತ್

ಕರ್ನಾಟಕದಲ್ಲಿ ಚುನಾವಣೆಯ ಪ್ರಚಾರದ ರಂಗು ಏರುತ್ತಿದೆ ನಾಯಕರು ಮಹಾ ನಾಯಕರುಗಳ ಪ್ರಚಾರ ಬಿರುಸು ಪಡೆಯುತ್ತಿದೆ. ಕಾಂಗ್ರೆಸ್ ಪರವಾಗಿ ಸದ್ಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ, ಪಕ್ಷದ ರಾಜ್ಯ ಅದ್ಯಕ್ಷ ಡಿ.ಕೆ ಶಿವಕುಮಾರ್ ಪ್ರಚಾರಕ್ಕಿಳಿದಿದ್ದಾರೆ. ಬಿಜೆಪಿ ಜೆಡಿ ಎಸ್ ಕೂಟದ ಪರವಾಗಿ ರಾಜ್ಯದ ನಾಯಕರಲ್ಲದೇ ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯದ ಹಲವು ಮಹತ್ವದ ಕ್ಷೇತ್ರಗಳೆಂದು ಗುರುತಿಸಿದ ಕಡೆ ರೋಡ್ ಶೋ, ಬಹಿರಂಗ ಸಭೆಗಳನ್ನು ಉದ್ದೇಶಿಸಿ ಮಾತನಾಡಿ ಹೋಗಿದ್ದಾರೆ. ಅಮಿತ್ ಶಾ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಚನ್ನಪಟ್ಟಣದಲ್ಲಿ ಮಾತನಾಡುತ್ತಾ ಬರ ಪರಿಹಾರ ಕೋರಿ ರಾಜ್ಯ ಸರಕಾರ ಮೂರು ತಿಂಗಳ ಮೊದಲು ಮನವಿ ಸಲ್ಲಿಸದೇ ಇರುವುದರಿಂದ ಪರಿಹಾರ ಕೊಡಲಾಗಲಿಲ್ಲ ಎಂದು ಹೇಳಿದ್ದು ಭಾರಿ ಚರ್ಚೆಗೆ ಗ್ರಾಸ ಆಗಿದೆ. ಶಾ ನ ಹೇಳಿಕೆ ಸಮರ್ಥಿಸಲು ಹಣಕಾಸು ಸಚಿವೆ ನಿರ್ಮಲಾ ಸೀತರಾಮನ್ ಬೆಂಗಳೂರಿಗೆ ಧಾವಿಸಿ ಬಂದರು! ಮಾಧ್ಯಮಗೋಷ್ಠಿಯಲ್ಲಿ ಬಿ.ವೈ.ವಿಜಯೇಂದ್ರ ಜೊತೆ ಮಾತನಾಡಿದರು. ಬರ ಪರಿಹಾರ ಸಿಗದಿರುವಲ್ಲಿ ರಾಜ್ಯ ಸರಕಾರದ್ದೇ ಹೊಣೆ ಎಂದಿದ್ದ ಶಾ ನನ್ನು ಸಮರ್ಥಿಸಲು ಕರ್ನಾಟಕದಿಂದಆಯ್ಕೆಯಾಗಿರುವ ಹಣಕಾಸು ಮಂತ್ರಿಗಳೇ ಫೀಲ್ಡಿಗೆ ಇಳಿಸಿದರು. ರಾಜ್ಯದ ಮತ್ತು ಮುಖ್ಯವಾಗಿ ಕರ್ನಾಟಕದ ಜನರ ಬವಣೆಗಳ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದ ಮಂತ್ರಿಯವರು ಶಾನ ಹೇಳಿಕೆ, ಭಾರತ ಒಕ್ಕೂಟ ಸರಕಾರದ ಸೇಡಿನ ನಿರ್ಲಕ್ಷವನ್ನು ಅತ್ಯಂತ ಬಾಲಿಶಃ ಸಮರ್ಥನೆಗಳ ಮೂಲಕ ಮಂಡಿಸಿದರು! ಅದು ಶಾ ಹೇಳಿದ ಸುಳ್ಳುಗಳ ಸಮರ್ಥನೆಯೇ ಆಗಿತ್ತು.

ರಾಜ್ಯಕ್ಕೆ ಅಮಿತ್ ಶಾ ಬರುವ ಸಂದರ್ಭದಲ್ಲಿ ಕೇಂದ್ರ ಸರಕಾರದಿಂದ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ತೀವ್ರವಾದ ಚರ್ಚೆ ನಡೆದಿದ್ದವು. ರಾಜ್ಯಕ್ಕೆ ನ್ಯಾಯ ಸಮ್ಮತವಾಗಿ ಸಲ್ಲಬೇಕಿದ್ದ ಜಿ.ಎಸ್.ಟಿ.ತೆರಿಗೆ ಹಣ, ಬರ ಪರಿಹಾರಕ್ಕೆ ಸಿಗಬೇಕಿದ್ದ ನೈಸರ್ಗಿಕ ವಿಕೋಪ ಪರಿಹಾರ ನಿಧಿ ಮುಂತಾದವುಗಳನ್ನು ನೀಡದೇ ವಂಚಿಸುತ್ತಿರುವ ಬಗ್ಗೆ ತೀವ್ರ ಪ್ರಶ್ನೆಗಳನ್ನು ಎತ್ತಲಾಗಿತ್ತು. ಚುನಾವಣಾ ಪ್ರಚಾರಕ್ಕೆ ಬಂದಿದ್ದ ಅಮಿತ್ ಶಾ ಭಾರತ ಸರಕಾರದ ವಂಚನೆಗಳನ್ನು ಮುಚ್ಚಿಟ್ಟು ಕೊಳ್ಳಲು ರಾಜ್ಯ ಸರಕಾರದ ಮೇಲೆಯೇ ಪ್ರತ್ಯಾರೋಪ ಮಾಡಿ ಸಮರ್ಥಿಸಿಕೊಳ್ಳಲು ಮುಂದಾದರು. ಈ ಭರದಲ್ಲಿ ಹೇಳಿದ ಮಾತುಗಳು ಭಾರೀ ಸುಳ್ಳುಗಳಿಂದ ಕೂಡಿದ್ದವು. ಹಾಗಾದರೆ ಅಮಿತ್ ಶಾ ಹೇಳಿದ ಸುಳ್ಳುಗಳೇನು?



ರಾಜ್ಯಕ್ಕೆ ಬರ ಪರಿಹಾರ ಕೊಡಲು ವಿಳಂಬಕ್ಕೆ ಮುಖ್ಯ ಕಾರಣ ಪರಿಹಾರ ಪಡೆಯಲು ಮೂರು ತಿಂಗಳು ಮೊದಲು ಕೇಂದ್ರಕ್ಕೆ ರಾಜ್ಯ ವಿವರವಾದ ಮನವಿಯನ್ನು ಸಲ್ಲಿಸಿಲ್ಲ ಎಂದರು. ಇದು ನೂರಕ್ಕೆ ನೂರರಷ್ಟು ಸುಳ್ಳು ಆರೋಪವಾಗಿತ್ತು. ಯಾಕೆಂದರೆ ಕಳೆದ 2023 ರ ಅಕ್ಟೋಬರ್ ತಿಂಗಳಿನಲ್ಲೇ ವಿವರವಾದ ಮನವಿಯನ್ನು ಆಗಿರುವ ನಷ್ಟದ ಪ್ರಮಾಣವನ್ನು ಮನಗಾಣಿಸುವ ವರದಿ ಸಮೇತ ಕೋರಿಕೆಯನ್ನು ಮುಖ್ಯಮಂತ್ರಿಗಳು ಸಲ್ಲಿಸಿದ್ದರು. ಕೇಂದ್ರದ ಅಧ್ಯಯನ ತಂಡವೂ ಆ ಮೊದಲು ವರದಿಯನ್ನು ಸಲ್ಲಿಸಿತ್ತು. ಕೋರಿಕೆಯಂತೆ ಸುಮಾರು ರೂ.35,000 ಕೋಟಿ ಸಿಗಬೇಕಿತ್ತು. ಆದರೆ ಆ ಬಗ್ಗೆ ಹಲವು ಬಾರಿ ಮನವಿ ಮಾಡಿದರೂ ಕೇಂದ್ರ ಸರಕಾರ ಏನೊಂದು ಪ್ರತಿಕ್ರಿಯೆಯನ್ನೇ ನೀಡಿರಲಿಲ್ಲ. ಇಂದಿಗೆ ಬಹುತೇಕ ಆರು ತಿಂಗಳು ಕಳೆದೇ ಹೋದವು. ಹೀಗಿರುವಾಗ ಅಮಿತ್ ಶಾ ಎಳ್ಳಷ್ಟೂ ಹಿಂಜರಿಕೆ, ನಾಚಿಕೆ ಇಲ್ಲದೇ ಶುದ್ಧ ಸುಳ್ಳನ್ನು ಹೇಳಿದ್ದರು. ಅದೂ ಸಾವಿರಾರು ಸಾರ್ವಜನಿಕರ ಎದುರೇ ಸುಳ್ಳನ್ನು ಸತ್ಯ ಎನ್ನುವಂತೆ ಹೇಳಲು ಅದೆಷ್ಟು ಧೈರ್ಯ, ಭಂಡತನ!? ಅಲ್ಲಿದ್ದ ಬಿಜೆಪಿಯ ರಾಜ್ಯ ನಾಯಕರು, ಜೆಡಿಎಸ್ ನ ನಾಯಕರು ಬಾಯಿ ಮುಚ್ಚಿ ಇವನ್ನೆಲ್ಲಾ ಕೇಳಿಸಿಕೊಂಡರು. ರಾಜ್ಯದ ಹಿತಕಾಯಲು ಪ್ರಾದೇಶಿಕ ಪಕ್ಷವೇ ಮದ್ದು ಎನ್ನುತ್ತಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರೂ ಅಮಿತ್ ಶಾ ನ ಸುಳ್ಳಿನ ವೈಖರಿಗೆ ತಲೆದೂಗಿ, ತಲೆ ಬಾಗಿಸಿದ್ದರು!

ಬಿಜೆಪಿ ನಾಯಕರಿಗೆ ಆತ್ಮ ಸಾಕ್ಷಿ ಎಂಬುದೊಂದು ಇದೆಯೇ? ಎನ್ನುವ ಪ್ರಶ್ನೆ ಅನೇಕ ಬಾರಿ ಕಾಡದೇ ಇರದು. ಬಹಿರಂಗ ಸಭೆಯಲ್ಲಿ ಅಧಿಕಾರದ ವಂಶ ಪಾರಂಪರ್ಯತೆ, ಪರಿವಾರ್ ವಾದ ಬಗ್ಗೆ ಅಮಿತ್ ಶಾ ಭರ್ಜರಿಯಾಗಿಯೇ ಮಾತನಾಡಿದರು. ಕಾಂಗ್ರೆಸ್ಸಿಗರನ್ನು ಲೇವಡಿ ಮಾಡಿ ವಾಗ್ಝರಿ ಹರಿಸಿದರು. ಆದರೆ ವಿಚಿತ್ರ ಎಂದರೆ ಬಿ.ಎಸ್.ಯಡಿಯೂರಪ್ಪ, ಬಿ.ವೈ.ವಿಜೆಯೇಂದ್ರ, ಕುಮಾರಸ್ವಾಮಿ ಪಕ್ಕದಲ್ಲಿ ಡಾ.ಸಿ.ಎನ್.ಮಂಜುನಾಥ್ ರನ್ನು ಕೂಡಿಸಿಕೊಂಡು ಪರಿವಾರವಾದದ ಬಗ್ಗೆ ಮಾತನಾಡಿದರೆ ನಂಬಬಹುದೇ? ಅದೆಂತಹ ಹಿಪೋಕ್ರಸಿ, ಆತ್ಮ ವಂಚನೆ., ಆಷಾಢಭೂತಿತನ!? ಅಂದರೆ ಏನು ಮಾತನಾಡಿದರೂ ಜನ ಚಪ್ಪಾಳೆ ತಟ್ಟುತ್ತಾರೆ ಎಂಬ ಭಂಡತನವೇ? ●

ನ್ಯಾಯದ ಸೋಗಿನಲ್ಲಿ ಸುಪ್ರೀಂ ಕೋರ್ಟ್ ಗೆ 600 ವಕೀಲರ ಅನ್ಯಾಯದ ಪತ್ರ


2024ರ ಮಾರ್ಚ್ 28ರಂದು 600 ಖ್ಯಾತ ವಕೀಲರು, ಭಾರತದ ಮುಖ್ಯ ನ್ಯಾಯಮೂರ್ತಿ ಸಿಜೆಐ ಡಿ.ವೈ. ಚಂದ್ರಚೂಡ್ ಅವರಿಗೆ ಒಂದು ಪತ್ರ ಬರೆದಿದ್ದಾರೆ. ಒಂದು ಸ್ವಾರ್ಥಪರ ಕೂಟ ನ್ಯಾಯವ್ಯವಸ್ಥೆಯ ಮೇಲೆ ಒತ್ತಡ ಹೇರಲು, ನ್ಯಾಯಾಲಯಗಳಿಗೆ ಅಪಖ್ಯಾತಿ ತರಲು ಪ್ರಯತ್ನಿಸುತ್ತಿದೆ ಎಂದು ಪತ್ರದಲ್ಲಿ ಆರೋಪಿಸಿದ್ದಾರೆ. ಅರ್ಥಹೀನವಾದ ತರ್ಕಗಳು, ಹಳಸಾದ ರಾಜಕೀಯ ಅಜೆಂಡಾಗಳೊಂದಿಗೆ ನ್ಯಾಯಾಲಯಗಳ ಮೇಲೆ ಒತ್ತಡ ಹೇರಲಾಗುತ್ತಿದೆ ಎಂದು ಪತ್ರದಲ್ಲಿ ಟೀಕಿಸಲಾಗಿದೆ. "ರಾಜಕೀಯ ಪ್ರಕರಣಗಳಲ್ಲಿ ಅವರ ಒತ್ತಡ, ನಡೆಗಳು ಅತ್ಯಂತ ಸ್ಪಷ್ಟವಾಗಿ ಕಾಣಿಸುತ್ತಿವೆ. ವಿಶೇಷವಾಗಿ ಪ್ರಮುಖ ನಾಯಕರುಗಳಿಗೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣಗಳಲ್ಲಿ ಇದು ನಡೆಯುತ್ತಿದೆ. ಈ ನಡೆಗಳು ನಮ್ಮ ನ್ಯಾಯಾಲಯಗಳಿಗೆ ನೋವುಂಟು ಮಾಡುತ್ತಿವೆ. ಪ್ರಜಾಪ್ರಭುತ್ವದ ಚೌಕಟ್ಟಿಗೆ ಬೆದರಿಕೆ ಹಾಕುತ್ತಿದ್ದಾರೆ. ನ್ಯಾಯಾಂಗದ ಕಾರ್ಯನಿರ್ವಹಣೆಗೆ ನಿರ್ಣಾಯಕವಾಗಿರುವ ವಿಶ್ವಾಸ ಮತ್ತು ಸೌಹಾರ್ದತೆಯಿಂದ ಕೂಡಿದ ವಾತಾವರಣವು ಅವರ ಕುತಂತ್ರದಿಂದ ಕಲುಷಿತವಾಗುತ್ತಿದೆ. ಇಂತಹ ಉದ್ದೇಶಪೂರ್ವಕವಾದ ಈ ವರ್ಗಗಳು ವಿವಿಧ ರೂಪದಲ್ಲಿ ಕೆಲಸ ಮಾಡುತ್ತಿವೆ. ನ್ಯಾಯಾಲಯಗಳು ಗತಿಸಿಹೋದ ಕಾಲದಲ್ಲಿ ತುಂಬಾ ಉತ್ತಮವಾಗಿದ್ದವೆಂದು ಇಂದಿನ ಪರಿಸ್ಥಿತಿಯನ್ನು ಹೋಲಿಸಿ ತೋರಿಸುತ್ತವೆ. ಇವು ಬೇಕಂತಲೇ ಮಾಡುವ ಪ್ರಕಟಣೆಗಳು ಮಾತ್ರವೇ. ಕೆಲವು ರಾಜಕೀಯ ಪ್ರಯೋಜನಕ್ಕಾಗಿ ಇವೆಲ್ಲವನ್ನು ಮುಂದಿಡಲಾಗುತ್ತದೆ. ನ್ಯಾಯಾಲಯಗಳ ನಿರ್ಧಾರಗಳ ಮೇಲೆ ಪ್ರಭಾವ ಬೀರಲು, ನ್ಯಾಯಾಲಯಗಳನ್ನು ತೊಂದರೆಯಲ್ಲಿ ಸಿಲುಕಿಸಲು ಪ್ರಯತ್ನಿಸುತ್ತಾರೆ. ಕೆಲವು ವಕೀಲರು ಬೆಳಿಗ್ಗೆ ಒಬ್ಬ ರಾಜಕೀಯ ನಾಯಕನ ಪರವಾಗಿ ವಾದಿಸಿ, ರಾತ್ರಿ ಪೂರ ಮಾಧ್ಯಮಗಳ ಮೂಲಕ ನ್ಯಾಯಾಧೀಶರ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಾರೆ. ಈ ಹಿಂದೆ ನ್ಯಾಯಾಲಯಗಳು ಇಂತಹ ಪ್ರಭಾವಗಳಿಗೆ ಸುಲಭವಾಗಿ ಬಲಿಯಾಗಿವೆ ಎಂಬ ಅನಭಿಪ್ರಾಯಗಳನ್ನು ಸೃಷ್ಟಿಸುವ ಮೂಲಕ ಪ್ರಜೆಗಳ ವಿಶ್ವಾಸಕ್ಕೆ ದಕ್ಕೆತರಲು ಕಾರಣವಾಗುತ್ತದೆ. ಹೀಗೆ ಆ ಪತ್ರದಲ್ಲಿ ಹಲವು ಆರೋಪಗಳನ್ನು ಮಾಡಲಾಗಿದೆ.

ಎಚ್ಚರಿಸುವ ದಾಟಿಯಲ್ಲಿ ಪತ್ರ

ಇಷ್ಟಕ್ಕೇ ನಿಲ್ಲದೆ 'ಬೆಂಚ್ ಫಿಕ್ಸಿಂಗ್' (ಪ್ರಕರಣದ ವಿಚಾರಣೆಯು ಬಯಸಿದ ನ್ಯಾಯಮಂಡಳಿಗೆ ಬರುವಂತೆ ಮಾಡಲು) ಎನ್ನುವ ಸಿದ್ಧಾಂತವನ್ನು ಕೂಡಾ ಮುಂದಿಡಲಾಗುತ್ತಿದೆ ಎಂದು ಆ ಪತ್ರದಲ್ಲಿ ಟೀಕಿಸಲಾಗಿದೆ. ಇದು ಅಗೌರವ ಮಾತ್ರವಲ್ಲದೆ ನ್ಯಾಯಾಂಗ ನಿಂದನೆಯೂ ಕೂಡಾ. ಕೆಲವೊಮ್ಮೆ ಇದು ತಪ್ಪು ಮಾಹಿತಿಗೆ, ಸಂಬಂಧಪಟ್ಟ ನ್ಯಾಯಾಧೀಶರ ವಿರುದ್ಧ ಪರೋಕ್ಷ ಆರೋಪಗಳಿಗೆ ಕೂಡಾ ಕಾರಣವಾಗುತ್ತದೆ. ಅವರು ನಮ್ಮ ನ್ಯಾಯಾಲಯಗಳನ್ನು ಕಾನೂನಿನ ನಿಯಮಗಳಿಲ್ಲದ ದೇಶಗಳೊಂದಿಗೆ ಹೋಲಿಸುವವರೆಗೂ ಹೋಗುತ್ತಾರೆ. ಇದು ಬರೀ ಟೀಕೆಗಳು ಮಾತ್ರವಲ್ಲ, ನ್ಯಾಯಾಲಯಗಳ ಮೇಲೆ ನೇರ ದಾಳಿ ಎಂದು ಆ ಪತ್ರ ಬರೆದವರು ಗಂಭೀರವಾಗಿ ವ್ಯಾಖ್ಯಾನಿಸಿದ್ದಾರೆ. ನಮ್ಮ ಮಾತು ತೆಗೆದುಕೊಳ್ಳಿ. ಇಲ್ಲದಿದ್ದರೆ ಇಂತಹ ಹಾದಿಯಲ್ಲಿ ಹೋಗುವ ವಿಧಾನ ನಿರರ್ಥದಾಯಕ ಎಂದು ಎಚ್ಚರಿಸಿದ್ದಾರೆ.

ರಾಜಕಾರಣಿಗಳು ತಾವು ಭ್ರಷ್ಟರೆಂದು ಆರೋಪಿಸಿರುವವರ ಪರವಾಗಿ ನ್ಯಾಯಾಲಯದಲ್ಲಿ ವಾದಿಸುವುದು ಮತ್ತೊಂದು ವಿಪರೀತವಾಗಿದೆ. ನ್ಯಾಯಾಲಯದ ಒಳಗೆ ಮತ್ತು ಹೊರಗೆ ಕೂಡಾ ತಪ್ಪು ಮಾಹಿತಿ ಹರಡುತ್ತಾರೆ. ದೋಷಪೂರಿತ ಚಲನೆಗಳನ್ನು ಮಾಡಲಾಗುತ್ತದೆ. ಅದೂ ಸಹಾ ನಿರ್ಣಾಯಕ ಚುನಾವಣೆಯ ಸಂದರ್ಭದಲ್ಲಿ ಇಂತಹ ಕೆಲಸಗಳನ್ನು ಮಾಡುವುದು ಇನ್ನಷ್ಟು ಸಂದೇಹಾಸ್ಪದವಾಗಿದೆ. 2018–19ರ ಚುನಾವಣೆಯ ಸಂದರ್ಭದಲ್ಲಿಯೂ ಈ ರೀತಿಯ ನಡೆಗಳು ಕಂಡು ಬಂದಿದ್ದು, ಈಗ ನಡೆಯುತ್ತಿರುವುದು ಅದೇಯೇನೋ ಎಂಬ ಭಾವನೆ ಮೂಡಿಸಲು ಆ ಪತ್ರದಲ್ಲಿ ಪ್ರಯತ್ನಿಸಲಾಗಿದೆ. ಇಂಥವರನ್ನು ಮೌನವಾಗಿ ಸಹಿಸಿಕೊಳ್ಳುವ ಸಮಯ ಇದಲ್ಲ ಎಂದು, ಮುಖ್ಯ ನ್ಯಾಯಾಧೀಶರ ನೇತೃತ್ವದಲ್ಲಿ ಸರಿಯಾದ ನಿರ್ದೇಶನಕ್ಕಾಗಿ, ನಿರ್ಣಾಯಕ ನಾಯಕತ್ವಕ್ಕಾಗಿ ತಾವು ಎದುರು ನೋಡುತ್ತಿದ್ದೇವೆ ಎಂದು ಆ ಪತ್ರದ ಕೊನೆಯಲ್ಲಿ ಬರೆದಿದ್ದಾರೆ.

ಒಂದು ವ್ಯವಸ್ಥೆಯನ್ನು ರಕ್ಷಿಸುವ ಹೆಸರಿನಲ್ಲಿ ಅದರ ಮೇಲೆ ದಾಳಿ ನಡೆಸುವುದು ಒಂದು ವಿಚಿತ್ರವಾದ ನಡೆ, ವಿಪರ್ಯಾಸ ಪ್ರಯತ್ನ. ನ್ಯಾಯವನ್ನು, ಧರ್ಮವನ್ನು, ಸಂವಿಧಾನವನ್ನು ರಕ್ಷಿಸಬೇಕಾದ ಸುಪ್ರೀಂ ಕೋರ್ಟ್‌ನ ಸುತ್ತ ಇಷ್ಟೆಲ್ಲಾ ಚಟುವಟಿಕೆಗಳು ನಡೆಯುತ್ತಿದೆ. 600 ಖ್ಯಾತ ವಕೀಲರು, ಭಾರತದ ಮುಖ್ಯ ನ್ಯಾಯಮೂರ್ತಿ ಸಿಜೆಐ ಡಿ.ವೈ. ಚಂದ್ರಚೂಡ್ ಅವರಿಗೆ ಬರೆದ ಪತ್ರ, ನಂತರ ಕೆಲ ಕ್ಷಣಗಳಲ್ಲಿಯೇ ಸ್ವತಃ ದೇಶದ ಪ್ರಧಾನಿ ನರೇಂದ್ರ ಮೋದಿ ಅವರಿಂದ ಮಧ್ಯಪ್ರವೇಶ ಇವುಗಳಿಗೆ ಕೆಲವು ಉದಾಹರಣೆಗಳಾಗಿವೆ. ಹರೀಶ್ ಸಾಳ್ವೆ, ಆದಿಸ್ ಸಿ. ಅಗರ್‌ವಾಲಾ, ಚೇತನ್ ಮಿತ್ತಲ್, ಪಿಂಕಿ ಆನಂದ್, ಹಿತೇಶ್ ಜೈನ್, ಸ್ವರೂಪಮ ಚತುರ್ವೇದಿ ಮತ್ತು ಇತರರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ. 'ನ್ಯಾಯವ್ಯವಸ್ಥೆಗೆ ಅಪಾಯ – ರಾಜಕೀಯ ಮತ್ತು ವೃತ್ತಿಪರವಾದ ಒತ್ತಡಗಳಿಂದ ನ್ಯಾಯವ್ಯವಸ್ಥೆಯ ರಕ್ಷಣೆ' ಎಂದು ಈ ಪತ್ರಕ್ಕೆ ಹೆಸರಿಟ್ಟಿದ್ದಾರೆ.



ಮೋದಿಯವರ ತಕ್ಷಣದ ಬೆಂಬಲದ ಹಿಂದಿನ ರಹಸ್ಯವೇನು?

ಈ ಪತ್ರಕ್ಕೆ ಸಂಬಂಧಿಸಿ ಇನ್ನೂ ಯಾರೂ ಹೆಚ್ಚು ಪ್ರತಿಕ್ರಿಯಿಸುವ ಮುನ್ನವೇ ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರೇ ರಂಗದಲ್ಲಿ ಇಳಿದರು. ಎಲ್ಲ ವ್ಯವಸ್ಥೆಗಳನ್ನು ಹಾಳು ಮಾಡುವ ಅಭ್ಯಾಸ ಕಾಂಗ್ರೆಸ್‌ಗೆ ಇದೆ ಎಂದು ಮೋದಿ 'ಎಕ್ಸ್' (ಟ್ವಿಟ್ಟರ್) ನಲ್ಲಿ ಬರೆದರು. ಅಂದರೆ, ಒಂದು ರೀತಿಯಲ್ಲಿ ನ್ಯಾಯವ್ಯವಸ್ಥೆಗೆ ವಿರುದ್ಧವಾಗಿ ಪ್ರತಿಪಕ್ಷಗಳು ಒಟ್ಟಾಗಿ ಕೆಲಸ ಮಾಡುತ್ತಿವೆ ಎಂಬ ಆರೋಪಿಸಿದರೆನ್ನುವ ಮಾತು. ಅಧೀನ ನ್ಯಾಯಾಂಗವನ್ನು ಕಾಂಗ್ರೆಸ್ ಬಯಸುತ್ತದೆ ಎಂಬ ತುರ್ತುಪರಿಸ್ಥಿತಿ ದಿನಗಳ ಘೋಷಣೆಯನ್ನು ಅವರು ನಿರ್ದಿಷ್ಟವಾಗಿ ಪ್ರಸ್ತಾಪಿಸಿದರು. ಅದಕ್ಕಾಗಿಯೇ 140 ಕೋಟಿ ಭಾರತೀಯರು ಅವರನ್ನು ತಿರಸ್ಕರಿಸುತ್ತಿದ್ದಾರೆ ಎಂದು ಚುನಾವಣೆಯ ಭಾಷೆಯಲ್ಲಿ ಮಾತನಾಡಿದರು. ಇದಕ್ಕೆ ಕಾಂಗ್ರೆಸ್ ಕೂಡ ತಕ್ಷಣ ಸ್ಪಂದಿಸಿದೆ. ಆ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 'ಎಕ್ಸ್'ನಲ್ಲಿ ಬರೆದು ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಲು ಸಂವಿಧಾನವನ್ನು ಹಾಳು ಮಾಡುವುದಕ್ಕಾಗಿ ಮೋದಿ ವಿಶೇಷ ಪ್ರತಿಭೆಯನ್ನು ಸಾಧಿಸಿದ್ದಾರೆ ಎಂದು ವ್ಯಂಗ್ಯವಾಡಿದರು. ನ್ಯಾಯಾಂಗಕ್ಕೆ ಧಕ್ಕೆ ತರುವ ಹಲವು ಕ್ರಮಗಳನ್ನು ಮೋದಿ ಅವರೇ ತೆಗೆದುಕೊಂಡಿದ್ದಾರೆ ಎಂದು ಉದಾಹರಣೆಗಳೊಂದಿಗೆ ಉಲ್ಲೇಖಿಸಿದರು.

2018 ರಲ್ಲಿ, ಇತಿಹಾಸದಲ್ಲಿ ಹಿಂದೆಂದೂ ಕಾಣದ ರೀತಿಯಲ್ಲಿ, ನಾಲ್ವರು ಹಿರಿಯ ನ್ಯಾಯಾಧೀಶರು ನ್ಯಾಯಾಂಗದಲ್ಲಿನ ಬೆಳವಣಿಗೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿ, ಪ್ರಜಾಪ್ರಭುತ್ವ ನಾಶವಾಗಲಿದೆ ಎಂದು ಎಚ್ಚರಿಸಿದರು. ಅವರಲ್ಲಿ ಒಬ್ಬರನ್ನು (ರಂಜನ್ ಗೊಗೊಯ್) ರಾಜ್ಯಸಭೆಗೆ ಕಳುಹಿಸಿರುವುದು ನ್ಯಾಯಾಂಗವನ್ನು ಅಧೀನಗೊಳಿಸುವುದಕ್ಕಾಗಿಯೇ ಅಲ್ಲವೇ ಎಂದು ಖರ್ಗೆ ಪ್ರಶ್ನಿಸಿದರು. ಒಬ್ಬರು ಹೈಕೋರ್ಟ್ ನ್ಯಾಯಾಧೀಶರನ್ನು (ಬಂಗಾಳದಲ್ಲಿ) ನಿಮ್ಮ ಪಕ್ಷದ ಅಭ್ಯರ್ಥಿಯಾಗಿ ನಿಲ್ಲಿಸುವುದು ಏನನ್ನು ಸೂಚಿಸುತ್ತದೆ ಎಂದು ಪ್ರಶ್ನಿಸಿದರು. ನ್ಯಾಯಾಂಗ ನೇಮಕಾತಿ ಆಯೋಗದ ವಿಧೇಯಕ ದೋಷಪೂರಿತವಾಗಿದೆ ಎಂದು ಸುಪ್ರೀಂ ಕೋರ್ಟ್ ರದ್ದುಪಡಿಸುವ ಪರಿಸ್ಥಿತಿ ತಂದವರು ನೀವೇ ಎಂದು ಆಕ್ಷೇಪಿಸಿದರು. ವಾಸ್ತವವಾಗಿ, ಇದು ಈ ಪತ್ರದ ರಹಸ್ಯವೇ ಅದು.

ಸಹಿಸಿಕೊಳ್ಳಲಾಗದ ತೀರ್ಪುಗಳು ಮತ್ತು ಪ್ರತಿಘಟನೆಗಳು

ಮೇಲ್ನೋಟಕ್ಕೆ, ನ್ಯಾಯಾಂಗವನ್ನು ಸಮರ್ಥಿಸುವಂತೆ ಮತ್ತು ಅದನ್ನು ಸಂರಕ್ಷಿಸುವ ಉದ್ದೇಶದಿಂದ ಬರೆದ ಈ ಪತ್ರ ವಾಸ್ತವವಾಗಿ ಸಿಜೆಐ ಸೇರಿದಂತೆ ಇಡೀ ವ್ಯವಸ್ಥೆಗೆ ಬೆದರಿಕೆ ಹಾಕಲು ಬರೆಯಲಾಗಿದೆ. ಚುನಾವಣಾ ಬಾಂಡ್‌ಗಳು ಸೇರಿದಂತೆ ಕೆಲವು ಪ್ರಕರಣಗಳಲ್ಲಿ ಬಂದಿರುವ ಸಂವೇದನಾಶೀಲ ತೀರ್ಪುಗಳು ಈ ಗುಂಪಿಗೆ ಕಂಟಕವಾಗಿ ಮಾರ್ಪಟ್ಟಿವೆ. ಸ್ವತಃ ಗೃಹ ಸಚಿವ ಅಮಿತ್ ಶಾ ಸುಪ್ರೀಂ ಕೋರ್ಟ್ ತೀರ್ಪನ್ನು ಸಂಪೂರ್ಣವಾಗಿ ಗೌರವಿಸುತ್ತೇನೆ ಎಂದು ಹೇಳಿದರೂ, "ಚುನಾವಣಾ ಬಾಂಡ್‌ಗಳನ್ನು ಸಂಪೂರ್ಣವಾಗಿ ರದ್ದುಪಡಿಸುವ ಬದಲು ಅದನ್ನು ಸುಧಾರಣೆ ಮಾಡುವ ಮಾರ್ಗ ತೋರಿಸಬೇಕಿತ್ತು ಎಂದು ನಾನು ಭಾವಿಸುತ್ತೇನೆ" ಎನ್ನುತ್ತಾರೆ. ಪ್ರಾಯೋಗಿಕವಾಗಿ ಮಾಡಿದಾಗ ತಪ್ಪುಗಳಾಗಬಹುದು, ಅಷ್ಟೂ ಸಂಪೂರ್ಣ ತಪ್ಪಾಗಿದ್ದರೆ ಸಮಸ್ಯೆ ಎಂದು ಆರ್‌ಎಸ್‌ಎಸ್ ಮಾರ್ಗದರ್ಶನ ಮಂಡಳಿ ಪ್ರತಿಕ್ರಿಯಿಸಿದೆ. ಚುನಾವಣಾ ಬಾಂಡ್ ಗಳ ಖಜಾನೆ ರಹಸ್ಯ ಒಂದೆಡೆ ಬಹಿರಂಗವಾಗುತ್ತಿದ್ದಂತೆ ಬಿಜೆಪಿ ಮುಖಂಡರು, ಅವರ ಗುರುಗಳು ಈ ರೀತಿ ಮಾತನಾಡುತ್ತಿದ್ದಾರೆ ಎಂದರೆ ಈ ತೀರ್ಪು ಅವರಿಗೆ ಎಷ್ಟು ಸಂಕಷ್ಟ ತಂದೊಡ್ಡಿದೆ ಎಂಬುದು ತಿಳಿಯುತ್ತದೆ.

ರಾಜ್ಯಗಳ ಹಕ್ಕುಗಳ ರಕ್ಷಣೆಗಾಗಿನ ತೀರ್ಪುಗಳು

ರಾಜ್ಯಗಳ ಹಕ್ಕುಗಳಿಗಾಗಿ ಕೇರಳ ಮತ್ತು ತಮಿಳುನಾಡು ತಂದಿದ್ದ ಪ್ರಕರಣಗಳಲ್ಲಿ ಕೂಡಾ ಸುಪ್ರೀಂ ಕೋರ್ಟ್ ಗಟ್ಟಿಯಾದ ತೀರ್ಪುಗಳನ್ನು ನೀಡಿದೆ. ತಮಿಳುನಾಡು ರಾಜ್ಯಪಾಲರಿಗೆ ಆದೇಶ ನೀಡಿತು ಮತ್ತು ರಾಜ್ಯಪಾಲರು ತಾವು ನಿರಾಕರಿಸಿದ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು. ಬಡ ರಾಜ್ಯವಾದ ಕೇರಳ ಆರ್ಥಿಕ ಸವಾಲುಗಳನ್ನು ನಿವಾರಿಸಲು ಹೇಗೆ ಸಹಕರಿಸುತ್ತೀರಿ ಎಂದು ಕೇಂದ್ರ ಸರ್ಕಾರವನ್ನು ಕೋರ್ಟ್ ಪ್ರಶ್ನಿಸಿತು. ತೆಲಂಗಾಣ ಮಾಜಿ ಗವರ್ನರ್ ತಮಿಳಿಸೈಕಿ ಮತ್ತು ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಸಾಂವಿಧಾನಿಕ ಬೆಂಬಲವನ್ನು ನೀಡದ ಕಾರಣಕ್ಕೆ ನ್ಯಾಯಾಧೀಶರು ವಿಷಾದ ವ್ಯಕ್ತಪಡಿಸಿದರು.

ಇನ್ನೂ ಕೆಲವು ಪ್ರಮುಖ ಮಸೂದೆಗಳಿಗೆ ಅಂಕಿತ ಹಾಕಲು ನಿರಾಕರಿಸುತ್ತಿರುವ ರಾಜ್ಯಪಾಲರಿಗೆ ಸಂಬಂಧಿಸಿ ಮತ್ತು ಅವರನ್ನು ನೇಮಿಸುವ ರಾಷ್ಟ್ರಪತಿಗಳು ಮಾರ್ಗದರ್ಶನ ನೀಡಲು ಕೇರಳ ಹೂಡಿರುವ ಇತ್ತೀಚಿನ ಪ್ರಕರಣ ಇಂದಿಗೂ ನಡೆಯುತ್ತಿದೆ. ಮೇಲಾಗಿ ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಅವರ ಬಂಧನ ಸೇರಿದಂತೆ ಹಲವು ವಿರೋಧ ಪಕ್ಷಗಳ ಸರ್ಕಾರಗಳ ನಾಯಕರ ಪ್ರಕರಣಗಳು ಮುಂದೆ ಬರುತ್ತಿವೆ. ಮಾಧ್ಯಮದ ಪ್ರಮುಖರ ಮೇಲೆ ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರ ಮೇಲಿನ ನಿಷೇಧಗಳು

ಪುಟ 10 ಕ್ಕೆ





ಸಿಪಿಐ(ಎಂ) ಅಭ್ಯರ್ಥಿ ಚಿಕ್ಕಬಳ್ಳಾಪುರದಲ್ಲಿ ನಾಮಪತ್ರ ಸಲ್ಲಿಕೆ

ಸುಳ್ಳು ಹೇಳಿದ್ದೆ ಬಿಜೆಪಿಯ ಹತ್ತು ವರ್ಷದ ಸಾಧನೆ–ರಾಘವಲು

ಸುಳ್ಳು ಹೇಳಿದ್ದೆ ಬಿಜೆಪಿಯ ಹತ್ತು ವರ್ಷದ ಸಾಧನೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಬಿ.ವಿ. ರಾಘವಲು ಹೇಳಿದರು. ರಾಘವಲು ಚಿಕ್ಕಬಳ್ಳಾಪುರ ಸಿಪಿಐ(ಎಂ) ಅಭ್ಯರ್ಥಿ ಎಂ.ಪಿ ಮುನಿವೆಂಕಟಪ್ಪ ನಾಮಪತ್ರ ಮತ್ತು ಪ್ರಚಾರಾರ್ಥ ನಡೆದ ಬಹಿರಂಗ ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಾ, ಬಿಜೆಪಿ ಹತ್ತು ವರ್ಷದಲ್ಲಿ ಸುಳ್ಳಿನ ಮನೆ ಕಟ್ಟಿ, ಭ್ರಷ್ಟಾಚಾರದ ಮೂಲಕ ದೇಶವನ್ನು ಹಿಮ್ಮುಖವಾಗಿಸಿದೆ ಎಂದರು. ರಾಘವಲು ಈ ಹತ್ತು ವರ್ಷದಲ್ಲಿ ಜನರ ಸಂಕಷ್ಟಗಳನ್ನು ನಿವಾರಿಸುವ ಯಾವ ಯೋಜನೆಗಳು ಬರಲಿಲ್ಲ. ರೈತರನ್ನು, ಕಾರ್ಮಿಕರನ್ನು, ಕೂಲಿಕಾರರನ್ನು, ದಲಿತರನ್ನು, ಅಲ್ಪಸಂಖ್ಯಾತರನ್ನು ಬಲ ಪಡಿಸದ ಮೋದಿ, ಆದಾನಿ, ಅಂಬಾನಿಯವರ ಆದಾಯವನ್ನು ದುಪ್ಪಟ್ಟುಗೊಳಿಸಿದರು ಎಂದು ಖಾರವಾಗಿ ಮತನಾಡಿದರು.

ಚುನಾವಣಾ ಬಾಂಡ್ ವಿರುದ್ಧ ಕೋರ್ಟ್‌ನಲ್ಲಿ ಹೋರಾಡಿ ಹಗರಣವನ್ನು ಬಯಲಿಗೆಳೆದೆದ್ದು ಸಿಪಿಐ(ಎಂ) ಪಕ್ಷ. ನಾನು ತಿನ್ನೂವುದಿಲ್ಲ, ಬೇರೆಯವರನ್ನು ತಿನ್ನಲು ಬಿಡುವುದಿಲ್ಲ ಎನ್ನುತ್ತಲೆ ಮೋದಿ 8 ಸಾವಿರ ಕೋಟಿ ರೂ. ಗಳ ಚುನಾವಣಾ ಬಾಂಡ್‌ನ್ನು ತಮ್ಮ ಪಕ್ಷಕ್ಕೆ ಕೊಡಿಸಿದರು. ದಾನಿಗಳಿಗೆ, ಇಡಿ, ಐಟಿ, ಸಿಬಿಐ ನಂತಹ ಸಾಂವಿಧಾನಿಕ ಸಂಸ್ಥೆಗಳ ಮೂಲಕ ಹೆದರಿಸಿ ಹಣ ಲೂಟಿ ಮಾಡಿದ್ದಾರೆ ಎಂದರು.

ಧೋರಣೆಯ ವಿಚಾರದಲ್ಲಿ ಕಾಂಗ್ರೆಸ್ ಕೂಡಾ ಅದೇ ರೀತಿ ಇದೆ. ಕರ್ನಾಟಕದಲ್ಲಿ ತೆರಿಗೆ ಅನ್ಯಾಯವಗಿದೆ ಎಂದು ಹೋರಾಟ ಮಾಡಿದ ಕಾಂಗ್ರೆಸ್ ಪಕ್ಷ, ಕೇರಳ ಸರ್ಕರ ಇದೇ ವಿಚಾರದಡಿ ಹೋರಾಟ ಮಾಡಿದಾಗ ಬೆಂಬಲ ನೀಡಲಿಲ್ಲ. ಹಾಗಾಗಿ ಚಿಕ್ಕಬಳ್ಳಾಪುರದಲ್ಲಿ ಸಿಪಿಐ(ಎಂ) ಅಭ್ಯರ್ಥಿಗೆ ನೀವು ಮತಹಾಕಿ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಸಿಪಿಐ(ಎಂ) ಅಭ್ಯರ್ಥಿ ಎಂ.ಪಿ.ಮುನಿವೆಂಕಟಪ್ಪ ಮಾತನಾಡಿ, ಬಿಜೆಪಿ, ಕಾಂಗ್ರೆಸ್ ಗೆ ಜನರ ಕಷ್ಟಗಳನ್ನು ನಿವಾರಿಸಲು ಆಸಕ್ತಿ ಇಲ್ಲ. ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ನೀರಾವರಿ ಸೇರದಂತೆ ನೂರಾರು ಸಮಸ್ಯೆಗಳಿವೆ. ಎರಡು ಪಕ್ಷಗಳಿಂದ ಸಂಸದರಾಗಿ ಹೋದವರು ಈ ಕ್ಷೇತ್ರಕ್ಕೆ ಯಾವುದೆ ಕೊಡುಗೆ ನೀಡಿಲ್ಲ ಎಂದರು. ಜನರ ಬೇಡಿಕೆಯನ್ನಿಟ್ಟುಕೊಂಡು ಸಿಪಿಐ(ಎಂ) ಮಾತ್ರ ಹೋರಾಟ ನಡೆಸಿದೆ. ಶಾಶ್ವತ



ನೀರಾವರಿಗಾಗಿ ಸಿಪಿಐ(ಎಂ) ನಡೆಸಿದ ಹೋರಾಟ ಸರ್ಕಾರದ ಗಮನ ಸೆಳೆದಿತ್ತು. ಪರ್ಯಾಯ ನೀತಿಗಳಿಗಾಗಿ ಸಿಪಿಐ(ಎಂ) ಬೆಂಬಲಿಸಿ, ಜನಪರ ಹೋರಾಟಗಳ ಪ್ರಭಾವ ನನಗೆ ಮತಗಳಾಗಿ ಪರಿವರ್ತನೆ ಆಗಲಿವೆ ಎಂದರು.

ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವರಲಕ್ಷ್ಮಿ ಮಾತನಾಡಿ, ಒಕ್ಕೂಟ ವ್ಯವಸ್ಥೆಯನ್ನು ಹಾಳು ಮಾಡುವ ನೀತಿಗಳ ಮೂಲಕ ಕೇಂದ್ರ ಸರ್ಕಾರ ಸರ್ವಾಧಿಕಾರಿ ಧೋರಣೆ ಮೂಲಕ ಜನರನ್ನು ವಂಚಿಸುತ್ತಿದೆ. ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಪದೆ ಪದೆ ಛೀಮಾರಿ ಹಾಕುತ್ತಿದೆ. ಆದರೂ ಅವರು ಇನ್ನೂ ಬುದ್ದಿ ಕಲಿತಿಲ್ಲ. ಮಹಿಳೆಯರ ಮೇಲೆ ಅತೀ ಹೆಚ್ಚು ದೌರ್ಜನ್ಯ ನಡೆಸಿದ್ದು ಮೋದಿ ಸರ್ಕಾರ. 45 ಕೋಟಿ ಮಹಿಳಾ ಮತದಾರರು ಇದ್ದಾರೆ. ಅವರನ್ನು ಮೆಚ್ಚಿಸುವುದಕ್ಕಾಗಿ ಮೀಸಲಾತಿಯನ್ನು ಮೂಗಿಗೆ ತುಪ್ಪದಂತೆ ಸವರಿದ್ದಾರೆ. ಯುವಕರಿಗೆ ಉದ್ಯೋಗ ನೀಡಲಿಲ್ಲ ಹಾಗಾಗಿ ಜನ ನಿಮ್ಮನ್ನು ಈ ಲೋಕಸಭಾ ಚುನಾವಣೆಯಲ್ಲಿ ಸೋಲಿಸಲಿದ್ದಾರೆ ಎಂದರು.

ಸುಳ್ಳು ಹೇಳಿದ್ದೆ ಬಿಜೆಪಿಯ ಹತ್ತು ವರ್ಷದ ಸಾಧನೆ–ರಾಘವಲು

ರಾಜ್ಯ ಕಾರ್ಯದರ್ಶಿ ಯು.ಬಸವರಾಜ ಮಾತನಾಡಿ, ಕೇಂದ್ರದಲ್ಲಿ ಹತ್ತು ವರ್ಷ ಆಡಳಿತ ನಡೆಸಿದ ಬಿಜೆಪಿ, ಕೋಮುವಾದದ ಮೂಲಕ ಜನರ ಭಾವನೆಗಳನ್ನು ಕೆರಳಿಸಿ ಹಿಂಸೆ, ಗಲಭೆಗಳನ್ನು ಸೃಷ್ಟಿಸಿದೆ. ಇಂತಹ ಸರ್ಕಾರವನ್ನು ಕಿತ್ತೆಸೆಯುವ ಸಮಯ ಬಂದಿದೆ ಎಂದರು. ಸಿಪಿಐ(ಎಂ) ಅಭ್ಯರ್ಥಿಯಾಗಿ ಎಂ.ಪಿ. ಮುನಿವೆಂಕಟಪ್ಪ ನಾಮಪತ್ರ ಸಲ್ಲಿಸಿದರು.

ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಇನ್ನಷ್ಟು ಜನರ ಪರವಾಗಿರುವ ನೀತಿಗಳನ್ನು ರೂಪಿಸಬೇಕಿದೆ. ಗ್ಯಾರಂಟಿಗಳನ್ನು ಜನರಿಗೆ ಸಮರ್ಪಕವಾಗಿ ತಲುಪಿಸಬೇಕು ಎಂದು ಆಗ್ರಹಿಸಿದರು.

ಸಿಪಿಐ(ಎಂ) ಜಿಲ್ಲಾ ಮುಖಂಡ ಡಾ. ಅನಿಲ್ ಕುಮಾರ್ ಮಾತನಾಡಿ, ಬಿಡಿಗಾಸು ಇಲ್ಲದ ಅಭ್ಯರ್ಥಿಯನ್ನು ನಾವು ಕಣಕ್ಕೆ ಇಳಿಸಿದ್ದೇವೆ. ಜನರೆ ನಮ್ಮ ಪಕ್ಷದ ಖರ್ಚನ್ನು ನೀಡಲಿದ್ದರೆ. ಈ ಚುನಾವಣೆಯನ್ನು ಜನರೆ ನಡೆಸಲಿದ್ದಾರೆ. ಈ ಚುನಾವಣೆಯಲ್ಲಿ ಕೋಮುವಾದಿ ಪಕ್ಷ ಬಿಜೆಪಿಯನ್ನು ಸೋಲಿಸಲಿದ್ದಾರೆ. ಸಿಪಿಐ(ಎಂ) ಕುಡಗೋಲು, ಸುತ್ತಿಗೆ ನಕ್ಷತ್ರದ ಗುರುತಿಗೆ ಜನ ಮತಹಾಕಲಿದ್ದಾರೆ ಎಂದರು

ವೇದಿಕೆಯ ಮೇಲೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೀನಾಕ್ಷಿ ಸುಂದರಂ, ಕೆ.ಪ್ರಕಾಶ್, ಗೋಪಾಲಕೃಷ್ಣ ಅರಳಹಳ್ಳಿ, ಮುಖಂಡರಾದ ಚಂದ್ರ ತೇಜಸ್ವಿ, ಗೌರಮ್ಮ, ಮಂಜುನಾಥ್, ರಘುರಾಮ ರೆಡ್ಡಿ, ಜಯರಾಮ ರೆಡ್ಡಿ, ಸಿದ್ದಗಂಗಪ್ಪ ಸೇರಿದಂತೆ ಅನೇಕ ನಾಯಕರು ವೇದಿಕೆಯ ಮೇಲೆ ಇದ್ದರು.

ಠೇವಣಿ ನಿಧಿ ನೀಡಿದ ರೈತ

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿಯ ಠೇವಣಿ ನಿಧಿಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಎನ್. ವೀರಣ್ಣ ದೇವನಹಳ್ಳಿ ನೀಡಿದರು.

25 ಸಾವಿರ ರೂ.ಗಳನ್ನು ದೇಣಿಗೆ ನೀಡಿದ ಅವರು, ರೈತ, ಕಾರ್ಮಿಕ, ಕೂಲಿಕಾರ, ಹಾಗೂ ಜನರಪರವಾಗಿ ಕೆಲಸ ಮಾಡುತ್ತಿರುವ ಏಕೈಕ ಪಕ್ಷ ಸಿಪಿಐ(ಎಂ). ಹಾಗಾಗಿ ನನ್ನ ಕೃಷಿಯಲ್ಲಿ ಸಂಪಾದಿಸಿದ ಹಣವನ್ನು ದೇಣಿಗೆಯಾಗಿ ನೀಡಿದ್ದೇನೆ. ಸಿಪಿಐ(ಎಂ) ಪಕ್ಷ ಚಿಕ್ಕಬಳ್ಳಾಪುರದಲ್ಲಿ ಕಾಂಗ್ರೆಸ್, ಬಿಜೆಪಿಗೆ ತೀವ್ರ ಪೈಪೋಟಿ ನೀಡಲಿದೆ ಎಂದರು.





ಬಿಹಾರ: ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆಯಲ್ಲಿ

ಬಿಹಾರದ ಮಹಾಘಟಬಂಧನ್‌ನ ಪ್ರಮುಖ ಮಿತ್ರಪಕ್ಷಗಳಾದ ಎಡಪಕ್ಷಗಳು, ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲೈಯನ್ಸ್ (ಇಂಡಿಯಾ) ದ ಭಾಗವಾಗಿವೆ. 2024 ರ ಲೋಕಸಭಾ ಚುನಾವಣೆಯಲ್ಲಿ ಬಿಹಾರದಲ್ಲಿ ಎಡಪಕ್ಷಗಳು ಒಂದು ಅಥವಾ ಎರಡು ಸ್ಥಾನಗಳನ್ನು ಗೆಲ್ಲುವ ವಿಶ್ವಾಸದಲ್ಲಿದೆ. ಇದು ಸಂಭವಿಸಿದಲ್ಲಿ, ಬಿಹಾರದಲ್ಲಿ ಲೋಕಸಭೆ ಚುನಾವಣೆಯಲ್ಲಿ ಎಡಪಕ್ಷಗಳು ಸುಮಾರು 25 ವರ್ಷಗಳ ಸೋಲನ್ನು ಮುರಿದುಹಾಕಿದಂತಾಗುತ್ತದೆ.

ಭಾರೀ ಪ್ರಭಾವದೊಂದಿಗೆ, ಎಡ ಪಕ್ಷಗಳಾದ ಸಿಪಿಐ (ಎಂಎಲ್), ಸಿಪಿಐ (ಎಂ) ಮತ್ತು ಸಿಪಿಐ 'ಇಂಡಿಯಾ' ಬ್ಲಾಕ್ ನ ಭಾಗವಾಗಿ 5 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ. ಸಿಪಿಐ(ಎಂ) ಖಗಾರಿಯಾ ಲೋಕಸಭಾ ಕ್ಷೇತ್ರದಿಂದ ಸಂಜಯ್ ಕುಮಾರ್ ಅವರನ್ನು ಕಣಕ್ಕಿಳಿಸಿದೆ. ಸಿಪಿಐ(ಎಂಎಲ್) ಅರಾಹ್ (Arrah), ಕರಕಟ್ ಮತ್ತು ನಳಂದಾ ಈ ಮೂರು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಸಿಪಿಐ ತನ್ನ ಸಾಂಪ್ರದಾಯಿಕ ಭದ್ರಕೋಟೆಯಾದ ಬೇಗುಸರಾಯ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದೆ. ಹಿಂದಿನ ಚುನಾವಣೆಯಲ್ಲಿ ಸಿಪಿಐ ಕನ್ಹಯ್ಯಾ ಕುಮಾರ್ ಅವರನ್ನು ಕಣಕ್ಕಿಳಿಸಿತು, ಅವರು ಈಗ ಕಾಂಗ್ರೆಸ್ ನಾಯಕರಾಗಿದ್ದಾರೆ. ಕನ್ನಯ್ಯ ಕುಮಾರ್ ಬೇಗುಸರಾಯ್ ನಿಂದ ಸ್ಪರ್ಧಿಸಿ ಸೋತಿದ್ದರು. ಮಹಾಘಟಬಂಧನ್ ನ ಭಾಗವಾದ ಎಡ ಪಕ್ಷಗಳು ಬಿಹಾರದಲ್ಲಿ 40 ಸ್ಥಾನಗಳ ಪೈಕಿ ಐದರಲ್ಲಿ ಸ್ಪರ್ಧಿಸುತ್ತಿವೆ. ರಾಷ್ಟ್ರೀಯ ಜನತಾ ದಳ (ಆರ್.ಜೆ.ಡಿ) 26 ಮತ್ತು ಕಾಂಗ್ರೆಸ್ 9 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ.

ಈ ಬಾರಿ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ(ಎನ್.ಡಿ.ಎ.)ವನ್ನು ಸೋಲಿಸುವ ಏಕೈಕ ಗುರಿಯೊಂದಿಗೆ ಎಡಪಕ್ಷಗಳ ಮುಖಂಡರು ಮತ್ತು ಕಾರ್ಯಕರ್ತರು ಕಳೆದ ಒಂದು ತಿಂಗಳಿನಿಂದ ಮೈದಾನಕ್ಕೆ ಇಳಿದು ಪ್ರಚಾರ ನಡೆಸುತ್ತಿದ್ದಾರೆ.

"ಈ ಬಾರಿ ಎಡಪಕ್ಷಗಳು ಕೆಲವು ಸ್ಥಾನಗಳನ್ನು ಗೆಲ್ಲುತ್ತವೆ ಎಂಬುದು ನಮಗೆ ಪುಟ 7 ಕ್ಕೆ

ಬಾಯಲ್ಲಿ ‘ಗರೀಬ್ ಅನ್ನ ಯೋಜನಾ’ ಮಂತ್ರ’, ಕೈಯಲ್ಲಿ ಆಹಾರ ಭದ್ರತೆ ಅನುದಾನ ಕಡಿತ

ಲೋಕಸಭಾ ಚುನಾವಣೆ: ಮುಖ್ಯ ಪ್ರಶ್ನೆಗಳು

ಘೋಷಣೆ

80 ಕೋಟಿ ಜನರಿಗೆ 5 ಕಿಲೋ ಧವಸ ಧಾನ್ಯ ನೀಡುವ ಯೋಜನೆಯನ್ನು ಮುಂದಿನ ಐದು ವರ್ಷಗಳ ಕಾಲಕ್ಕೆ ವಿಸ್ತರಿಸಲಾಗಿದೆ (ಪ್ರಧಾನ ಮಂತ್ರಿ ಬಡವರ ಕಲ್ಯಾಣ ಅನ್ನದ ಯೋಜನೆ–PMGKAY)

ವಾಸ್ತವ

‘ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ’ಯನ್ನು ಉಚಿತವಾಗಿ ರೇಷನ್ ವಿತರಿಸುವಂತೆ ಏಪ್ರಿಲ್ 2020 ರಲ್ಲಿ, ಕೋವಿಡ್–19 ಮಹಾಸಾಂಕ್ರಾಮಿಕದ ಪರಿಣಾಮವಾಗಿ ಉಂಟಾದ ಕಡು ಕಷ್ಟ ಮತ್ತು ಹಸಿವನ್ನು ನೀಗಲು ಎಡ ಪಕ್ಷಗಳು ಮಾಡಿದ ಹಕ್ಕೊತ್ತಾಯಕ್ಕೆ ಪ್ರತಿಕ್ರಿಯೆಯಾಗಿ ಪ್ರಾರಂಭಿಸಲಾಯಿತು. ಈಗಾಗಲೇ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆಯಡಿ ಕಡಿಮೆ ದರದಲ್ಲಿ ಇದ್ದ ರೇಷನ್ ಜೊತೆಗೆ, ಪ್ರತಿ ಕಾರ್ಡುದಾರನಿಗೆ ಹೆಚ್ಚಿನ 5 ಕೆಜಿ ಆಹಾರ ಧಾನ್ಯ ಉಚಿತವಾಗಿ ನೀಡಲು ನಿರ್ಧರಿಸಲಾಯಿತು. ಪರಿಣಾಮವಾಗಿ ಕಾರ್ಡುದಾರರು ಏಪ್ರಿಲ್ 2020 ರಿಂದ ಪ್ರತಿ ವ್ಯಕ್ತಿಗೆ 10 ಕೆಜಿ ರೇಷನ್ ಪಡೆಯಲು ಅರ್ಹರಾದರು. ಈ ಉಚಿತ ರೇಷನ್ ಅನ್ನು ಒಂದು ವರ್ಷಗಳ ಕಾಲ ನೀಡುವುದು ಎಂಬ ನಿರ್ಧಾರವಿತ್ತು.

ನವೆಂಬರ್ 2023 ರಲ್ಲಿ ಸರ್ಕಾರ 80 ಕೋಟಿ ಜನರಿಗೆ 5 ವರ್ಷಗಳ ಕಾಲ ಉಚಿತ ರೇಷನ್ ನೀಡಲಾಗುವುದೆಂದು ಘೋಷಿಸಿತು. ನಿಜದಲ್ಲಿ ಜನರಿಗೆ ರೇಷನ್ ನಿರಾಕರಿಸಲಾಗುತ್ತಿದೆ. ಮೊದಲನೆಯದಾಗಿ, ಕಡಿಮೆ ದರದಲ್ಲಿ ಕಾರ್ಡುದಾರರಿಗೆ ಸಿಗುತ್ತಿದ್ದ ರೇಷನ್ ಅನ್ನು ಈಗ ಸಿಗದಂತೆ ಮಾಡಲಾಗುತ್ತಿದೆ.

ಸರ್ಕಾರಿ ಅಂಕೆ ಸಂಖ್ಯೆಗಳ ಪ್ರಕಾರ 2013 ಮತ್ತು 2021 ರ ನಡುವೆ 4.5 ಕೋಟಿ ರೇಷನ್ ಕಾರ್ಡುಗಳನ್ನು ರದ್ದು ಪಡಿಸಲಾಗಿದೆ. ನಂತರದ ಅವಧಿಯಲ್ಲಿ ಸಹ ರದ್ದು ಆಗುತ್ತಿರುವ ಕಾರ್ಡುಗಳ ಸಂಖ್ಯೆ ಹೆಚ್ಚುತ್ತಲೇ ಇದ್ದರೂ ಸರ್ಕಾರ ನಂತರದಲ್ಲಿನ ಸಂಖ್ಯೆಯನ್ನು ಬಿಡುಗಡೆ ಮಾಡುತ್ತಿಲ್ಲ. ಒಂದು ಅಂದಾಜಿನ ಪ್ರಕಾರ ಕಳೆದ 3 ವರ್ಷಗಳಲ್ಲಿ 1.9 ಕೋಟಿ ಕಾರ್ಡುಗಳನ್ನು ರದ್ದು ಮಾಡಲಾಗಿದೆ.

ವರ್ಷ 2011 ರ ನಂತರ ಜನಗಣತಿ ಮಾಡದೆ ಇರುವುದರಿಂದ ಸುಮಾರು 10 ಕೋಟಿ ಜನರಿಗೆ ಉಚಿತ ರೇಷನ್ ಸಿಗದಿರುವುದು ಒಂದು ಕಡೆಯಾದರೆ, ಅವರಿಗೆ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆಯಡಿಯೂ ರಕ್ಷಣೆ ದೊರೆತಿಲ್ಲ.

ಈ ಯೋಜನೆಗಳಡಿ ನೆರವು ಪಡೆಯಲು ಸಲ್ಲಿಸಿರುವ ದೊಡ್ಡ ಸಂಖ್ಯೆಯ ಅರ್ಜಿಗಳು ವಿಲೇವಾರಿಗೊಳ್ಳದೆ ಇವೆ. ಗುರಿಮಾಡಿದ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಗುಡ್ಡಗಾಡು ಜನರೇ ಹೆಚ್ಚಿನ ಸಂಖ್ಯೆಯಲ್ಲಿರುವ ಜಾರ್ಖಂಡ್ ರಾಜ್ಯದ 7 ಲಕ್ಷ ಅರ್ಜಿಗಳು ಬಾಕಿ ಉಳಿದಿವೆ.

ಸರ್ಕಾರ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆಯಡಿ ಅನುದಾನವನ್ನು ಸತತವಾಗಿ ಕಡಿತ ಮಾಡುತ್ತಿದೆ. ಹಣಕಾಸು ವರ್ಷ 2022–23 ರ ಬಜೆಟ್ಟಿನಲ್ಲಿ 2.12 ಲಕ್ಷ ಕೋಟಿ ರೂಪಾಯಿಗಳ ಅನುದಾನ ಮಂಜೂರು ಮಾಡಲಾಗಿತ್ತು. ನಂತರದ ವರ್ಷ ಅಂದರೆ 2024–25 ಕ್ಕೆ ಈ ಅನುದಾನವನ್ನು 2.05 ಲಕ್ಷ ಕೋಟಿಗೆ ಇಳಿಸಲಾಗಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ಮೋದಿ ಸರ್ಕಾರ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆಯಡಿಯ ಅನುದಾನವನ್ನು ಸರಿಸುಮಾರು ಶೇ 40 ರಷ್ಟು ಕಡಿತ ಮಾಡಿದೆ.

707 ಜಿಲ್ಲೆಗಳಿರುವ ನಮ್ಮ ದೇಶದಲ್ಲಿ ಅಪೌಷ್ಟಿಕತೆ 314 ಜಿಲ್ಲೆಗಳಲ್ಲಿ ಹೆಚ್ಚಾಗಿದೆ!!

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ 125 ರಾಷ್ಟ್ರಗಳಲ್ಲಿ ಭಾರತ 111 ನೇ ಸ್ಥಾನಕ್ಕೆ ಇಳಿದಿದೆ. ನೆರೆ ರಾಷ್ಟ್ರಗಳಾದ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಶ್ರೀಲಂಕಾಗಳಿಗಿಂತ ಕೆಳಗಿನ ಸ್ಥಾನದಲ್ಲಿ ಭಾರತವಿದೆ!! 2014 ರಲ್ಲಿ 76 ರಾಷ್ಟ್ರಗಳಲ್ಲಿ 55 ನೆ ಸ್ಥಾನದಲ್ಲಿದ್ದ ಭಾರತ 2024 ರಲ್ಲಿ 111 ನೇ ಸ್ಥಾನಕ್ಕೆ ಕುಸಿದಿದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5 ರಲ್ಲಿ (ಎನ್.ಎಫ್.ಎಚ್.ಎಸ್.) ಭಾರತದ ಶೇ.30 ಕ್ಕಿಂತ ಹೆಚ್ಚು ಐದು ವರ್ಷದೊಳಗಿನ ಮಕ್ಕಳು ವಯಸ್ಸಿಗಿಂತ ಕಡಿಮೆ ತೂಕದವರಾಗಿದ್ದಾರೆ. ಇಂತಹದ್ದೇ ಸಂಖ್ಯೆಯ ಮಕ್ಕಳು ಅಪೌಷ್ಟಿಕತೆಗೆ



ತುತ್ತಾಗಿದ್ದಾರೆ. ಆರರಿಂದ 59 ತಿಂಗಳುಗಳ ವಯಸ್ಸಿನ ಶೇ 67 ಮಕ್ಕಳು ಮಾರಕವಾದ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಈ ಮಾರಕ ರಕ್ತಹೀನತೆ 15–19 ಪ್ರಾಯದ ಹುಡುಗಿಯರಲ್ಲಿ ಶೇ.59 ರಷ್ಟು ಇದ್ದರೆ, ಸಂತಾನ ಹೊಂದಬಲ್ಲ ಮಹಿಳೆಯರಲ್ಲಿ ಶೇ.57 ಮತ್ತು ಗರ್ಭಿಣಿ ಮಹಿಳೆಯರಲ್ಲಿ ಶೇ.52 ರಷ್ಟು ಇಂತಹ ಮಾರಕ ರಕ್ತಹೀನತೆಯಿಂದ ಬಳಲುತ್ತಿದ್ದಾರೆ.

ಕುಟುಂಬಗಳ ಆಹಾರ ಅಭದ್ರತೆ ಶೇ.21 ರಿಂದ ಶೇ.80 ಕ್ಕೆ 2019–21 ರ ಅವಧಿಯಲ್ಲಿ ಏರಿತು. ಶೇ.62 ಕುಟುಂಬಗಳು ಹೊಸತಾಗಿ ಈ ಅಭದ್ರತೆಗೆ ಸೇರಿದರೆ, ಶೇ.17 ರಷ್ಟು ಕುಟುಂಬಗಳು ಆಹಾರ ಅಭದ್ರತೆಯಲ್ಲೇ ಉಳಿದರು.

ತೀರ ಇತ್ತೀಚಿನ ಒಂದು ವರದಿಯ ಪ್ರಕಾರ ಭಾರತದ 7 ಕೋಟಿ ಮಕ್ಕಳು ದಿನಕ್ಕೆ ಒಂದು ಸರಿಯಾದ ಊಟವೂ ಇಲ್ಲದೆ ಕಳೆಯುತ್ತಿದ್ದಾರೆ.

ಎಡರಂಗ ಆಡಳಿತವಿರುವ ಕೇರಳ, ತನ್ನ ಸಂಪನ್ಮೂಲಗಳಿಂದಲೇ ಸಾರ್ವತ್ರಿಕ ಸಾರ್ವಜನಿಕ ವಿತರಣಾ ವ್ಯವಸ್ಥೆ ನಡೆಸುತ್ತಿದೆ (ರೇಷನ್ ಅಂಗಡಿಗಳಲ್ಲಿ 14 ರೇಷನ್ ಸಾಮಾನುಗಳು ದೊರೆಯುತ್ತವೆ). ಇದಲ್ಲದೆ ಅಲ್ಲಿನ ಸರಕಾರ ಆಹಾರ ಧಾನ್ಯ ಇತ್ಯಾದಿಗಳು ಕಡಿಮೆ ಬೆಲೆಯ ಅಂಗಡಿಗಳಲ್ಲಿ ಕಡಿಮೆ ಬೆಲೆಗೆ ದೊರೆಯುವಂತೆ ನೋಡಿಕೊಳ್ಳುತ್ತಿವೆ. ಇದನ್ನು ದೇಶದಾದ್ಯಂತ ಅನುಷ್ಠಾನ ಗೊಳಿಸುವ ಅವಶ್ಯಕತೆಯಿದೆ.

ಇಂತಹ ವಿಷಮ ಪರಿಸ್ಥಿತಿಯನ್ನು ಸುಧಾರಿಸಲು ಕನಿಷ್ಟ 35 ಕಿಲೋಗಳ ಆಹಾರ ಧಾನ್ಯಗಳನ್ನು ಪ್ರತಿ ಕುಟುಂಬಕ್ಕೆ, ಅಥವಾ 7 ಕೆಜಿ ಪ್ರತಿಯೊಬ್ಬರಿಗೆ, ಅಥವಾ ಎರಡರಲ್ಲಿ ಯಾವುದು ಹೆಚ್ಚೊ ಅದನ್ನು ಗರಿಷ್ಟ ಪ್ರತಿ ಕಿಲೋಗೆ 2 ರೂ. ಗಳಂತೆ ಆಹಾರ ಧಾನ್ಯಗಳನ್ನು ಕೊಡುವ ಅವಶ್ಯಕತೆಯಿದೆ. ಯಾರು ಯಾರಿಗೆ ರೇಷನ್ ಕಾರ್ಡುಗಳ ಅವಶ್ಯಕತೆಯಿದೆಯೋ ಅವರ ಅರ್ಹತೆಗೆ ಅನುಗುಣವಾಗಿ ಕಾರ್ಡುಗಳನ್ನು ನೀಡಬೇಕು.

ಆಹಾರ ಧಾನ್ಯಗಳ ಜೊತೆಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಇತರ ಅವಶ್ಯಕ ಸಾಮಗ್ರಿಗಳಾದ ಅಡಿಗೆ ಎಣ್ಣೆ, ಬೆಲೆ ಕಾಳುಗಳು, ಸಕ್ಕರೆ, ಸೀಮೆ ಎಣ್ಣೆ ಇತ್ಯಾದಿಗಳನ್ನು ಸೀಮಿತ ಬೆಲೆಗಳಲ್ಲಿ ನೀಡಬೇಕು.

ಸಮಗ್ರ ಮಕ್ಕಳ ಅಭಿವೃದ್ದಿ ಯೋಜನೆ (ಐ.ಸಿ.ಡಿ.ಎಸ್) ಮತ್ತು ಮಧ್ಯಾಹ್ನದ ಊಟದ ಯೋಜನೆಯಡಿ ಹೆಚ್ಚಿನ ಅನುದಾನ ನೀಡಿ ಬಿಸಿ ಮತ್ತು ಪೌಷ್ಟಿಕ ಊಟ ದೊರೆಯುವಂತೆ ಮಾಡಬೇಕು. ಬದಲಿಗೆ ಕೇಂದ್ರ ಸರ್ಕಾರ ಬಿಡಿಕಾಸು ನೀಡುತ್ತದೆ ಮತ್ತು ಅದನ್ನು ಸಮಯಕ್ಕೆ ಸರಿಯಾಗಿ ಪಾವತಿಸುವುದಿಲ್ಲ. ಬಡ ಮಕ್ಕಳ ಪೌಷ್ಟಿಕತೆಯ ಮೇಲೆ ಬಹಳ ಅಪಾಯಕಾರಿ ದುಷ್ಪರಿಣಾಮವನ್ನು ಇದು ಬೀರುತ್ತಿದೆ.

ಆಹಾರ ಸುಭದ್ರತೆಯ ಕಾಯಿದೆಯಡಿ ಗರ್ಭಿಣಿ ಮಹಿಳೆಯರಿಗೆ ನೀಡುವ 6000 ರೂಪಾಯಿಗಳನ್ನು ಯಾವುದೇ ಷರತ್ತುಗಳಿಲ್ಲದೆ ನೀಡಿದರೆ ಆಕೆ ಮತ್ತು ಹುಟ್ಟುವ ಮಗು ಇಬ್ಬರೂ ಅವಶ್ಯ ಪೌಷ್ಟಿಕತೆ ಹೊಂದಬಹುದು.

ಸಮಾಜದ ಬಡ ಜನಗಳಾದ ಅಲೆಮಾರಿ ಕೆಲಸಗಾರರು, ಆಶ್ರಯ ಹೀನರು, ವಿಧವೆಯರು ಅಂಗವಿಕಲರುಗಳಿಗೆ ಪುಕ್ಕಟೆ ಅಡುಗೆ ಮನೆಗಳು ಮತ್ತು ಕಡಿಮೆ ದರದ ಕ್ಯಾಂಟೀನುಗಳ ಅವಶ್ಯಕತೆ ಇವೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ ಅದರ ಹರಹನ್ನು ವಿಸ್ತರಿಸುವ ಅವಶ್ಯಕತೆಯಿದೆ. ಆದಿವಾಸಿಗಳು ಮತ್ತು ದೂರದ ಗುಡ್ಡಗಳಲ್ಲಿ ಬದುಕುವ ಬಡ ಸಮುದಾಯಗಳಿಗೆ ರೇಷನ್ ಅಂಗಡಿಗಳು, ಉಚಿತ ಮತ್ತು ಕಡಿಮೆ ದರದ ರೇಷನ್ ಗಳನ್ನು ನೀಡುವ ಅವಶ್ಯಕತೆಯಿದೆ.

ತೀವ್ರವಾಗಿ ಏರುತ್ತಿರುವ ಆಹಾರ ಧಾನ್ಯ, ಅಡುಗೆ ಎಣ್ಣೆ, ಮತ್ತು ಆಹಾರ ಪದಾರ್ಥಗಳ ಬೆಲೆಗಳು ಬಡ ಕುಟುಂಬಗಳ ಮೇಲೆ ಭಯಂಕರ ಪರಿಣಾಮ ಬೀರುತ್ತಿದೆ. ಅವಶ್ಯ ಸರಕು, ಸಾಮಗ್ರಿಗಳ ಬೆಲೆಗಳನ್ನು ಮಧ್ಯ ಪ್ರವೇಶಿಸಿ ಹತೋಟಿ ಮಾಡುವ ಬದಲು ಬಿಜೆಪಿ ಸರ್ಕಾರ ಎಲ್ಲ ತರಹದ ನಿರ್ಬಂಧ ಮತ್ತು ಹತೋಟಿಗಳನ್ನು ತೆಗೆಯುವ ಹುನ್ನಾರ ನಡೆಸಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು ರೇಷನ್ ಅಂಗಡಿಗಳನ್ನು ನೇರ ನಗದು ವರ್ಗಾವಣೆ ವ್ಯವಸ್ಥೆಗೆ ಬದಲಿಸುವುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಡುತ್ತದೆ. ಆದ್ದರಿಂದ ಇದನ್ನು ಪ್ರತಿಭಟಿಸಬೇಕು.

ದೇಶದ ಲಕ್ಷಾಂತರ ಕುಟುಂಬಗಳನ್ನು ಕಾಡುವ ಹಸಿವು ಮತ್ತು ಅಪೌಷ್ಟಿಕತೆ ಬಿಜೆಪಿ ಸರ್ಕಾರದ ಘೋಷಣೆಗಳು ಟೊಳ್ಳು ಎಂಬುದನ್ನು ಸಾಬೀತುಪಡಿಸುತ್ತವೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ ಮತ್ತು ವಿಸ್ತರಿಸಿ!
ಬಿಜೆಪಿ ಯನ್ನು ಸೋಲಿಸಿ!

ಪ್ರಜಾಪ್ರಭುತ್ವ ರಕ್ಷಿಸಿ

ಪಿಎಂಎಲ್ಎ ತೆಗೆದು ಹಾಕಿ; ಇ.ಡಿ. ಬಾಲ ಕತ್ತರಿಸಿ

ಪ್ರಕಾಶ್ ಕಾರತ್

ಲೋಕಸಭೆ ಚುನಾವಣೆಗಾಗಿ ಸಿಪಿಐ(ಎಂ) ಪ್ರಕಟಿಸಿರುವ ಚುನಾವಣಾ ಪ್ರಣಾಳಿಕೆ, ಭಾರತದ ಪ್ರಜಾಪ್ರಭುತ್ವ ಮತ್ತು ನಾಗರಿಕರ ಮೂಲಭೂತ ಹಕ್ಕುಗಳ ಮೇಲೆ ಮಹತ್ವದ ಪರಿಣಾಮ ಬೀರುವಂಥ ಒಂದು ಪ್ರಮುಖ ವಿಷಯವನ್ನು ಪ್ರಸ್ತಾಪಿಸಿದೆ. ಅನುಷ್ಠಾನ ನಿರ್ದೇಶನಾಲಯ(ಇ.ಡಿ.) ಮತ್ತು ಹಣಕಾಸು ಅಕ್ರಮ ವರ್ಗಾವಣೆ ತಡೆ ಕಾನೂನು (ಪಿಎಂಎಲ್ಎ) ವ್ಯಾಪ್ತಿಯಡಿ ಅದು ಹೇಗೆ ಕಾರ್ಯನಿರ್ವಹಿಸುತ್ತದೆ ಎನ್ನುವುದಕ್ಕೆ ಸಂಬಂಧಿಸಿದ ವಿಚಾರ ಅದಾಗಿದೆ.

'ದುರುಪಯೋಗ ತಡೆಗೆ ಪಿಎಂಎಲ್ಎ ಬದಲಿಗೆ ಸೂಕ್ತ ಕಾನೂನು ತರಬೇಕು. ಇ.ಡಿ.ಯ ಕಾನೂನು–ಅನುಷ್ಠಾನ ಅಧಿಕಾರಗಳನ್ನು ಕಿತ್ತು ಹಾಕಬೇಕು' ಎಂದು ಪ್ರಣಾಳಿಕೆ ಹೇಳಿದೆ.

ಪ್ರಜಾಪ್ರಭುತ್ವ ಮತ್ತು ಪ್ರತಿಪಕ್ಷಗಳ ಹಕ್ಕುಗಳ ರಕ್ಷಣೆಯಾಗಬೇಕಾದರೆ ಇದುವೇ ಸಕಾಲಿಕ ಹಾಗೂ ಅಗತ್ಯ ಮದ್ದಾಗಿದೆ. ಪ್ರತಿಪಕ್ಷಗಳ ಅನೇಕಾನೇಕ ನಾಯಕರನ್ನು ಟಾರ್ಗೆಟ್ ಮಾಡಲು ಪಿಎಂಎಲ್ಎಅನ್ನು ಇ.ಡಿ. ಹೇಗೆ ಒಂದು ಆಯುಧವನ್ನಾಗಿ ಬಳಸಿದೆ ಎನ್ನುವುದನ್ನು ನಾವು ನೋಡಿದ್ದೇವೆ. ಲೋಕಸಭೆ ಚುನಾವಣೆಗಳ ಸಂದರ್ಭದಲ್ಲಿ ಇಬ್ಬರು ಮುಖ್ಯಮಂತ್ರಿಗಳನ್ನು –ಹೇಮಂತ್ ಸೊರೇನ್ ಮತ್ತು ಅರವಿಂದ್ ಕೇಜ್ರಿವಾಲ್– ಪಿಎಂಎಲ್ಎ ನಿಯಮಗಳನ್ನು ಅನ್ವಯಿಸಿ ಇ.ಡಿ. ಬಂಧಿಸಿದೆ. ಪಿಎಂಎಲ್ಎ ಕಾನೂನು ಅದರ ಮೂಲ ಉದ್ದೇಶದಿಂದ ಸಂಪೂರ್ಣವಾಗಿ ಪರಿವರ್ತನೆ ಹೊಂದಿದೆ. ವಿಶ್ವ ಸಂಸ್ಥೆಯ ಮಹಾಧಿವೇಶನ 1998ರಲ್ಲಿ ಅಂಗೀಕರಿಸಿದ ಗೊತ್ತುವಳಿಯೊಂದಕ್ಕೆ ಅನುಗುಣವಾಗಿ 2005ರಲ್ಲಿ ಇದನ್ನು ಮೊದಲು ಅಳವಡಿಸಲಾಗಿತ್ತು. ಮಾದಕದ್ರವ್ಯಗಳ ಮಾರಾಟದಿಂದ ಬರುವ ಹಣವನ್ನು ವರ್ಗಾಯಿಸುವುದನ್ನು ಪರಿಣಾಮಕಾರಿಯಾಗಿ ತಡೆಯಲು ವಿಶ್ವ ಸಂಸ್ಥೆ ಗೊತ್ತುವಳಿ ಎಲ್ಲ ಸದಸ್ಯ ರಾಷ್ಟ್ರಗಳಿಗೆ ಕರೆ ನೀಡಿತ್ತು.

ಆದರೆ, ಬರ ಬರುತ್ತಾ ತಿದ್ದುಪಡಿಗಳ ಮೂಲಕ ಪಿಎಂಎಲ್ಎ ಉದ್ದೇಶಗಳನ್ನು ವಿಸ್ತರಿಸುತ್ತಾ ಬರಲಾಯಿತು. ಕಾನೂನನ್ನು ಇನ್ನಷ್ಟು ಬಿಗಿಗೊಳಿಸಲು ಯುಪಿಎ ಸರಕಾರ 2009 ಮತ್ತು 2012ರಲ್ಲಿ ಕೆಲವು ತಿದ್ದುಪಡಿಗಳನ್ನು ತಂದಿತ್ತು. ಆದರೆ, ಬಿಜೆಪಿ ಸರಕಾರ 2018ರಲ್ಲಿ ಅತ್ಯಂತ ಕರಾಳ ನಿಯಮಗಳನ್ನು ತಂದಿತು. ಮಾದಕವಸ್ತುಗಳ (ಡ್ರಗ್ಸ್) ಹಣದ ವರ್ಗಾವಣೆ ಮತ್ತು ಸಂಬಂಧಪಟ್ಟ ಇತರ ಅಪರಾಧಗಳ ವಿರುದ್ಧದ ಈ ಕಾನೂನು ನಿರಂತರ ತಿದ್ದುಪಡಿಗಳಿಂದಾಗಿ ಇತರ ವಿವಿಧ ಅಪರಾಧಗಳನ್ನು ಕೂಡ ನಿರ್ವಹಿಸಲು ಆರಂಭಿಸಿತು. ಭಾರತೀಯ ದಂಡ ಸಂಹಿತೆ (ಇಂಡಿಯನ್ ಪೀನಲ್ ಕೋಡ್–ಐಪಿಸಿ) ಮತ್ತಿತರ ಕಾನೂನುಗಳಲ್ಲಿ ಪಟ್ಟಿ ಮಾಡಲಾದ ಅನೇಕ ಅಪರಾಧಗಳು ಪಿಎಂಎಲ್ಎ ಅಡಿಯಲ್ಲಿ ನಿರ್ವಹಿಸುವ ಅಪರಾಧದ ಭಾಗಗಳಾದವು. ಇದರಿಂದಾಗಿ, ಡ್ರಗ್ಸ್ ಹಣವಾಗಲೀ ಅಥವಾ ಅಕ್ರಮ ಹಣ ವರ್ಗಾವಣೆಗಾಗಲೀ ಸಂಬಂಧವೇ ಇಲ್ಲದ ಅನೇಕ ಅಪರಾಧಗಳಲ್ಲಿ ಕೂಡ ಕ್ರಮ ಕೈಗೊಳ್ಳಲು ಇ.ಡಿ.ಗೆ ಅಪಾರವಾದ ಅಧಿಕಾರ ದೊರೆಕಿದಂತಾಯಿತು.

ಜಾಮೀನಿಗೆ ಸಂಬಂಧಿಸಿದ ನಿಯಮವು ಪಿಎಂಎಲ್ಎ ಕಾನೂನಿನ ಅತ್ಯಂತ ಅಸಹ್ಯಕರ ಅಂಶವಾಗಿದೆ. ಅಪರಾಧ ಸಾಬೀತಾಗುವವರೆಗೆ ಸಂಬಂಧಿತ ವ್ಯಕ್ತಿ ಮುಗ್ಧ (ನಿರಪರಾಧಿ) ಎಂದು ಭಾವಿಸಬೇಕು ಎಂಬುದು ಕ್ರಿಮಿನಲ್ ಕಾನೂನಿನ ಮೂಲಭೂತ ತತ್ವವಾಗಿದೆ. ಆದರೆ, ಆಪಾದಿತರು ಮುಗ್ಧ ಅಥವಾ ಮುಗ್ಧೆ ಎನ್ನುವುದು ನ್ಯಾಯಾಧೀಶ ಅಥವಾ ನ್ಯಾಯಾಧೀಶೆಗೆ ಮನವರಿಕೆ ಆದರಷ್ಟೇ ಅಂಥವರಿಗೆ ಜಾಮೀನು ನೀಡಬಹುದು ಎನ್ನುತ್ತದೆ ಪಿಎಂಎಲ್ಎ ಕಾನೂನಿನ 45ನೇ ಸೆಕ್ಷನ್. ಹೀಗಾಗಿ, ನಿರಪರಾಧಿ ಎಂದು ಸಾಬೀತುಪಡಿಸುವ ಹೊಣೆ ಆಪಾದಿತರ ಮೇಲಿರುತ್ತದೆ. ಈ ಕಾನೂನನ್ನು ಅತ್ಯಂತ ಕರಾಳಗೊಳಿಸಿದ ಎಲ್ಲ ತಿದ್ದುಪಡಿಗಳನ್ನು ನ್ಯಾಯಮೂರ್ತಿ ಖಾನ್ವಿಲ್ಕರ್ ನೇತೃತ್ವದ ಮೂವರು ಸದಸ್ಯರ ಸುಪ್ರೀಂ ಕೋರ್ಟ್ ಪೀಠ ಎತ್ತಿ ಹಿಡಿದಿರುವುದು ದುರದೃಷ್ಟಕರವಾಗಿದೆ.

ಸರಕಾರಿ ನೌಕರರ ಲಂಚ ಅಥವಾ ಇತರ ಅಕ್ರಮಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ನಿರ್ವಹಿಸಲು ಭ್ರಷ್ಟಾಚಾರ ತಡೆ ಕಾನೂನಿದೆ. ಈ ಕಾನೂನಿನಡಿಯ ಅಪರಾಧಗಳನ್ನು ಕೂಡ ಪಿಎಂಎಲ್ಎ ಶೆಡ್ಯೂಲ್ ವ್ಯಾಪ್ತಿಗೆ ತರಲಾಯಿತು. ಇದು, ಚುನಾಯಿತ ಪ್ರತಿನಿಧಿಗಳಾದ ರಾಜಕಾರಣಿಗಳು ಅಥವಾ ಮಂತ್ರಿಗಳ ಬೆನ್ನ ಹಿಂದೆ ಬಿದ್ದು ಅವರ ವಿರುದ್ಧ ಕರಾಳ ಕಾನೂನಿನ ನಿಯಮಗಳಡಿ ಕ್ರಮಕೈಗೊಳ್ಳಲು ಇ.ಡಿ.ಗೆ ಅವಕಾಶ ಕಲ್ಪಿಸಿದೆ. ಸಾಮಾನ್ಯವಾಗಿ ಕೇಂದ್ರೀಯ ತನಿಖಾ ದಳ (ಸಿಬಿಐ) ನಿಭಾಯಿಸುವ ಪ್ರಕರಣಗಳನ್ನು ಕೂಡ ಈಗ ಇ.ಡಿ. ಕೈಗೆತ್ತಿಕೊಳ್ಳುತ್ತಿದೆ. ಬೇರೆ ಬೇರೆ ಕಾನೂನಿನ ವ್ಯಾಪ್ತಿಗೆ ಬರುವಂಥ ಕ್ರಿಮಿನಲ್ ಪಿತೂರಿ, ಕೊಲೆ ಯತ್ನ, ಬಲವಂತದಿಂದ ಹಣ ವಸೂಲಿ, ಅಪಹರಣ ಇತ್ಯಾದಿ ಐಪಿಸಿ ಅಡಿ ಬರುವಂಥ ಹಲವು ಅಪರಾಧಗಳಲ್ಲಿ ಕೂಡ ಇದೀಗ ಇ.ಡಿ. ಮಧ್ಯಪ್ರವೇಶ ಮಾಡಬಹುದಾಗಿದೆ. ಮಾಹಿತಿ ತಂತ್ರಜ್ಞಾನ ಕಾನೂನು ಹಾಗೂ ಇತರ ಹಲವಾರು ಕಾನೂನುಗಳಡಿ ಬರುವ ಪ್ರಕರಣಗಳಲ್ಲಿ ಕೂಡ ಇ.ಡಿ. ಕ್ರಮ ಕೈಗೊಳ್ಳಬಹುದಾಗಿದೆ.

ಹಣಕಾಸು ಸಚಿವಾಲಯದ ಕಂದಾಯ ಇಲಾಖೆಯಡಿ ಒಂದು ಸಂಸ್ಥೆಯಾಗಿ ಆರಂಭವಾದ ಹಾಗೂ ಸಿಬಿಐಗೆ ದೆಹಲಿ ಪೊಲೀಸ್ ಕಾನೂನು ಒದಗಿಸುವಂಥ ಸನದು ಇಲ್ಲವಾದ ಇ.ಡಿ., ಇದೀಗ ಪಿಎಂಎಲ್ಎ ಕೃಪೆಯಿಂದ ಒಂದು ಕಾನೂನಿನ ಲಂಗುಲಗಾಮಿಲ್ಲದ ಸಾಧನವಾಗಿ ಪರಿಣಮಿಸಿದೆ.

ಪೊಲೀಸ್ ಅಧಿಕಾರಿಗಳು ನಡೆಸುವಂಥ ಸಿಬಿಐನಂತಲ್ಲದೆ ಭಾರತೀಯ ಕಂದಾಯ ಸೇವೆ (ಐಆರ್‌ಎಸ್) ಅಥವಾ ಇತರೆ ನಾಗರಿಕ ಸೇವೆ ಅಧಿಕಾರಿಗಳು ಇ.ಡಿ.ಯ ಸಿಬ್ಬಂದಿಯಾಗಿರುತ್ತಾರೆ. ಹೀಗಾಗಿ, ಪೊಲೀಸ್ ಅಧಿಕಾರಿಗಳು ಕೆಲಸ ಮಾಡಲು ಇರುವಂಥ ಮಿತಿಗಳು ಇ.ಡಿ. ಅಧಿಕಾರಿಗಳಿಗೆ ಇರುವುದಿಲ್ಲ. ಉದಾಹರಣೆಗೆ, ಇ.ಡಿ. ಅಧಿಕಾರಿ ದಾಖಲಿಸಿದ ಆಪಾದಿತರೊಬ್ಬರ ಹೇಳಿಕೆಯನ್ನು ಕೋರ್ಟ್‌ಗೆ ಸಲ್ಲಿಸಬಹುದಾಗಿದೆ. ಆದರೆ ಐಪಿಸಿ ನಿಯಮಗಳಡಿ ಕೆಲಸ ಮಾಡುವ ಪೊಲೀಸ್ ಅಧಿಕಾರಿಗಳು ಹಾಗೆ ಮಾಡುವಂತಿಲ್ಲ. ಅವರು ಪೊಲೀಸ್ ಅಧಿಕಾರಿಗಳಲ್ಲವಾದ ಕಾರಣ ಅವರು ಹಾಗೆ ಮಾಡಬಹುದೆಂದು ಇ.ಡಿ.ಯ ಈ ಅಧಿಕಾರವನ್ನು ಸುಪ್ರೀಂ ಕೋರ್ಟ್ ತೀರ್ಪು ಎತ್ತಿ ಹಿಡಿದಿದೆ.


ಆಳುವ ಪಕ್ಷದ ರಾಜಕೀಯ ವಿರೋಧಿಗಳನ್ನು ಟಾರ್ಗೆಟ್ ಮಾಡಿ ಕಾಡಿಸುವುದಕ್ಕಷ್ಟೇ ಇ.ಡಿ. ಪಾತ್ರ ಸೀಮಿಗೊಂಡಿಲ್ಲ. ಚುನಾವಣಾ ಬಾಂಡ್ ಯೋಜನೆಗೆ ಸಂಬಂಧಿಸಿ ಇತ್ತೀಚೆಗೆ ಬಹಿರಂಗವಾದ ಅಂಶಗಳು ಇ.ಡಿ.ಯ ಇನ್ನೂ ಕರಾಳ ಮುಖವನ್ನು ಬಯಲುಗೊಳಿಸಿದೆ. ಚುನಾವಣಾ ಬಾಂಡ್ ಮೂಲಕ ಬಿಜೆಪಿಗೆ ದೇಣಿಗೆ ನೀಡುವಂತೆ ಕಂಪನಿಗಳು ಮತ್ತು ವ್ಯಾಪಾರೋದ್ಯಮಿಗಳನ್ನು ಬೆದರಿಸಲು ಹಾಗೂ ಬಲವಂತಪಡಿಸಲು ಇ.ಡಿ.ಯನ್ನು ಬಳಸಿಕೊಳ್ಳಲಾಗಿದೆ. ಬ್ಲಾಕ್‌ಮೇಲ್ ಮತ್ತು ಸುಲಿಗೆಗೆ ಸರಕಾರಿ ಸಂಸ್ಥೆಯೊಂದನ್ನು ಈ ರೀತಿಯಾಗಿ ನಗ್ನವಾಗಿ ಬಳಸಿಕೊಂಡಿರುವುದರಿಂದ ಅದರಲ್ಲಿ ಒಳಗೊಂಡಿರುವವರನ್ನು ಶಿಕ್ಷಿಸುವಂತಾಗಬೇಕು.

ಆದ್ದರಿಂದ, ಚುನಾವಣಾ ಪ್ರಣಾಳಿಕೆಯಲ್ಲಿ ಸಿಪಿಐ(ಎಂ) ಮಂಡಿಸಿರುವ ಪ್ರಸ್ತಾಪನೆಯು ಅತ್ಯಂತ ಸಕಾರಣವಾಗಿದೆ ಹಾಗೂ ಪ್ರಸ್ತುತವಾಗಿದೆ. ಮೊದಲನೆಯದಾಗಿ, ಪಿಎಂಎಲ್ಎಯನ್ನು ತೆಗೆದು ಹಾಕಬೇಕು ಹಾಗೂ ಮಾದಕದ್ರವ್ಯ ಹಣವನ್ನು ಮತ್ತು ಅಂತಾರಾಷ್ಟ್ರೀಯ ಪರಿಣಾಮ ಹೊಂದಿರುವಂಥ ಅಕ್ರಮ ಹಣ ವರ್ಗಾವಣೆ ಪ್ರಕರಣಗಳನ್ನು ಕಠಿಣವಾಗಿ ನಿಭಾಯಿಸುವಂಥ ಒಂದು ಹೊಸ ಕಾನೂನನ್ನು ರಚಿಸಬೇಕು.

ಎರಡನೆಯದಾಗಿ, ಅನುಷ್ಠಾನ ನಿರ್ದೇಶನಾಲಯದ ಬಾಲವನ್ನು ಕತ್ತರಿಸಬೇಕು. ತನಿಖೆ ನಡೆಸುವ ಹಾಗೂ ಕಾನೂನನ್ನು ಅನುಷ್ಠಾನಗೊಳಿಸುವ ಅಧಿಕಾರವುಳ್ಳ ಸಂಸ್ಥೆಯಾಗಿ ಅದು ಕಾರ್ಯ ನಿರ್ವಹಿಸಬಾರದು. ಡ್ರಗ್ಸ್ ಹಣ ಹರಿದು ಬರುವುದು ಹಾಗೂ ಅಂತಾರಾಷ್ಟ್ರೀಯ ಅಕ್ರಮ ಹಣ ವರ್ಗಾವಣೆ ವಿಚಾರಗಳ ಮೇಲೆ ನಿಗಾ ಇಡುವ ಕಂದಾಯ ಇಲಾಖೆಯ ಒಂದು ಇಲಾಖಾ ಸಂತೆಯಾಗಿಯಷ್ಟೇ ಅದರ ಅಧಿಕಾರವನ್ನು ಮರಳಿ ಸೀಮಿತಗೊಳಿಸಬೇಕು. ಅದು ಸಂಗ್ರಹಿಸುವ ಗುಪ್ತಚರ ಮತ್ತು ಇತರ ಮಾಹಿತಿಯನ್ನು ಕ್ರಮಕ್ಕಾಗಿ ಸಿಬಿಐನಂಥ ಸಂಬಂಧಪಟ್ಟ ಕಾನೂನು ಅನುಷ್ಠಾನ ಸಂಸ್ಥೆಗಳಿಗೆ ವರ್ಗಾಯಿಸಬೇಕು.

ದೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಜನತಾಂತ್ರಿಕ ಹಕ್ಕುಗಳ ಮರುಸ್ಥಾಪನೆಯಾಗಲು ಈ ಎರಡು ಕಾರ್ಯಭಾರಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ಅನು: ವಿಶ್ವ



ಬಿಹಾರ: ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆಯಲ್ಲಿ........ ಪುಟ 5 ರಿಂದ

ಖಚಿತವಾಗಿದೆ. ನಿರುದ್ಯೋಗ, ಬೆಲೆ ಏರಿಕೆ, ಹೆಚ್ಚುತ್ತಿರುವ ಅಸಮಾನತೆ ಮತ್ತು ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿಯ ಬಗ್ಗೆ ಜನರು ಅಸಮಾಧಾನ ಮತ್ತು ಕೋಪಗೊಂಡಿದ್ದಾರೆ" ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಲಾಲನ್ ಚೌಧರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

1999 ರ ಲೋಕಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿ ಸುಬೋಧ್ ರೈ ಭಾಗಲ್ಪುರ ಕ್ಷೇತ್ರದಿಂದ ಗೆದ್ದಿದ್ದೇ, ಬಿಹಾರದಿಂದ ಲೋಕಸಭೆಗೆ ಬಂದ ಕೊನೆಯ ಎಡ ಪಕ್ಷದ ಅಭ್ಯರ್ಥಿ. ಅದರ ನಂತರ ಎಡಪಕ್ಷಗಳು 2004, 2009, 2014 ಮತ್ತು 2019 ರ ಚುನಾವಣೆಗಳಲ್ಲಿ ಗೆಲುವು ಸಾಧಿಸಲು ವಿಫಲವಾದವು.

ಎಡಪಕ್ಷಗಳ 14 ಶಾಸಕರಿದ್ದಾರೆ

ಬಿಹಾರದ ವಿಧಾನಸಭೆಯಲ್ಲಿ ಸಿಪಿಐ(ಎಂಎಲ್) 11, ಸಿಪಿಐ(ಎಂ) 2 ಮತ್ತು ಸಿಪಿಐ 2 ಶಾಸಕರುಗಳನ್ನು ಹೊಂದಿವೆ. ಸಿಪಿಐ(ಎಂಎಲ್) ಹೊಂದಿರುವ ಪ್ರಬಲ ರಾಜಕೀಯ ಶಕ್ತಿಯಾಗಿ ಗುರುತಿಸಲ್ಪಟ್ಟಿದೆ ಮತ್ತು ವಿವಿಧ ಜಿಲ್ಲೆಗಳಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಗಮನಾರ್ಹ ಬೆಂಬಲವನ್ನು ಹೊಂದಿದೆ. ಪಕ್ಷ ಐದು ಸ್ಥಾನಗಳಿಗೆ ಬೇಡಿಕೆ ಇಟ್ಟಿತ್ತು. ಸಿಪಿಐ(ಎಂ) ನಾಲ್ಕು ಸ್ಥಾನಗಳಿಗೆ ಮತ್ತು ಸಿಪಿಐ ಮೂರು ಸ್ಥಾನಗಳಿಗೆ ಇಟ್ಟಿತ್ತು.

ಸಾಂಪ್ರದಾಯಿಕವಾಗಿ, ಎಡಪಕ್ಷಗಳು ಬಿಹಾರದಲ್ಲಿ ಗಣನೀಯ ಅಸ್ತಿತ್ವವನ್ನು ಹೊಂದಿದ್ದು, ಸಿಪಿಐ ಪ್ರಬಲ ರಾಜಕೀಯ ಶಕ್ತಿಯಾಗಿದೆ ಎಂದು ಎಡ ಪಕ್ಷದ ನಾಯಕರು ವಾದಿಸುತ್ತಾರೆ. ಈಗಲೂ ಸಹ, ಎಡಪಕ್ಷಗಳು ಪ್ರತಿಭಟನೆಗಳು ಮತ್ತು ರ‍್ಯಾಲಿಗಳ ಸಮಯದಲ್ಲಿ ಸಾಕಷ್ಟು ಗೋಚರವಾಗುವ ಕೆಲವು ಭದ್ರಕೋಟೆಗಳು ಮತ್ತು ಸಾಮಾಜಿಕ ಬೆಂಬಲ ನೆಲೆಗಳನ್ನು ಹೊಂದಿವೆ.

ಇಲ್ಲಿಯ ರಾಜಕೀಯ ವೀಕ್ಷಕರು ಹೇಳುವಂತೆ ಎಡಪಕ್ಷಗಳು ಒಟ್ಟಾರೆಯಾಗಿ ಕನಿಷ್ಠ ಒಂದು ಡಜನ್ ಲೋಕಸಭಾ ಸ್ಥಾನಗಳಲ್ಲಿ ಬಲವಾದ ಬೆಂಬಲವನ್ನು ಹೊಂದಿವೆ, ಅಲ್ಲಿ ಅವರು ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರಬಹುದು. ಕೆಲವು ಸ್ಥಾನಗಳಲ್ಲಿ ಯಾವುದೇ ಅಭ್ಯರ್ಥಿಯ ಪರವಾಗಿ ಅಥವಾ ವಿರುದ್ಧವಾಗಿ ಸಮತೋಲನವನ್ನು ರೂಪಿಸುವಲ್ಲಿ ಎಡಪಕ್ಷಗಳ ಮಹತ್ವವನ್ನು ಅವರು ಸೂಚಿಸುತ್ತಾರೆ.

ಲೋಕಸಭೆ ಚುನಾವಣೆ–2024 ಪ್ರಣಾಳಿಕೆ: ದೇಶದ ಮತದಾರರಿಗೆ ಸಿಪಿಐ(ಎಂ) ಮನವಿ

ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಬಲವನ್ನು ಹೆಚ್ಚಿಸಿ
ಕೇಂದ್ರದಲ್ಲಿ ಪರ್ಯಾಯ ಜಾತ್ಯತೀತ ಸರ್ಕಾರ ರಚನೆಗೆ ಪ್ರಯತ್ನ
ಸಂವಿಧಾನ ಮತ್ತು ರಾಜ್ಯಗಳ ಹಕ್ಕುಗಳ ರಕ್ಷಣೆ
ಯುಎಪಿಎ ರೀತಿಯ ಕಠಿಣ ಕಾನೂನುಗಳನ್ನು ರದ್ದುಗೊಳಿಸುವುದು
ಚುನಾವಣಾ ಪ್ರಣಾಳಿಕೆಯಲ್ಲಿ ಜನರಿಗೆ ಸಿಪಿಐ(ಎಂ) ಕರೆ

ನವದೆಹಲಿ: ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳನ್ನು ಸೋಲಿಸಲು, ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳನ್ನು ಬಲಪಡಿಸಲು ಮತ್ತು ಕೇಂದ್ರದಲ್ಲಿ ಪರ್ಯಾಯ ಜಾತ್ಯತೀತ ಸರ್ಕಾರ ರಚನೆಗೆ ಸಿಪಿಐ(ಎಂ) ಕರೆ ನೀಡಿದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿಯವರು ಪೊಲಿಟ್‌ಬ್ಯೂರೊ ಸದಸ್ಯರಾದ ಪ್ರಕಾಶ್ ಕಾರಟ್, ಬೃಂದಾಕಾರಟ್, ನೀಲೋತ್ಪಾಲ್ ಬಸು ಮತ್ತು ಇತರರೊಂದಿಗೆ ಗುರುವಾರ ನಡಿಕಾದಲ್ಲಿ ಲೋಕಸಭೆ ಚುನಾವಣೆಯ ಸಿಪಿಐ(ಎಂ) ಚುನಾವಣಾ ಯೋಜನೆಯನ್ನು ಬಿಡುಗಡೆ ಮಾಡಿದರು. ಪ್ರಣಾಳಿಕೆಯು ಜನರ ಪರ ಮತ್ತು ಜನರ ಪರ್ಯಾಯ ನೀತಿಗಳನ್ನು ವಿವರಿಸಿದೆ.

ಜಾತ್ಯತೀತ, ಪ್ರಜಾಸತ್ತಾತ್ಮಕ ಭಾರತೀಯ ಗಣರಾಜ್ಯದ ಅಸ್ತಿತ್ವಕ್ಕೆ ಧಕ್ಕೆ ತಂದಿರುವ ಕೇಂದ್ರದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ದಶಕದ ಆಡಳಿತದ ಹಿನ್ನೆಲೆಯಲ್ಲಿ 2024 ರ ಲೋಕಸಭೆ ಚುನಾವಣೆ ನಡೆಯುತ್ತಿದೆ. ಇಂದು, ಭಾರತವು ಸಂವಿಧಾನದ ನಾಲ್ಕು ಸ್ತಂಭಗಳಾದ ಜಾತ್ಯತೀತ ಪ್ರಜಾಪ್ರಭುತ್ವ, ಆರ್ಥಿಕ ಸಾರ್ವಭೌಮತ್ವ, ಒಕ್ಕೂಟ ತತ್ವ ಮತ್ತು ಸಾಮಾಜಿಕ ನ್ಯಾಯದ ವ್ಯವಸ್ಥಿತ ವಿನಾಶಕ್ಕೆ ಸಾಕ್ಷಿಯಾಗಿದೆ. ಸಂಸತ್ತಿನಲ್ಲಿ ಆಡಳಿತ ಯಂತ್ರವನ್ನು ಮತ್ತು ಅದರ ಬಹುಮತವನ್ನು ದುರುಪಯೋಗಪಡಿಸಿಕೊಂಡು, ನಿರಂಕುಶ ಮತ್ತು ಮತಾಂಧ ಮೋದಿ ಸರ್ಕಾರವು ದೇಶದಲ್ಲಿ ಕಾರ್ಮಿಕರ ಹಕ್ಕುಗಳನ್ನು ನಾಶಮಾಡಲು ಫ್ಯಾಸಿಸ್ಟ್ ವಿಧಾನಗಳನ್ನು ಬಳಸುತ್ತಿದೆ. ಹೀಗೆ ಭಾರತವನ್ನು ವಿಶ್ವದ ಅತ್ಯಂತ ಅಸಮಾನ ಸಮಾಜಗಳಲ್ಲಿ ಒಂದನ್ನಾಗಿ ಮಾಡಿದೆ. ಮತ್ತೊಂದೆಡೆ, ಅದು ತನ್ನ ವಿಷಪೂರಿತ ಮತಾಂಧ ಸಿದ್ಧಾಂತಗಳನ್ನು ಬಳಸಿಕೊಂಡು ಜನರನ್ನು ಧಾರ್ಮಿಕ ಮಾರ್ಗಗಳಲ್ಲಿ ವಿಭಜಿಸುತ್ತಿದೆ. ಈ ಹಿನ್ನೆಲೆಯಲ್ಲಿ 18ನೇ ಲೋಕಸಭೆಗೆ ನಡೆಯುವ ಚುನಾವಣೆ ಬಹುಮುಖ್ಯ ಆದ್ಯತೆಯಾಗಿ ಪರಿಣಮಿಸಿದೆ. ಭಾರತದ ಸಂವಿಧಾನದ ಮೂಲಕ ಕಡ್ಡಾಯವಾಗಿ ಭಾರತ ಗಣರಾಜ್ಯದ ಜಾತ್ಯತೀತ, ಪ್ರಜಾಸತ್ತಾತ್ಮಕ ಸ್ವರೂಪವನ್ನು ಕಾಪಾಡಲು, "ನಾವು ಜನರು" ನಮ್ಮ ಮತದಿಂದ ಚುನಾವಣೆಯ ಫಲಿತಾಂಶವನ್ನು ನಿರ್ಧರಿಸಬೇಕು. ನಾವು ಅದರಲ್ಲಿ ಯಾವುದೇ ತಪ್ಪನ್ನು ಮಾಡಬಾರದು – ಭಾರತೀಯ ಗಣರಾಜ್ಯದ ಜಾತ್ಯತೀತ, ಪ್ರಜಾಸತ್ತಾತ್ಮಕ ಸ್ವರೂಪವನ್ನು ಬಿಜೆಪಿಯು ನಿರಂಕುಶ, ಫ್ಯಾಸಿಸ್ಟ್, ಹಿಂದುತ್ವದ ಕ್ರೋಧ, ಅಸಹಿಷ್ಣುತೆ, ದ್ವೇಷ ಮತ್ತು ಹಿಂಸೆಯ ರಾಷ್ಟ್ರವಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದೆ. ಇದು ಬಿಜೆಪಿಯ ಮಾತೃಸಂಸ್ಥೆಯಾದ ಆರ್‌ಎಸ್‌ಎಸ್‌ನ ಬಹಿರಂಗ ಘೋಷಿತ ಗುರಿಯಾಗಿದೆ, ಇದು ದೇಶದ ಪ್ರತಿಯೊಂದು ವ್ಯವಸ್ಥೆಯನ್ನು ಊಹಿಸಲಾಗದ ರೀತಿಯಲ್ಲಿ ನುಸುಳಿ ತನ್ನ ಮತಾಂಧ ವಿಷವನ್ನು ಭಾರತದ ಜನರ ನರನಾಡಿಗಳಲ್ಲಿ ಹರಡುತ್ತಿದೆ. ಆ ಪ್ರಯತ್ನಗಳ ವಿರುದ್ಧ ಭಾರತವನ್ನು ರಕ್ಷಿಸಲು ಈ ಲೋಕಸಭೆ ಚುನಾವಣೆ ನಡೆಯುತ್ತಿದೆ.

ಕಳೆದ ಲೋಕಸಭಾ ಚುನಾವಣೆಯ ನಂತರದ ಈ ಐದು ವರ್ಷಗಳಲ್ಲಿ ಭಾರತದಾದ್ಯಂತ ಕಾರ್ಮಿಕರು, ರೈತರು, ಆದಿವಾಸಿಗಳು, ದಲಿತರು, ಮಹಿಳೆಯರು, ಯುವಕರು ಮತ್ತು ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹೋರಾಟಗಳ ಮೂಲಕ ಅನೇಕ ಹೋರಾಟಗಳನ್ನು, ಪ್ರಬಲ ಪ್ರತಿರೋಧವನ್ನು ಕಂಡಿದೆ. ಜನರು ಒಗ್ಗಟ್ಟಾಗಿ ಹೋರಾಡಿದರೆ ಈ ಹೋರಾಟಗಳು ಈ ಸರ್ಕಾರದ ದಬ್ಬಾಳಿಕೆ ಮತ್ತು ಅಧಿಕಾರಗಳಿಗೆ ಸವಾಲು ಒಡ್ಡಿ ಸೋಲಿಸಬಲ್ಲವು ಎಂಬುದು ಇದರಿಂದ ಸಾಬೀತಾಗಿದೆ. ಅದರಲ್ಲೂ ರೈತರ ಐತಿಹಾಸಿಕ ಹೋರಾಟ ಇದನ್ನು ಸಾಬೀತುಪಡಿಸಿದೆ. ಅದೇ ಅವಧಿಯಲ್ಲಿ, ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ಚಳವಳಿ (ಎಲ್‌ಡಿಎಫ್) ಸರ್ಕಾರವು ಜಾರಿಗೆ ತಂದ ಪರ್ಯಾಯ ನೀತಿಗಳನ್ನೂ ನಾವು ನೋಡಿದ್ದೇವೆ. ಕೇರಳದ ಎಲ್‌ಡಿಎಫ್ ಸರ್ಕಾರವು ಆರ್ಥಿಕವಾಗಿ ಸೊರಗಿಸುವ ಕೇಂದ್ರದ ಪ್ರಯತ್ನಗಳ ಹೊರತಾಗಿಯೂ ಜನಪರ ನೀತಿಗಳು ಮತ್ತು ಕೋಮು ಸೌಹಾರ್ದತೆಯ ಭರವಸೆಯ ಕಿರಣವಾಗಿ ಹೊರಹೊಮ್ಮಿದೆ.



ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳನ್ನು ಸೋಲಿಸುವುದು ಪ್ರತಿಯೊಬ್ಬ ದೇಶಭಕ್ತನ ಕರ್ತವ್ಯ ಎಂಬ ಸ್ಪಷ್ಟ ತಿಳುವಳಿಕೆಯೊಂದಿಗೆ ಸಿಪಿಐ(ಎಂ) ತನ್ನ ಚುನಾವಣಾ ಯೋಜನೆಯನ್ನು ಭಾರತದ ಜನತೆಗೆ ಪ್ರಸ್ತುತಪಡಿಸುತ್ತಿದೆ. ಈ ಒಕ್ಕೂಟದ ಜನಾದೇಶವನ್ನು ಬಲಪಡಿಸಲು ಮತ್ತು ಕೇಂದ್ರದಲ್ಲಿ ಜಾತ್ಯತೀತ ಸರ್ಕಾರವನ್ನು ರಚಿಸಲು ಸಹಾಯ ಮಾಡಲು ಸಿಪಿಐ(ಎಂ) ತನ್ನ ಕೈಲಾದಷ್ಟು ಮಾಡುವುದಾಗಿ ಪ್ರತಿಜ್ಞೆ ಮಾಡಿದೆ. ಇದಕ್ಕಾಗಿ, ಜನಪರ ನೀತಿಗಳನ್ನು ಖಚಿತಪಡಿಸಿಕೊಳ್ಳಲು ಸಿಪಿಐ(ಎಂ) ಸಂಸತ್ತಿನಲ್ಲಿ ಪ್ರಬಲ ಅಸ್ತಿತ್ವವನ್ನು ಹೊಂದಿರುವುದು ಅನಿವಾರ್ಯವಾಗಿದೆ.

ರಾಜಕೀಯ, ಪ್ರಭುತ್ವ, ಸರ್ಕಾರ ಮತ್ತು ಆಡಳಿತದಿಂದ ಧರ್ಮವನ್ನು ಬೇರ್ಪಡಿಸುವ ತತ್ವಕ್ಕೆ ತನ್ನ ಬದ್ಧತೆಯನ್ನು ಘೋಷಿಸಿದ ಸಿಪಿಐ(ಎಂ) ಇದಕ್ಕಾಗಿ ರಾಜಿಯಿಲ್ಲದ ಹೋರಾಟವನ್ನು ನಡೆಸಲು ಶಪಥ ಮಾಡುತ್ತದೆ. ದ್ವೇಷ ಭಾಷಣ ಮತ್ತು ಅಪರಾಧದ ವಿರುದ್ಧ ಶಾಸನಕ್ಕಾಗಿ ಹೋರಾಡುತ್ತದೆ. ಸಿಎಎ ರದ್ದುಗೊಳಿಸಲು ಕೂಡ ಬದ್ಧವಾಗಿದೆ.

ಸಿಪಿಐ(ಎಂ) ಪಕ್ಷವು ಯುಎಪಿಎ ಮತ್ತು ಪಿಎಂಎಲ್‌ಎಯಂತಹ ಎಲ್ಲಾ ನಿರಂಕುಶ ಕಾನೂನುಗಳನ್ನು ರದ್ದುಪಡಿಸುತ್ತದೆ. ಇದು ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಲು ಮತ್ತು ಸ್ವತಂತ್ರ ಸಂಸ್ಥೆಗಳ ಸ್ವಾಯತ್ತತೆಯನ್ನು ರಕ್ಷಿಸಲು ಮತ್ತು ಬಲಪಡಿಸಲು ಕ್ರಮಗಳನ್ನು ತೆಗೆದುಕೊಳ್ಳಲು ಬದ್ಧವಾಗಿದೆ.

ಭಾರತದ ಆರ್ಥಿಕ ಸಾರ್ವಭೌಮತ್ವವನ್ನು ಕಾಪಾಡುವ ನೀತಿಗಳಿಗೆ ಸಿಪಿಐ(ಎಂ) ಬದ್ಧವಾಗಿದೆ. ಸಾರ್ವಜನಿಕ ವಲಯದ ಖಾಸಗೀಕರಣವನ್ನು ಪರಾಮರ್ಶಿಸಿ ಹಿಮ್ಮೆಟ್ಟಿಸಬೇಕು. ಕುಬೇರರಿಗೆ ತೆರಿಗೆ ವಿಧಿಸುವುದರ ಜೊತೆಗೆ ಸಾಮಾನ್ಯ ಸಂಪತ್ತು ತೆರಿಗೆ ಮತ್ತು ಪಿತ್ರಾರ್ಜಿತ ತೆರಿಗೆಯನ್ನು ಸಹ ಕಾನೂನು ಮಾಡಬೇಕು. ಅಸ್ತಿತ್ವದಲ್ಲಿರುವ ಕಾರ್ಮಿಕ ಸಂಹಿತೆಗಳನ್ನು ಕಾರ್ಮಿಕರ ಹಕ್ಕುಗಳನ್ನು ಪ್ರತಿಬಿಂಬಿಸುವ ಕಾರ್ಮಿಕ ಪರ ಕಾನೂನುಗಳಿಂದ ಬದಲಾಯಿಸಬೇಕು. ಸ್ವಾಮಿನಾಥನ್ ಆಯೋಗದ ಶಿಫಾರಸುಗಳಿಗೆ ಅನುಗುಣವಾಗಿ ಕನಿಷ್ಟ ಬೆಂಬಲ ಬೆಲೆಯ (MSP) ಶಾಸನಬದ್ಧ ಖಾತರಿಯನ್ನು ಒದಗಿಸುವ ಮೂಲಕ ಭಾರತದ ರೈತರಿಗೆ ಭದ್ರತೆಯನ್ನು ಒದಗಿಸುವುದರ ಮೇಲೆ ಆಹಾರ ಭದ್ರತೆಯನ್ನು ಅವಲಂಬಿಸಿದೆ. ಕೆಲಸ ಮಾಡುವ ಹಕ್ಕನ್ನು ಸಾಂವಿಧಾನಿಕ ಹಕ್ಕಾಗಿ ಸೇರಿಸಬೇಕೆಂದು ಸಿಪಿಐ(ಎಂ) ಬಯಸುತ್ತದೆ. ಸರ್ಕಾರಿ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು. ಜೊತೆಗೆ, ಉದ್ಯೋಗಗಳನ್ನು ಸೃಷ್ಟಿಸಲು ಅತಿ ಸಣ್ಣ ಮತ್ತು ಸಣ್ಣ ಉತ್ಪಾದನಾ ಉದ್ಯಮಗಳನ್ನು (MSME) ಬಲಪಡಿಸಬೇಕು ಮತ್ತು ವಿಸ್ತರಿಸಬೇಕು. MGNREGA ಗಾಗಿ ಬಜೆಟ್ ಹಂಚಿಕೆಯನ್ನು ದ್ವಿಗುಣಗೊಳಿಸಬೇಕು. ನಗರ ಉದ್ಯೋಗ ಖಾತ್ರಿಪಡಿಸುವ ಹೊಸ ಕಾನೂನು ಮಾಡಬೇಕು. ನಿರುದ್ಯೋಗ ಭತ್ಯೆ ನೀಡಬೇಕು. ಉದ್ಯೋಗ ನಷ್ಟದೊಂದಿಗೆ ಪ್ರಸ್ತುತ ಬೆಳವಣಿಗೆಯ ಮಾದರಿಗಳಲ್ಲಿ ಬದಲಾವಣೆಯನ್ನು ತರುವ ಮೂಲಕ ಭಾರತದ ಜನರ ಲಾಭಗಳ ನಾಶವನ್ನು ಹಿಮ್ಮೆಟ್ಟಿಸಬೇಕು.

ಸಾರ್ವಜನಿಕ ಶಿಕ್ಷಣದ ಹಕ್ಕನ್ನು ಬಲಪಡಿಸಬೇಕು ಮತ್ತು ಉನ್ನತ ಶಿಕ್ಷಣದ ಖಾಸಗೀಕರಣವನ್ನು ನಿಲ್ಲಿಸಬೇಕು.

ಶಿಕ್ಷಣ ಕ್ಷೇತ್ರಕ್ಕೆ ಬಜೆಟ್ ಹಂಚಿಕೆಯನ್ನು ಜಿಡಿಪಿಯ ಕನಿಷ್ಠ 6 ಪ್ರತಿಶತಕ್ಕೆ ಹೆಚ್ಚಿಸಲು ಸಿಪಿಎಂ ಬಯಸಿದೆ. ಶಿಕ್ಷಣ ಕ್ಷೇತ್ರದಲ್ಲಿ ವಾಣಿಜ್ಯೀಕರಣ, ಕೋಮುವಾದ ಮತ್ತು ಕೇಂದ್ರೀಕರಣದ ನೀತಿಗಳನ್ನು ಹಿಮ್ಮೆಟ್ಟಿಸಲು ಇದು ಬದ್ಧವಾಗಿದೆ.

ಮೋದಿ ಸರಕಾರದಿಂದ ತೀವ್ರವಾಗಿ ದುರ್ಬಲಗೊಂಡಿರುವ ರಾಜ್ಯಗಳ ಸಾಂವಿಧಾನಿಕ ಹಕ್ಕುಗಳ ಮರುಸ್ಥಾಪನೆಗಾಗಿ ಸಿಪಿಐ(ಎಂ) ದೃಢವಾಗಿ ನಿಂತಿದೆ. ಸಿಪಿಎಂ ಒಟ್ಟು ಕೇಂದ್ರ ತೆರಿಗೆಯ ಶೇಕಡ 50 ರಷ್ಟನ್ನು ರಾಜ್ಯಗಳಿಗೆ ನೀಡಲು ಬಯಸುತ್ತದೆ, ಇದರಲ್ಲಿ ಕೇಂದ್ರವು ಸಂಗ್ರಹಿಸುವ ಹೆಚ್ಚುವರಿ ಶುಲ್ಕಗಳು ಮತ್ತು ಸೆಸ್‌ಗಳ ಪಾಲು ಸೇರಿದೆ. ರಾಜ್ಯಗಳ ವೆಚ್ಚದಲ್ಲಿ ಕೇಂದ್ರೀಕರಣವನ್ನು ಉತ್ತೇಜಿಸುವ ನೀತಿಗಳನ್ನು ಕೊನೆಗೊಳಿಸಲು ಇದು ಕರೆ ನೀಡುತ್ತದೆ. ಅಲ್ಲದೆ, ಮುಖ್ಯಮಂತ್ರಿ ಪ್ರಸ್ತಾಪಿಸಿದ ಮೂವರು ತಜ್ಞರ ಸಮಿತಿಯಿಂದ ರಾಜ್ಯಪಾಲರನ್ನು ಆಯ್ಕೆ ಮಾಡಲು ಸಿಪಿಐ(ಎಂ) ಬದ್ಧವಾಗಿದೆ

ಖಾಸಗಿ ವಲಯದಲ್ಲಿ ಮೀಸಲಾತಿಗಾಗಿ ಕಾನೂನನ್ನು ಜಾರಿಗೆ ತರಲು ಸಿಪಿಐ(ಎಂ) ಬದ್ಧವಾಗಿದೆ. ಖಾಲಿ ಇರುವ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡುವುದಕ್ಕೆ ಸಿಪಿಐ(ಎಂ) ಬದ್ಧವಾಗಿದೆ; ಆದಿವಾಸಿಗಳ ಸಾಂವಿಧಾನಿಕ ಮತ್ತು ಕಾನೂನಾತ್ಮಕ ಹಕ್ಕುಗಳ ರಕ್ಷಣೆ ಮತ್ತು ಸಾಂಸ್ಕೃತಿಕ ಅನನ್ಯತೆಯ ರಕ್ಷಣೆ. ದೇಶದಲ್ಲಿ OBC ಗಳ ಬಗ್ಗೆ ಸರಿಯಾದ ಡೇಟಾವನ್ನು ಪಡೆಯಲು, ಹಲವಾರು ವರ್ಷಗಳಿಂದ ಬಾಕಿ ಇರುವ 2021 ರ ಸಾಮಾನ್ಯ ಜನಗಣತಿಯೊಂದಿಗೆ ಜಾತಿ ಗಣತಿಯನ್ನು ನಡೆಸುವುದು ಅವಶ್ಯಕ. ಸಿಪಿಐ(ಎಂ) ಮಹಿಳೆಯರಿಗೆ ಮೂರನೇ ಒಂದು ಭಾಗದ ಮೀಸಲಾತಿಯನ್ನು ತಕ್ಷಣವೇ ಜಾರಿಗೆ ತರಲು ಮತ್ತು ಅಪರಾಧಗಳಿಗೆ ಬಲಿಯಾದ ಮಹಿಳೆಯರಿಗೆ ನ್ಯಾಯ ವ್ಯವಸ್ಥೆಯನ್ನು ಬಲಪಡಿಸಲು ಬದ್ಧವಾಗಿದೆ.

ಚುನಾವಣಾ ವ್ಯವಸ್ಥೆಯಲ್ಲಿ ಹಣದ ಬಳಕೆಯನ್ನು ನಿಗ್ರಹಿಸಲು ಸಿಪಿಐ(ಎಂ) ತುರ್ತು ಚುನಾವಣಾ ಸುಧಾರಣೆಗಳನ್ನು ಬಯಸುತ್ತದೆ. ಇದಕ್ಕಾಗಿ ಸರ್ಕಾರದ ಹಣವನ್ನು ಚುನಾವಣೆಗೆ ಬಳಸಿಕೊಳ್ಳಲು ಪಕ್ಷ ಮುಂದಾಗಿದೆ. ಇದು ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ದೇಣಿಗೆಗಳನ್ನು ನಿಷೇಧಿಸಲು ಬಯಸುತ್ತದೆ. ಪ್ರಜಾಪ್ರಭುತ್ವವನ್ನು ಬಲಪಡಿಸಲು ಕಾರ್ಪೊರೇಟ್‌ಗಳು ದೇಣಿಗೆ ನೀಡಬೇಕು. ಅಂತಹ ಎಲ್ಲಾ ದೇಣಿಗೆಗಳನ್ನು ಸಹ ಸರ್ಕಾರದ ಚುನಾವಣಾ ನಿಧಿಯಲ್ಲಿ ಠೇವಣಿ ಮಾಡಬೇಕು. ಅವುಗಳನ್ನು ಸರ್ಕಾರದ ನಿಧಿಯಂತೆ ಬಳಸಬೇಕು.

ಆರ್ಟಿಕಲ್ 370 ಮೂಲಕ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿರುವ ಸ್ವಾಯತ್ತತೆಗೆ ಸಿಪಿಐ(ಎಂ) ಬದ್ಧವಾಗಿದೆ. ಜಮ್ಮು ಮತ್ತು ಕಾಶ್ಮೀರದ ಜನರ ಹಕ್ಕುಗಳನ್ನು ರಕ್ಷಿಸಲು ಪ್ರತಿಯೊಂದು ವೇದಿಕೆಯನ್ನು ಬಳಸಲು ಸಿಪಿಐ(ಎಂ) ಬದ್ಧವಾಗಿದೆ. ರಾಜ್ಯ ವಿಧಾನಸಭೆಗೆ ತಕ್ಷಣದ ಚುನಾವಣೆ ನಡೆಸಲು ಸಿಪಿಐ(ಎಂ) ಬದ್ಧವಾಗಿದೆ. ಈ ದಿಕ್ಕಿನಲ್ಲಿ ಮೊದಲ ಹಂತವಾಗಿ ಸಂಪೂರ್ಣ ರಾಜ್ಯತ್ವವನ್ನು ಮರುಸ್ಥಾಪಿಸಲು ಸಿಪಿಐ(ಎಂ) ಬಯಸುತ್ತದೆ.

ನಮ್ಮ ದೇಶದ ಹಿತಾಸಕ್ತಿಗಳನ್ನು ಪೂರೈಸುವ ಸ್ವತಂತ್ರ ವಿದೇಶಾಂಗ ನೀತಿಗೆ ಸಿಪಿಐ(ಎಂ) ಬದ್ಧವಾಗಿದೆ. ನಮ್ಮ ದೇಶದ ಭದ್ರತೆಯ ಪ್ರತಿಯೊಂದು ಅಂಶವನ್ನು ರಕ್ಷಿಸುವ ಜೊತೆಗೆ ನಮ್ಮ ನೆರೆಯ ದೇಶಗಳೊಂದಿಗೆ ಉತ್ತಮ ಸಂಬಂಧವನ್ನು ಕಾಪಾಡಿಕೊಳ್ಳಲು ನಾವು ಬಯಸುತ್ತೇವೆ.

ಸ್ವಜನಪಕ್ಷಪಾತ, ಬಂಡವಾಳಶಾಹಿ ಮತ್ತು ಧರ್ಮ–ಕಾರ್ಪೊರೇಟ್ ನಂಟುಗಳ ಪ್ರಸ್ತುತ ದೃಷ್ಟಿಕೋನವನ್ನು ಸಂಪೂರ್ಣವಾಗಿ ಪರಿಷ್ಕರಿಸುವ ಅಗತ್ಯವಿದೆ.

ಚುನಾವಣಾ ಯೋಜನೆಯ ಎರಡನೇ ಭಾಗದಲ್ಲಿ ಪರ್ಯಾಯ ನೀತಿಗಳನ್ನು ಜನರ ಮುಂದೆ ವಿವರಿಸಲಾಗುವುದು ಎಂದು ಸಿಪಿಐ(ಎಂ) ಹೇಳಿದೆ.

ಐದು ಟ್ರಿಲಿಯನ್ ಆರ್ಥಿಕತೆಯೂ, ಹಸಿವಿನ ಸೂಚ್ಯಂಕದಲ್ಲಿ 111ನೇ ಸ್ಥಾನವೂ

ಕೊಚ್ಚಿಕೊಂಡದ್ದೇನು?

ಭಾರತವು ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ. ಇನ್ನು ಐದು ಅಥವಾ ಹತ್ತು ವರ್ಷಗಳಲ್ಲಿ ಮೂರು ಅಥವಾ ಜಗತ್ತಿನ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗುತ್ತದೆ ಇತ್ಯಾದಿ......

ಜಿಡಿಪಿ ಈ ವರ್ಷ ಅಥವಾ ಆ ವರ್ಷದಲ್ಲಿ 5 ಟ್ರಿಲಿಯನ್ ಅಥವಾ 10 ಟ್ರಿಲಿಯನ್ ತಲುಪಲಿದೆ....

'ಅಚ್ಛೇ ದಿನ್', 'ಅಮೃತ್ ಕಾಲ', 'ಶ್ರೇಷ್ಠ ಭಾರತ' ಇತ್ಯಾದಿಗಳೆಲ್ಲ ಅಸ್ತಿತ್ವಕ್ಕೆ ಬಂದಿವೆ ಮತ್ತು ಹಾಗೆ.... ಇನ್ನೂ ಏನೇನೋ...

ವಾಸ್ತವವೇನು?

ದೇಶದ ಮತ್ತು ಜಾಗತಿಕ ಷೇರು ಮಾರುಕಟ್ಟೆ ಮತ್ತು ಕಾರ್ಪೊರೇಟ್ ಜಗತ್ತು – ಈ ರೀತಿಯ ಮಾತುಗಳನ್ನು ಇಷ್ಟಪಡುತ್ತಾರೆ. ಏಕೆಂದರೆ ಇದು ಅವರಿಗೆ ಹೆಚ್ಚು ಭರಪೂರ ಲಾಭಗಳ ಸುವರ್ಣ ಅವಕಾಶಗಳನ್ನು ಸೃಷ್ಟಿಸುತ್ತದೆ.

ಜನಸಾಮಾನ್ಯರಲ್ಲಿ ಹಲವರು ಸಹ ಇಂತಹ ಪ್ರಚಾರದ ಪ್ರಭಾವಕ್ಕೆ ಒಳಗಾಗುತ್ತಾರೆ ಮತ್ತು ಭಾರತದ ಆರ್ಥಿಕತೆಯು ಗರ್ಜಿಸುತ್ತಿದೆ ಹಾಗೂ 'ಅಚ್ಛೇ ದಿನ್' (ಒಳ್ಳೆಯ ದಿನಗಳು) ಇನ್ನೇನು ಬಂದೇ ಬಿಡುತ್ತದೆ ಎಂದು ನಂಬಲು ಪ್ರಾರಂಭಿಸುತ್ತಾರೆ. ಇದು ಸಂಪೂರ್ಣ ಭ್ರಮೆಯಾಗಿದ್ದು, ಇದನ್ನು ಇಲಿಯನ್ನು ಹುಲಿ ಎಂದು ತೋರಿಸಬಲ್ಲ ಮೋದಿಯ ಪ್ರಚಾರಕರು ಪೋಷಿಸಿದ್ದಾರೆ.

ಹೆಚ್ಚಿನ ಜಿಡಿಪಿ ಬೆಳವಣಿಗೆ ಮತ್ತು ದೊಡ್ಡ ಆರ್ಥಿಕತೆಯಿಂದ ತಕ್ಷಣ ದೇಶದ ಸಾಮಾನ್ಯ ಜನರು ಅದರ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಖಂಡಿತ ಅರ್ಥವಲ್ಲ. ಆದರೆ ಜಿಡಿಪಿ ದರ ಸಹ ಅಷ್ಟೇನೂ ಸಂಭ್ರಮಿಸುವಂಥದ್ದೇನಲ್ಲ. ವಾಸ್ತವಿಕ ಹಣದುಬ್ಬರ ದರಗಳನ್ನು ಗಣನೆಗೆ ತೆಗೆದುಕೊಂಡರೆ, 2023–24ರಲ್ಲಿ ಭಾರತದ ಜಿಡಿಪಿ ಬೆಳವಣಿಗೆಯು ಶೇಕಡಾ 7.3 ರಿಂದ ಶೇಕಡಾ 3 ಕ್ಕಿಂತ ಕೆಳಮಟ್ಟಕ್ಕೆ ಇಳಿಯುತ್ತದೆ. ನೋಟು ಅಮಾನ್ಯೀಕರಣದ ನಂತರದ ಅವಧಿಯಲ್ಲಿ ಅಸಂಘಟಿತ ವಲಯವು ಅನುಭವಿಸಿದ ಅಸಮಾನ ಸಂಕಷ್ಟದ ಸ್ಥಿತಿಯನ್ನು ಅಂದಾಜಿಸಲು ನಾವು ಇನ್ನೂ ಸರಿಯಾದ ಹತಾರಗಳನ್ನು ಹೊಂದಿಲ್ಲ. ಒಂದು ವೇಳೆ ನೈಜ ಚಿತ್ರಣವನ್ನು ಅಂದಾಜಿಸಿದರೆ ಪರಿಸ್ಥಿತಿ ಇನ್ನಷ್ಟು ಕೆಟ್ಟದಾಗಿರಬಹುದು.

ದೊಡ್ಡ GDP ಅಥವಾ ಹೆಚ್ಚಿನ ಬೆಳವಣಿಗೆ ಎಂದರೆ ಜನರ ಬದುಕೇನೂ ಸಮೃದ್ಧವಲ್ಲ ಎಂಬುದಕ್ಕೆ ಭಾರತ ಒಂದು ಉತ್ತಮ ಉದಾಹರಣೆಯಾಗಿದೆ. ನೀವು ಭಾರತದ ಜಿಡಿಪಿಯನ್ನು ಅದರ ಒಟ್ಟು ಜನಸಂಖ್ಯೆಯಿಂದ ಭಾಗಿಸಿದರೆ, ಆಗ ಪ್ರತಿ ವ್ಯಕ್ತಿಗೆ ಎಷ್ಟು ಜಿಡಿಪಿ ಎಂದು ಲೆಕ್ಕ ಸಿಗುತ್ತದೆ – ಆಗ ವಾಸ್ತವ ಬಯಲಾಗುತ್ತದೆ.

ಭಾರತದ ತಲಾ ವ್ಯಕ್ತಿಯ ಜಿಡಿಪಿಯನ್ನು ಲೆಕ್ಕ ಹಾಕಿದರೆ 213 ದೇಶಗಳ ಪೈಕಿ ಭಾರತ 147 ನೇ ಸ್ಥಾನದಲ್ಲಿ ನಿಲ್ಲುತ್ತದೆ. ಅಂದರೆ ಭಾರತದ ಜಿಡಿಪಿ ಅತ್ಯಂತ ಬಡ ದೇಶಗಳ ಜಿಡಿಪಿಯ ಜೊತೆ ನಿಲ್ಲುತ್ತದೆ. ಸತ್ಯ ಏನೆಂದರೆ ಜಗತ್ತಿನ ಅತಿ ಹೆಚ್ಚಿನ ಬಡವರ ತವರು ಭಾರತ!.

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕವು 2016 ರಲ್ಲಿ 118 ದೇಶಗಳ ಪೈಕಿ 97 ಇದ್ದದು 2023 ರಲ್ಲಿ 125 ದೇಶಗಳ ಪೈಕಿ 111 ಕ್ಕೆ ಕುಸಿದಿದೆ.

ಜನರ ಏಳಿಗೆಯ ಪುರಾವೆಯಾಗಿ ಸರ್ಕಾರವು ಹೆಚ್ಚಿದ ಬ್ಯಾಂಕ್ ಖಾತೆಗಳನ್ನು ತೋರಿಸುತ್ತದೆ. 52 ಕೋಟಿ ಜನ್ ಧನ್ ಖಾತೆಗಳನ್ನು ತೆರೆಯಲಾಗಿದೆ ಎಂದು ಹೇಳಲಾಗಿದೆ, ಇದು ವಯಸ್ಕ ಭಾರತೀಯ ಜನಸಂಖ್ಯೆಯ ಅರ್ಧದಷ್ಟು. ಈ ಖಾತೆಗಳಲ್ಲಿ ಹೊಂದಿರುವ ಠೇವಣಿಗಳು ಬ್ಯಾಂಕ್‌ಗಳ ಒಟ್ಟು ಠೇವಣಿಗಳಲ್ಲಿ 2.5 ಪ್ರತಿಶತಕ್ಕಿಂತ ಕಡಿಮೆ. ಒಟ್ಟು ಜನರು ಹೊಂದಿರುವ ಉಳಿತಾಯ ಠೇವಣಿಗಳಲ್ಲಿ ಇವರ ಠೇವಣಿಯ ಪಾಲು ಕೇವಲ 4.5 ಪ್ರತಿಶತದಷ್ಟು ಮಾತ್ರ. ಜನ್ ಧನ್ ಖಾತೆಗಳಲ್ಲಿನ ಸರಾಸರಿ ಬಾಕಿ ಮೊತ್ತ ಕೇವಲ 4,227 ರೂಪಾಯಿ. 4.3 ಕೋಟಿಗಿಂತ ಹೆಚ್ಚಿನ ಖಾತೆಗಳಲ್ಲಿ ಹಣವೇ ಇಲ್ಲ ಅಥವಾ ಶೂನ್ಯ ಖಾತೆಗಳು!

ಮೋದಿ ಆಡಳಿತದ ಆರಂಭದಲ್ಲಿ, ಕುಖ್ಯಾತ ರಂಗರಾಜನ್ ಸಮಿತಿಯು ನಗರ ಪ್ರದೇಶಗಳಲ್ಲಿ ದಿನಕ್ಕೆ ರೂ.47 ಕ್ಕಿಂತ ಕಡಿಮೆ ಅಥವಾ ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ ರೂ.32 ಕ್ಕಿಂತ ಕಡಿಮೆ ಆದಾಯವನ್ನು ಹೊಂದಿರುವವರು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದು ಹೇಳಿದೆ. ಈ ಹಾಸ್ಯಾಸ್ಪದ ವ್ಯಾಖ್ಯಾನವೇ ನೀತಿ ಆಯೋಗದ ಇತ್ತೀಚಿನ ಘೋಷಣೆಯ ಮೇಲೆ ಪ್ರಭಾವ ಬೀರಿದ್ದು, ಅದರ ಪ್ರಕಾರ ಕೇವಲ ಶೇಕಡಾ 5 ರಷ್ಟು ಜನರು ಮಾತ್ರ ಬಡವರು.

ಲೋಕಸಭಾ ಚುನಾವಣೆ: ಮುಖ್ಯ ಪ್ರಶ್ನೆಗಳು

ಅವರು ಬಡತನವನ್ನು ಹೇಗೆ ಅಳೆಯುತ್ತಾರೆ? ಆದಾಯ ಅಥವಾ ಸಂಪಾದನೆಯನ್ನು ಪರಿಗಣಿಸಿ ಅಲ್ಲ. ಅವರು ಶೌಚಾಲಯ, ಕುಡಿಯುವ ನೀರು, ಗ್ಯಾಸ್ ಸಂಪರ್ಕ, ಬ್ಯಾಂಕ್ ಖಾತೆ ಅಥವಾ ಫೋನ್ ಹೊಂದಿಲ್ಲದಿರುವ 12 ಸೂಚಕಗಳನ್ನು ಬಳಸುತ್ತಾರೆ. ಶೌಚಾಲಯಗಳ ಸಂಖ್ಯೆಯನ್ನು ಲೆಕ್ಕಹಾಕಲು ಬಹಳ ವಿಶ್ವಾಸಾರ್ಹವಲ್ಲದ ಸರ್ಕಾರದ ಅಂಕಿಅಂಶಗಳನ್ನು ಆಧರಿಸಲಾಗುತ್ತದೆ. ಉದಾಹರಣೆಗೆ, ಸರ್ಕಾರದ ಅಂಕಿಅಂಶಗಳಲ್ಲಿರುವ ಅನೇಕ ಶೌಚಾಲಯಗಳು ಅಸ್ತಿತ್ವದಲ್ಲೇ ಇರುವುದಿಲ್ಲ ಮತ್ತು ನೀರು ಸರಬರಾಜು ಅಥವಾ ಒಳಚರಂಡಿ ಮಾರ್ಗ ಲಭ್ಯವಿಲ್ಲದ ಕಾರಣ ಇನ್ನೂ ಅನೇಕವು ನಿರುಪಯುಕ್ತವಾಗಿವೆ.



ಮೊಬೈಲ್ ಫೋನ್‌ಗಳು ಈಗ ಆವಶ್ಯಕತೆಯೇ ಹೊರತು ಸಮೃದ್ಧಿಯ ಸೂಚಕವಲ್ಲ. ಉದ್ಯೋಗ ಖಾತರಿ ವೇತನಗಳು ಮತ್ತು ಸರ್ಕಾರಿ ಸವಲತ್ತುಗಳು ಇತ್ಯಾದಿಗಳನ್ನು ಪಡೆಯಲು ಬ್ಯಾಂಕ್ ಖಾತೆ ಹೊಂದುವುದು ಕಡ್ಡಾಯವಾಗಿದೆ ಹಾಗೂ ತೀವ್ರ ಬಡತನದ ಕಾರಣದಿಂದ ಅನೇಕರು ಇವುಗಳನ್ನು ಹೊಂದಿದ್ದರೂ ಬಳಸುವುದಿಲ್ಲ. ಆದಾಗ್ಯೂ, ಕಾಗದದ ಮೇಲೆ, ಬಡತನದ 'ಕಡಿತ'ವನ್ನು ಪ್ರದರ್ಶಿಸಲು ಇವುಗಳನ್ನು (ಮೊಬೈಲ್, ಬ್ಯಾಂಕ್ ಖಾತೆ ಇತ್ಯಾದಿ) ಹೊಂದಿರುವುದನ್ನು ಬಡತನ ಹೋಗಿದೆ ಎಂದು ನಂಬಿಸಲು ಬಳಸಲಾಗುತ್ತದೆ.

ಈ ವ್ಯಾಖ್ಯಾನದ ಪ್ರಕಾರ ಕೆಲವು ದಿನಗಳ ಕಾಲ ತನ್ನ ಕೆಲಸದಿಂದ ದಿನಕ್ಕೆ 240 ರೂ ಗಳಿಸುವ ಭೂರಹಿತ ಕೂಲಿಕಾರನು ಇನ್ನು ಮುಂದೆ ಬಡವನೆಂದು ಪರಿಗಣಿಸಲ್ಪಡುವುದಿಲ್ಲ!

ಶೇಕಡಾ 32 ರಷ್ಟು ಜನರು ಪೌಷ್ಟಿಕಾಂಶದ ಕೊರತೆಯಿಂದ ಬಳಲುತ್ತಿದ್ದಾರೆ, 44 ಪ್ರತಿಶತ ಕುಟುಂಬಗಳು ಉತ್ತಮ ಅಡುಗೆ ಇಂಧನವನ್ನು ಬಳಸುತ್ತಿಲ್ಲ, 30 ಪ್ರತಿಶತದಷ್ಟು ಜನರು ಸರಿಯಾದ ನೈರ್ಮಲ್ಯವನ್ನು ಹೊಂದಿಲ್ಲ ಮತ್ತು 41 ಪ್ರತಿಶತದಷ್ಟು ಜನರು ಸರಿಯಾದ ವಸತಿ ಹೊಂದಿಲ್ಲ ಎಂದು ನೀತಿ ಆಯೋಗದ ವರದಿಯೇ ಒಪ್ಪಿಕೊಳ್ಳುವಂತಹ ಒತ್ತಾಯಕ್ಕೆ ಒಳಗಾಗಿದೆ.

ಇತ್ತೀಚೆಗೆ ಬಿಡುಗಡೆಯಾದ 2022–23ರ ಬಳಕೆಯ ವೆಚ್ಚದ ಮಾಹಿತಿಯು ಗ್ರಾಮೀಣ ಪ್ರದೇಶಗಳಲ್ಲಿ, ನಾಲ್ಕು ಸದಸ್ಯರ ಕುಟುಂಬದ ಸರಾಸರಿ ಮಾಸಿಕ ವೆಚ್ಚವು 2011–12 ರ ಬೆಲೆಗಳಲ್ಲಿ ರೂ. 8032 ಅಥವಾ ಪ್ರಸ್ತುತ ಬೆಲೆಗಳಲ್ಲಿ ರೂ. 15,092 ಎಂದು ತೋರಿಸುತ್ತದೆ. ಅದೇ ರೀತಿ, ನಗರ ಪ್ರದೇಶಗಳಲ್ಲಿ, ಅಂತಹ ಕುಟುಂಬವು 2011–12ರ ಬೆಲೆಯಲ್ಲಿ ಸರಾಸರಿ 10,520 ರೂ. ಅಥವಾ ಪ್ರಸ್ತುತ ಬೆಲೆಯಲ್ಲಿ ರೂ. 25,836 ಅನ್ನು ಖರ್ಚು ಮಾಡುತ್ತದೆ.

2018–19 ರಲ್ಲಿ ಸರ್ಕಾರದ ಸಮೀಕ್ಷೆಯು ಕೃಷಿ ಕುಟುಂಬಗಳ ಸರಾಸರಿ ಆದಾಯವು ತಿಂಗಳಿಗೆ ಕೇವಲ 10,218 ರೂ. ಅಂದರೆ, ಅವರ ವೆಚ್ಚಕ್ಕಿಂತ ಕಡಿಮೆ ಎಂದು ಬಹಿರಂಗಪಡಿಸಿದೆ. ಆದ್ದರಿಂದ ಅವರಲ್ಲಿ ಹೆಚ್ಚಿನವರು ಸಾಲದಲ್ಲಿ ಮುಳುಗಿದ್ದಾರೆ. 2022–23ರ ಆವರ್ತಕ ಕಾರ್ಮಿಕ ಪಡೆ ಸಮೀಕ್ಷೆಯು ಸಾಮಾನ್ಯ ಉದ್ಯೋಗಿಗಳು ತಿಂಗಳಿಗೆ ಸುಮಾರು 20,000 ರೂಪಾಯಿಗಳನ್ನು ಗಳಿಸಿದರೆ, ಸಾಂದರ್ಭಿಕ ಕಾರ್ಮಿಕರು ತಿಂಗಳಿಗೆ ಕೇವಲ 12,000 ರೂಪಾಯಿಗಳನ್ನು ಮತ್ತು ಸ್ವಯಂ ಉದ್ಯೋಗಿಗಳು ತಿಂಗಳಿಗೆ ಸರಾಸರಿ 13,000 ರೂಪಾಯಿಗಳನ್ನು ಗಳಿಸುತ್ತಾರೆ ಎಂದು ಹೇಳಿದೆ. ಈ ಆದಾಯಗಳು ಮೇಲೆ ತಿಳಿಸಿದ ಸರಾಸರಿ ಖರ್ಚಿಗಿಂತ ತೀರಾ ಕಡಿಮೆ.

ಭರವಸೆಯ ಹೊರತಾಗಿಯೂ ಬೆಲೆಯೇರಿಕೆಯನ್ನು ನಿಯಂತ್ರಿಸಲು ಸರಕಾರ ಮುಂದಾಗದಿರುವುದರಿಂದ ಬಡವರು ಮತ್ತಷ್ಟು ಲೂಟಿಗೆ ಒಳಗಾಗಿದ್ದಾರೆ. ಇತ್ತೀಚಿನ ಸರ್ಕಾರದ ಅಂಕಿಅಂಶಗಳ ಪ್ರಕಾರ ಗ್ರಾಹಕ ಬೆಲೆ ಸೂಚ್ಯಂಕದಲ್ಲಿ, ಜೂನ್ 2014 ಮತ್ತು ಜನವರಿ 2024ರ ನಡುವೆ, ಧಾನ್ಯಗಳು ಮತ್ತು ಅದರ ಉತ್ಪನ್ನಗಳ ಬೆಲೆಗಳು ಶೇಕಡಾ 54 ರಷ್ಟು, ಮಾಂಸ ಮತ್ತು ಮೀನಿನ ಬೆಲೆಗಳು ಶೇಕಡಾ 73 ರಷ್ಟು ಹೆಚ್ಚಾಗಿದೆ, ಮೊಟ್ಟೆಯ ಬೆಲೆ ಶೇಕಡಾ 77, ಹಾಲು ಮತ್ತು ಹಾಲಿನ ಉತ್ಪನ್ನಗಳ ಬೆಲೆಗಳು ಶೇಕಡಾ 53, ಎಣ್ಣೆ ಮತ್ತು ಕೊಬ್ಬುಗಳು ಶೇಕಡಾ 48, ತರಕಾರಿಗಳು ಶೇಕಡಾ 48, ಬೇಳೆಕಾಳುಗಳು ಮತ್ತು ಅದರ ಉತ್ಪನ್ನಗಳು ಶೇಕಡಾ 82, ಮತ್ತು ಮಸಾಲೆ ಪದಾರ್ಥಗಳ ಬೆಲೆ ಶೇಕಡಾ 112 ರಷ್ಟು ಹೆಚ್ಚಾಗಿದೆ.

ಈ ಅಗತ್ಯ ಆಹಾರ ಪದಾರ್ಥಗಳ ಹೊರತಾಗಿ, ಆರೋಗ್ಯ ವೆಚ್ಚಗಳು ಶೇಕಡಾ 71 ರಷ್ಟು ಹೆಚ್ಚಾಗಿದೆ ಮತ್ತು ಶಿಕ್ಷಣವು ಸುಮಾರು 60 ಪ್ರತಿಶತದಷ್ಟು ದುಬಾರಿಯಾಗಿದೆ. ಒಟ್ಟಾರೆ, ಈ ಅವಧಿಯಲ್ಲಿ ಸಾಮಾನ್ಯ ಬೆಲೆ ಸೂಚ್ಯಂಕವು ಸುಮಾರು 60 ಪ್ರತಿಶತದಷ್ಟು ಹೆಚ್ಚಾಗಿದೆ.

ಉದ್ದೇಶಪೂರ್ವಕವಾಗಿ ಬೆಲೆ ಏರಿಕೆ ಮಾಡುವಲ್ಲಿ ಸರ್ಕಾರದ ನೇರ ಪಾತ್ರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ವಿಷಯದಲ್ಲಿ ಕಂಡು ಬರುತ್ತಿದೆ. ಮೇ 2014 ಮತ್ತು ಫೆಬ್ರವರಿ 2024ರ ನಡುವೆ ಕಚ್ಚಾ ತೈಲದ ಅಂತರರಾಷ್ಟ್ರೀಯ ಬೆಲೆಗಳು (ಭಾರತೀಯ ಬಾಸ್ಕೆಟ್) ಶೇಕಡಾ 18ರಷ್ಟು ಕುಸಿದಿದ್ದರೂ, ಪೆಟ್ರೋಲ್‌ನ ದೇಶೀಯ ಬೆಲೆ ಶೇಕಡಾ 35 ಮತ್ತು ಡೀಸೆಲ್ ಬೆಲೆ ಶೇಕಡಾ 62 ರಷ್ಟು ಹೆಚ್ಚಾಗಿದೆ. ಮೋದಿ ಸರ್ಕಾರವು ಭಾರೀ ತೆರಿಗೆಗಳು ಮತ್ತು ಸುಂಕಗಳನ್ನು ವಿಧಿಸಿದ ಕಾರಣದಿಂದ ಹೀಗೆ ಬೆಲೆ ಏರಿಕೆಯಾಗಿದೆ. ಇದು ಜನರ ಮೇಲೆ ಪರೋಕ್ಷವಾಗಿ ತೆರಿಗೆ ವಿಧಿಸುವ ಮಾರ್ಗವಾಗಿದೆ.

2014–15 ಮತ್ತು 2023–24ರ ಮೊದಲಾರ್ಧದಲ್ಲಿ ಪೆಟ್ರೋಲಿಯಂ ಉತ್ಪನ್ನಗಳಿಂದ ವಸೂಲಿ ಮಾಡಲಾದ ಒಟ್ಟು ತೆರಿಗೆ 28.33 ಲಕ್ಷ ಕೋಟಿ ರೂಪಾಯಿಗಳು, ಇದರಲ್ಲಿ ಶೇಕಡಾ 82ರಷ್ಟು ಕೇಂದ್ರ ಸರ್ಕಾರವು ವಿಧಿಸಿದ ಅಬಕಾರಿ ಸುಂಕ. ಬಡವರು ಮತ್ತು ಕೆಳ ಮಧ್ಯಮ ವರ್ಗದ ಮನೆಗಳ ಮಹಿಳೆಯರು ಖಾಲಿಯಾದ ಸಿಲಿಂಡರ್‌ಗಳನ್ನು ಪುನಃ ತುಂಬಿಸಿಕೊಳ್ಳಲು ಸಾಧ್ಯವಾಗದ ಮಟ್ಟಕ್ಕೆ ಅಡುಗೆ ಅನಿಲ ಬೆಲೆಗಳು ತಲುಪಿವೆ. ಫೆಬ್ರವರಿಯಲ್ಲಿ ಪ್ರತಿ ಸಿಲಿಂಡರ್ ಬೆಲೆಯನ್ನು ರೂ.25 ಹೆಚ್ಚಿಸಲಾಗಿದೆ. ಇತ್ತೀಚೆಗಿನ ಬೆಲೆಯಲ್ಲಿನ 100 ರೂಪಾಯಿ ಇಳಿಕೆಯು ಸಹಜವಾಗಿ ಚುನಾವಣಾ ಆಮಿಷವಾಗಿದೆ.

ಬಡವರು ಏನನ್ನಾದರೂ ಖರೀದಿಸಿದಾಗ ಪ್ರತಿ ಬಾರಿ ಪಾವತಿಸುವ ಪರೋಕ್ಷ ತೆರಿಗೆಗಳು ಭಾರತದಲ್ಲಿ ಸರ್ಕಾರಿ ಆದಾಯಕ್ಕೆ ಮೂರನೇ ಎರಡರಷ್ಟು ಕೊಡುಗೆ ನೀಡುತ್ತವೆ, ಆದರೆ ಅರ್ಧಕ್ಕಿಂತ ಹೆಚ್ಚು ರಾಷ್ಟ್ರೀಯ ಆದಾಯವನ್ನು ಹೊಂದಿರುವ ಮೇಲಿನ ಶೇಕಡಾ 10ರಷ್ಟು ಶ್ರೀಮಂತರು ನೇರ ತೆರಿಗೆಯಾಗಿ ದೇಶದ ಆದಾಯದ ಮೂರನೇ ಒಂದು ಭಾಗವನ್ನು ಮಾತ್ರ ಕೊಡುಗೆ ನೀಡುತ್ತಾರೆ.

2021–22ರಲ್ಲಿ ಆದಾಯ ತೆರಿಗೆ ಸಲ್ಲಿಸಿದ 9.65 ಲಕ್ಷಕ್ಕೂ ಹೆಚ್ಚು ಕಂಪನಿಗಳ ಪೈಕಿ 5.81 ಲಕ್ಷ ಕಂಪನಿಗಳು ನಷ್ಟ ಅಥವಾ ಶೂನ್ಯ ಲಾಭವನ್ನು ವರದಿ ಮಾಡಿದ್ದರೆ, ಕೇವಲ 520 ಕಂಪನಿಗಳು ಎಲ್ಲಾ ಕಂಪನಿಗಳ ಒಟ್ಟು ಆದಾಯದ 56.4 ಪ್ರತಿಶತಕ್ಕಿಂತ ಹೆಚ್ಚು ಮತ್ತು 1757 ಕಂಪನಿಗಳು 18.7 ಪ್ರತಿಶತದಷ್ಟು ಲಾಭವನ್ನು ಹೊಂದಿವೆ.

ಪುಟ 10 ಕ್ಕೆ

ಐದು ಟ್ರಿಲಿಯನ್ ಆರ್ಥಿಕತೆಯೂ, ಹಸಿವಿನ ಸೂಚ್ಯಂಕದಲ್ಲಿ 111ನೇ ಸ್ಥಾನವೂ.......

ಪುಟ 9 ರಿಂದ

ಕಾರ್ಪೊರೇಟ್ ಲಾಭಗಳು ಸಹ ಹೆಚ್ಚು ಕೇಂದ್ರೀಕೃತವಾಗಿವೆ!

ವಾಸ್ತವವಾಗಿ, ಕಾರ್ಪೊರೇಟ್ ಜಗತ್ತು, ದೊಡ್ಡ ವ್ಯಾಪಾರಿಗಳು ಮತ್ತು ಭೂಮಾಲೀಕರು ಅಭಿವೃದ್ಧಿ ಹೊಂದುತ್ತಿರುವಾಗಲೂ ಭಾರತದ ಜನತೆ ಹೆಚ್ಚಿದ ಹಣದುಬ್ಬರ, ನಿರಂತರ ನಿರುದ್ಯೋಗ ಮತ್ತು ಕಡಿಮೆ ಆದಾಯದಿಂದ ಕರುಣೆಯೇ ಇಲ್ಲದೆ ಹಿಂಡಲ್ಪಡುತ್ತಿದ್ದಾರೆ. ಅಮೃತ್ ಕಾಲವೆಂದರೆ ಶ್ರೀಮಂತರಿಗೆ ಮಾತ್ರವಾಗಿದ್ದು ಅವರು ಸೂಪರ್ ಲಾಭವನ್ನು ಪಡೆಯುತ್ತಿದ್ದಾರೆ.

2022 ರಲ್ಲಿ, ಭಾರತದ ಜನಸಂಖ್ಯೆಯ 10 ಪ್ರತಿಶತದಷ್ಟು ಶ್ರೀಮಂತರು ರಾಷ್ಟ್ರೀಯ ಆದಾಯದ 57 ಪ್ರತಿಶತವನ್ನು ಪಡೆದುಕೊಂಡರು, ಆದರೆ ಬಡ 50 ಪ್ರತಿಶತದಷ್ಟು ಜನರು ಕೇವಲ 13 ಪ್ರತಿಶತದಷ್ಟು ಆದಾಯವನ್ನು ಮಾತ್ರ ಪಡೆದರು ಎಂದು ವಿಶ್ವ ಅಸಮಾನತೆ ಮಾಪನದ ಅಂಕಿಅಂಶಗಳು ತಿಳಿಸಿವೆ.

ಸಂಪತ್ತಿನ ಮಾಲೀಕತ್ವಕ್ಕೆ ಸಂಬಂಧಿಸಿದಂತೆ, ಶೇಕಡಾ 10ರಷ್ಟು ಶ್ರೀಮಂತರು ದೇಶದ ಖಾಸಗಿ ಸಂಪತ್ತಿನ ಸುಮಾರು 67 ಪ್ರತಿಶತವನ್ನು ಹೊಂದಿದ್ದಾರೆ, ಆದರೆ ಮಧ್ಯಮ ಮಟ್ಟದ ಸಂಪತ್ತು ಹೊಂದಿರುವ ಶೇಕಡಾ 40 ರಷ್ಟು 29.5 ಶೇಕಡಾ ಮತ್ತು ಶೇಕಡಾ 50 ಬಡವರು ಶೇಕಡಾ 6 ಕ್ಕಿಂತ ಕಡಿಮೆ ಸಂಪತ್ತಿನ ಮಾಲೀಕತ್ವ ಹೊಂದಿದ್ದಾರೆ. ಮೇಲಿನ ಶೇಕಡಾ 10 ಜನರು ಕೆಳಗಿನ ಶೇಕಡಾ 50 ಕ್ಕಿಂತ 20 ಪಟ್ಟು ಹೆಚ್ಚು ಸಂಪತ್ತನ್ನು ಗಳಿಸಿದ್ದಾರೆ.

ಆರ್ಥಿಕತೆಯ ಭಾರೀ ಬೆಳವಣಿಗೆಯ ದರವು ಬಡವರಿಗೆ ಸಹಾಯ ಮಾಡುತ್ತಿಲ್ಲ ಅಥವಾ ಉದ್ಯೋಗವನ್ನು ಹೆಚ್ಚಿಸುತ್ತಿಲ್ಲ, ಇದು ವಾಸ್ತವವಾಗಿ ಬೆಳೆಯುತ್ತಿರುವ ಅಸಮಾನತೆಯನ್ನು ಖಾತ್ರಿಪಡಿಸುತ್ತಿದೆ. ಏಕೆಂದರೆ ಅಭಿವೃದ್ಧಿಯ ಪ್ರಯೋಜನಗಳನ್ನು ಗಣ್ಯರ ಒಂದು ಸಣ್ಣ ವಿಭಾಗವು ಬಾಚಿಕೊಳ್ಳುತ್ತಿದೆ.

ಗ್ರಾಹಕರ ವೆಚ್ಚದ ಫಲಿತಾಂಶಗಳು ತೋರಿಸಿದಂತೆ ಕಡಿಮೆ ಆದಾಯ, ನಿರಂತರ ನಿರುದ್ಯೋಗ ಮತ್ತು ಬೆಲೆ ಏರಿಕೆಯಿಂದ ಹೆಚ್ಚಿನ ಸಂಖ್ಯೆಯ ಜನರು ಉತ್ತಮ ಆಹಾರ ಮತ್ತು ಜೀವನದ ಇತರ ಮೂಲಭೂತ ಅವಶ್ಯಕತೆಗಳ ಕಡೆ ಗಮನ ಹರಿಸುತ್ತಿಲ್ಲ. ಇದರಿಂದಾಗಿ ಅಗತ್ಯತೆಯ ಹೊರತಾಗಿಯೂ ಆರ್ಥಿಕತೆಯು ಬೇಡಿಕೆಯ ಕೊರತೆಯಿಂದ ಬಳಲುತ್ತಿದೆ. ಪರಿಣಾಮಕಾರಿ ಬೇಡಿಕೆಯ ಕೊರತೆಯಿಂದಾಗಿ 2018 ರಲ್ಲಿ ಕಾರ್ಪೊರೇಟ್ ತೆರಿಗೆಯಲ್ಲಿ ಭಾರಿ ಕಡಿತ ಮತ್ತು ಸುಮಾರು 15 ಲಕ್ಷ ಕೋಟಿ ರೂಪಾಯಿಗಳ ಬ್ಯಾಂಕ್ ಸಾಲ ಮನ್ನಾ ಸೇರಿದಂತೆ ಸರ್ಕಾರವು ಎಲ್ಲಾ ರೀತಿಯ ಉಡುಗೊರೆಗಳು, ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಿದರೂ ಖಾಸಗಿ ವಲಯದಿಂದ ಉತ್ಪಾದನಾ ಸೌಲಭ್ಯಗಳಲ್ಲಿ ಹೂಡಿಕೆ ಕಂಡು ಬಂದಿಲ್ಲ.

ಆದಾಗ್ಯೂ, ಸರ್ಕಾರವು ಬಳಕೆಯ ಮೇಲೆ ವೆಚ್ಚವನ್ನು ಹೆಚ್ಚಿಸುವ ಮೂಲಕ ಆರ್ಥಿಕತೆ ಚೇತರಿಸಿಕೊಳ್ಳಲು ಬೇಕಾದ ಸಹಾಯ ಮಾಡಲು ನಿರಾಕರಿಸುತ್ತದೆ. ಮೋದಿ ಸರ್ಕಾರ ಸರ್ಕಾರದ ವೆಚ್ಚವನ್ನು ಕಡಿಮೆ ಮಾಡಬೇಕು ಮತ್ತು ಎಲ್ಲವನ್ನೂ ಖಾಸಗಿ ವಲಯಕ್ಕೆ ನಡೆಸಲು ಅವಕಾಶ ನೀಡಬೇಕು ಎಂದು ನಂಬಿದೆ. ನವ–ಉದಾರವಾದಿ ಸಿದ್ಧಾಂತದ ಮೇಲಿನ ಈ ಕುರುಡು ನಂಬಿಕೆಯು, ಸಾಂಕ್ರಾಮಿಕ ರೋಗ ಮತ್ತು ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲೂ ಸರ್ಕಾರದ ವೆಚ್ಚವು ಜಿಡಿಪಿಯ ಶೇಕಡಾ 10–11ನ್ನು ಮೀರದಂತೆ ಮಾಡಿದೆ.

ಕೇಂದ್ರ ಸರ್ಕಾರದ ಯೋಜನೆಗಳು/ಯೋಜನೆಗಳ ಮೇಲಿನ ವೆಚ್ಚವು 2020–21 ಮತ್ತು 2023–24ರ ನಡುವೆ ಜಿಡಿಪಿಯ 6.8 ಪ್ರತಿಶತದಿಂದ 4.9 ಪ್ರತಿಶತಕ್ಕೆ ಇಳಿದಿದೆ. ಕೇಂದ್ರ ಪ್ರಾಯೋಜಿತ ಯೋಜನೆಗಳ ಮೇಲಿನ ವೆಚ್ಚವೂ ಶೇ.1.9ರಿಂದ ಶೇ.1.6ಕ್ಕೆ ಇಳಿದಿದೆ.

ಕಳೆದ ಎರಡು ವರ್ಷಗಳಲ್ಲಿ, 2022–23 ಮತ್ತು 2023–24ರಲ್ಲಿ PM–ಕಿಸಾನ್, ಆಹಾರ ಸಬ್ಸಿಡಿ, ವಸತಿ (PM-AWAS) ಮತ್ತು MGNREGA ಮೇಲಿನ ವೆಚ್ಚಗಳಲ್ಲಿ ಸಂಪೂರ್ಣ ಮೊತ್ತದಲ್ಲಿ ಕಡಿತ ಮಾಡಲಾಗಿದೆ. 2023–24ರಲ್ಲಿ (ಪರಿಷ್ಕೃತ ಅಂದಾಜುಗಳು) ಈ ನಾಲ್ಕು ಪ್ರಮುಖ ಯೋಜನೆಗಳ ಮೇಲಿನ ಸಂಯೋಜಿತ ವೆಚ್ಚವು 2021–22ರಲ್ಲಿನ ವೆಚ್ಚಕ್ಕಿಂತ 24 ಪ್ರತಿಶತ ಕಡಿಮೆಯಾಗಿದೆ.

ಪ್ರಧಾನಮಂತ್ರಿ–ಉಜ್ವಲ ಯೋಜನೆಯು ಮೇ 2016ರಲ್ಲಿ ಪ್ರಾರಂಭವಾದಾಗಿನಿಂದ ಎಲ್‌ಪಿಜಿ ಸಂಪರ್ಕಗಳ ಸಂಖ್ಯೆಯನ್ನು 10 ಕೋಟಿಗೂ ಹೆಚ್ಚು ಹೆಚ್ಚಿಸಿದೆ, ಅದರಲ್ಲಿ ಸುಮಾರು 2.3 ಕೋಟಿ ಸಂಪರ್ಕಗಳನ್ನು 2020ರ ನಂತರದ ಉಜ್ವಲ 2.0 ಸಮಯದಲ್ಲಿ ಸೇರಿಸಲಾಗಿದೆ. ಈ 10 ಕೋಟಿ ಸಂಪರ್ಕಗಳು ಭಾರತದ ಎಲ್ಲಾ ಎಲ್‌ಪಿಜಿ ಸಂಪರ್ಕಗಳ ಸುಮಾರು 30 ಪ್ರತಿಶತದಷ್ಟು ಆಗುತ್ತವೆ. ಭಾರತದಲ್ಲಿ ಒಟ್ಟು ಎಲ್‌ಪಿಜಿ ಬಳಕೆಯ ಹೆಚ್ಚಳವು 2015–16 ಮತ್ತು 2019–20 ರ ನಡುವೆ 34 ಪ್ರತಿಶತದಷ್ಟು ಏರಿಕೆಯಾಗಿದೆ, ಇದು ಹಿಂದಿನ ನಾಲ್ಕು ವರ್ಷಗಳಲ್ಲಿ ನಡೆದ 28 ಶೇಕಡಾ ಹೆಚ್ಚಳಕ್ಕಿಂತ ಭಾರೀ ಹೆಚ್ಚೇನೂ ಅಲ್ಲ. ಉಜ್ವಲ 2.0 ಸಮಯದಲ್ಲಿ, ಬೆಳವಣಿಗೆಯು ಇನ್ನೂ ನಿಧಾನವಾಗಿದೆ, 2019–20 ಮತ್ತು 2023–24 ರ ನಡುವೆ ಸಂಪರ್ಕಗಳ ಹೆಚ್ಚಳವು ಕೇವಲ 11 ಪ್ರತಿಶತದಷ್ಟಿದೆ.

ಸರ್ಕಾರ ಏನು ಮಾಡಬೇಕಿತ್ತು? ಸಂಪನ್ಮೂಲಗಳನ್ನು ಸಂಗ್ರಹಿಸಲು ಶ್ರೀಮಂತರಿಗೆ ತೆರಿಗೆ ವಿಧಿಸಬೇಕಿತ್ತು ಮತ್ತು ಜನರಿಗೆ ಉತ್ತಮ ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ ಇತ್ಯಾದಿಗಳನ್ನು ಒದಗಿಸಲು ಹಣವನ್ನು ಖರ್ಚು ಮಾಡಬೇಕಾಗಿತ್ತು. ಹೆಚ್ಚು ಮತ್ತು ಉತ್ತಮ ಉದ್ಯೋಗಗಳನ್ನು ಸೃಷ್ಟಿಸುವ ಕೈಗಾರಿಕಾ ಹೂಡಿಕೆಯನ್ನು ಹೆಚ್ಚಿಸಬೇಕಿತ್ತು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸುವ ಮೂಲಕ ಹಣದುಬ್ಬರವನ್ನು ನಿಯಂತ್ರಿಸಬೇಕಿತ್ತು. ದಲಿತರು ಮತ್ತು ಆದಿವಾಸಿಗಳ ಸಬಲೀಕರಣಕ್ಕಾಗಿ ಹೆಚ್ಚಿನ ಕಲ್ಯಾಣ ವೆಚ್ಚವನ್ನು ಖಾತ್ರಿಪಡಿಸಬೇಕಿತ್ತು. ಬದಲಾಗಿ, ಅದು ಜನರ ಮೇಲೆ ದಾಳಿಯನ್ನು ಪ್ರಾರಂಭಿಸಿತು, ಅವರ ಮೇಲಿನ ಹೊರೆ ಮತ್ತು ಅವರ ಶೋಷಣೆ ಎರಡನ್ನೂ ಹೆಚ್ಚಿಸಿತು ಮತ್ತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಎರಡೂ ಕಾರ್ಪೊರೇಟ್‌ಗಳ ಲಾಭ ಮತ್ತು ಶೋಷಣೆಯನ್ನು ಹೆಚ್ಚಿಸಲು ತನ್ನ ಕೈಲಾದ ಎಲ್ಲವನ್ನೂ ಮಾಡಿತು.

(ಮೂಲ: ವಿಶ್ವಬ್ಯಾಂಕ್; ನೀತಿ ಆಯೋಗ; NSSO; MoSPI; WID; ಪಾರ್ಲಿಮೆಂಟ್ ಪ್ರಶ್ನೆಗಳು.)

ಆರ್ಥಿಕತೆಯನ್ನು ಬಲಪಡಿಸಿ!
ಬಡವರಿಗೆ ಪರಿಹಾರ ನೀಡಿ!
ಬಿಜೆಪಿಯನ್ನು ಸೋಲಿಸಿ!

ನ್ಯಾಯದ ಸೋಗಿನಲ್ಲಿ ಸುಪ್ರೀಂ ಕೋರ್ಟ್ ಗೆ 600 ವಕೀಲರ ಅನ್ಯಾಯದ ಪತ್ರ....

ಪುಟ 5 ರಿಂದ

ನಿರ್ಬಂಧಗಳನ್ನು ಪ್ರಶ್ನಿಸಿ ಸಲ್ಲಿಸಿದ ಮನವಿಗಳಿಗೆ ಸಂಬಂಧಿಸಿದ ವಿಚಾರಣೆಗಳು ನಡೆಯುತ್ತಿವೆ.

ಇದುವರೆಗೆ ಹೇಳಿದಂತೆ ಚುನಾವಣಾ ಆಯುಕ್ತರ ನೇಮಕವನ್ನು ತಡೆಹಿಡಿಯದಿದ್ದರೂ, ಅನುಕೂಲಕರ ರೀತಿಯಲ್ಲಿ ಏಕೆ ಮಾಡಲಾಗಿದೆ ಎಂದು ಸುಪ್ರೀಂ ಕೋರ್ಟ್ ಕೂಡ ಅಸಮಾಧಾನ ವ್ಯಕ್ತಪಡಿಸಿದೆ. ಮಾಧ್ಯಮ ಸಂಸ್ಥೆಗಳ ಮೇಲಿನ ಆರೋಪಗಳಲ್ಲಿ ಯಾವುದೇ ಪೂರ್ವಭಾವಿ ಕ್ರಮ ಕೈಗೊಳ್ಳಬಾರದು ಎಂಬುದು ಇತ್ತೀಚಿನ ತೀರ್ಪು. ಪ್ರಾಧ್ಯಾಪಕ ಜಿ.ಎನ್. ಸಾಯಿಬಾಬಾನನ್ನು ಬಿಡುಗಡೆ ಮಾಡುವಂತೆ, ಪ್ರಬೀರ್ ಪುರ್ಕಾಯಸ್ಥ ಮತ್ತು ಇತರರ ಅರ್ಜಿಗಳನ್ನು ಪರಿಗಣಿಸಲು ವಿವಿಧ ಹಂತದ ನ್ಯಾಯಾಲಯಗಳು ಸಿದ್ಧತೆ ನಡೆಸುತ್ತಿವೆ. ಜಾಮೀನು ನೀಡಲು ಕೆಳ ನ್ಯಾಯಾಲಯಗಳು ಭಯಪಡುವ ಅಗತ್ಯವಿಲ್ಲ ಎಂದು ಸ್ವತಃ ಸಿಜೆಐ ಚಂದ್ರಚೂಡ್ ಸ್ಪಷ್ಟಪಡಿಸಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ಕೆಲ ವಕೀಲರು ಅಬ್ಬರಿಸಿದಾಗ ಛೀಮಾರಿ ಹಾಕಿದ್ದಾರೆ. ಕೇಜ್ರಿವಾಲ್ ಅವರ ಬಂಧನದ ನಂತರ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರಾಕರಿಸಿದರೆ, ಸಂವಿಧಾನದ 163 ಮತ್ತು 164 ನೇ ವಿಧಿಯ ಅಡಿಯಲ್ಲಿ ಅಂತಹ ಅಗತ್ಯವಿಲ್ಲ ಎಂದು ದೆಹಲಿ ಹೈಕೋರ್ಟ್ ತೀರ್ಪು ನೀಡಿದ್ದು ಸಂಚಲನ ಉಂಟು ಮಾಡಿದೆ.

ಅಮೇರಿಕಾ, ಜರ್ಮನಿ ಮಾತ್ರವೇ ಅಲ್ಲ ವಿಶ್ವಸಂಸ್ಥೆ ಕೂಡಾ ಮಧ್ಯ ಪ್ರವೇಶಿಸಿ ಭಾರತದ ನ್ಯಾಯಾಂಗ ವ್ಯವಸ್ಥೆ ಸರಿಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಆಶಿಸುತ್ತೇವೆ ಎಂದು ನಿರೀಕ್ಷೆಯನ್ನು ವ್ಯಕ್ತಪಡಿಸಿವೆ. ವಿದೇಶಗಳ ಹಸ್ತಕ್ಷೇಪ ಎಂಬ ಪದವನ್ನು ಬಳಸಿದರೆ, ಈ ಬೆಳವಣಿಗೆ ಕಾರ್ಪೊರೇಟ್ ಕೇಸರಿ ಆಡಳಿತ ಕೂಟವನ್ನು ಬೆಚ್ಚಿಬೀಳಿಸಿದೆ. ಅದರ ಪರಿಣಾಮವೇ ಈ ಪತ್ರ.

ಸುಪ್ರೀಂ ಗೆ ಅಡ್ಡಿಪಡಿಸಲೆಂದೇ?

ಚುನಾವಣೆಯ ಸಂದರ್ಭದಲ್ಲಿ ಪ್ರತಿಪಕ್ಷಗಳ ವಿರುದ್ಧದ ಪ್ರಕರಣಗಳು, ಬಂಧನಗಳು ಮತ್ತು ಇಡಿ ದಾಳಿಗಳು ಆಡಳಿತಾರೂಢ ಬಿಜೆಪಿಗೆ ಲಾಭ ತರುತ್ತವೆ. ಸಮಾನತೆಯ ತತ್ವವನ್ನು ಉಲ್ಲಂಘಿಸುತ್ತದೆ. ದೇಶ ದೇಶಗಳಲ್ಲಿ ನಿರಂಕುಶ ಆಡಳಿಗಾರರು ಅನುಸರಿಸುವ ಒಂದು ಪ್ರಮುಖ ಕ್ರಮವಾದ ನಡೆ ಅದು. ಈ ಸಮಯದಲ್ಲಿ ಸುಪ್ರೀಂ ಕೋರ್ಟ್‌ನ ದೃಢ ನಿಲುವು ತುಂಬಾ ನಿರ್ಣಾಯಕವಾಗುತ್ತದೆ. ಸುಪ್ರೀಂ ಕೋರ್ಟ್ ಸೇರಿದಂತೆ ನ್ಯಾಯಾಂಗ ವ್ಯವಸ್ಥೆಯು ಅನೇಕ ಪ್ರಕರಣಗಳಲ್ಲಿ ಸಾಂವಿಧಾನಿಕ ವಿಮರ್ಶೆಗಳನ್ನು ಎದುರಿಸಿದೆಯಾದರೂ, ಈ ಅವಧಿಯಲ್ಲಿ ಸ್ವಲ್ಪ ಮಟ್ಟಿಗೆ ಕೇಂದ್ರಕ್ಕೆ ನುಂಗಲಾರದ ಕೆಲವು ನಿರ್ಧಾರಗಳು ಮತ್ತು ಆದೇಶಗಳು ಹೊರಬಿದ್ದಿದ್ದು ನಿಜ.

ಪ್ರಜಾಸತ್ತಾತ್ಮಕ ಸಂವಿಧಾನದ ರಕ್ಷಣೆಯನ್ನು ಬಯಸುವ ಕಾನೂನು ತಜ್ಞರು, ವಕೀಲರು, ಮಾಜಿ ನ್ಯಾಯಾಧೀಶರು ಮತ್ತು ಮಾಜಿ ಉನ್ನತ ಅಧಿಕಾರಿಗಳು ಕೂಡಾ ಆಗಾಗ್ಗೆ ಸಾಮಾನ್ಯವಾಗಿ ಆ ಮಟ್ಟಿಗೆ ಕರೆ ನೀಡುತ್ತಾರೆ. ಅಂತಹ ಪ್ರಯತ್ನಗಳನ್ನು ಕಳ್ಳತನದಲ್ಲಿ ವಿಫಲಗೊಳಿಸುವ ಉದ್ದೇಶದಿಂದ 600 ವಕೀಲರ ಸಹಿಯುಳ್ಳ ಈ ಸಾಮೂಹಿಕ ಪತ್ರ.

ಮುಖ್ಯ ನ್ಯಾಯಾಧೀಶರ ಮೇಲಿನ ನೇರ ದಾಳಿ

ಸುಪ್ರೀಂ ಕೋರ್ಟ್ ಮಾಜಿ ನ್ಯಾಯಮೂರ್ತಿ ಮದನ್ ಬಿ. ಲೋಕೂರ್ ಅವರು ಪತ್ರದ ಬಗ್ಗೆ ಪ್ರತಿಕ್ರಿಯಿಸಿ, ‘ಗೌರವಾನ್ವಿತ ಮುಖ್ಯ ನ್ಯಾಯಾಧೀಶರ ಮೇಲಿನ ನೇರ ದಾಳಿ ಈ ಪತ್ರ ಎಂದು ವರ್ಣಿಸಿದ್ದಾರೆ. ವಿವಿಧ ಸಂದರ್ಭಗಳಲ್ಲಿ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಮತ್ತು ಸಮಂಜಸವಾದ ಪ್ರತಿಕ್ರಿಯೆಗಳ ತಪ್ಪು ತಿಳುವಳಿಕೆಯಿಂದ ಇದನ್ನು ಬರೆದಿರಬಹುದು ಎಂದು ಪ್ರಸ್ತಾಪಿಸಿದ್ದಾರೆ. ಪಾಟ್ನಾ ಹೈಕೋರ್ಟ್‌ನ ಮಾಜಿ ನ್ಯಾಯಾಧೀಶೆ ಅಂಜನಾ ಪ್ರಕಾಶ್ ಪ್ರತಿಕ್ರಿಯಿಸಿ, ಈ ಪತ್ರದಲ್ಲಿ ಬಳಸಿರುವ ಭಾಷೆ ಸುಪ್ರೀಂ ಕೋರ್ಟ್‌ನ ಘನತೆಯನ್ನಾಗಲಿ ಅಥವಾ ಪತ್ರ ಬರೆದವರ ಬುದ್ಧಿವಂತಿಕೆಯನ್ನಾಗಲೀ ಪ್ರತಿಬಿಂಬಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸಾಂವಿಧಾನಿಕ ಮೌಲ್ಯಗಳಿಗೆ ಅನುಗುಣವಾಗಿ ಮಾತ್ರ ನ್ಯಾಯಾಲಯಗಳು ತೀರ್ಪು ನೀಡುತ್ತವೆ ವಿನಃ ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲ ಎಂದು ಹೇಳಿದರು. ಅದಕ್ಕೆ ಬದ್ಧರಾಗಿ ಕಾರ್ಯನಿರ್ವಹಿಸುವ ವಕೀಲರ ಪ್ರಾಮಾಣಿಕತೆಯನ್ನು ಪ್ರಶ್ನಿಸುವುದು ಸರಿಯಲ್ಲ ಎಂದು ಸಹಾ ಪ್ರತಿಕ್ರಿಯಿಸಿದರು.

ಮದ್ರಾಸ್ ಹೈಕೋರ್ಟ್ ಹಿರಿಯ ವಕೀಲ ಆರ್.ವೈಗೈ ಮತ್ತೊಮ್ಮೆ ನೇರವಾಗಿ ಹೇಳಿದ್ದಾರೆ. ಇವಿಎಂಗಳು, ಪೌರತ್ವ ತಿದ್ದುಪಡಿ ಕಾಯ್ದೆ ಇಂತಹ ಅತಿ ಮುಖ್ಯವಾದ ವಿಷಯಗಳ ಬಗ್ಗೆ ಸುಪ್ರೀಂ ಕೋರ್ಟ್ ತನಿಖೆ ನಡೆಸುತ್ತಿರುವ ಸಮಯದಲ್ಲಿ ಭಿನ್ನಾಭಿಪ್ರಾಯ, ದಬ್ಬಾಳಿಕೆ ಮತ್ತು ಮಾಧ್ಯಮ ಸ್ವಾತಂತ್ರ್ಯದಂತಹ ವಿಷಯಗಳ ಬಗ್ಗೆ ಕಾಳಜಿ ಹೆಚ್ಚುತ್ತಿರುವ ಸಮಯದಲ್ಲಿ ಸುಪ್ರೀಂ ಕೋರ್ಟ್ ತನ್ನ ಜವಾಬ್ದಾರಿಗಳನ್ನು ನಿರ್ವಹಿಸುವುದನ್ನು ತಡೆಯುವ ಉದ್ದೇಶವನ್ನು ಈ ಪತ್ರ ಹೊಂದಿದೆ ಎಂದು ನಿರ್ಧರಿಸಿದ್ದಾರೆ.

ದೆಹಲಿಯ ಹಿರಿಯ ವಕೀಲ ಚಂದರ್ ಉದಲು ಸಿಂಗ್ ಇತಿಹಾಸವನ್ನು ಕೂಡ ನೆನಪಿಸಿಕೊಂಡು ‘ನ್ಯಾಯಾಂಗವನ್ನು ಗುರಿಯಾಗಿಸಿ ಗಲ್ಲಿಗೇರಿಸುವಂತೆ ಒತ್ತಡ ಮಾಡುವುದು ಹಿಟ್ಲರನ ನಾಜಿ ಆಡಳಿತದ ಕಾಲದಿಂದಲೂ ನಿರಂಕುಶಾಧಿಕಾರಿಗಳು ಅದನ್ನು ಮಾಡುತ್ತಿದ್ದಾರೆ ಎಂದು ‘ವೈರ್’ ನಿಯತಕಾಲಿಕೆಯಲ್ಲಿ ಹೇಳಿದ್ದಾರೆ. ಅವರು ಈ ಹಿಂದೆ ಇದರ ಮೇಲೆ ಬರೆದ ಲೇಖನವನ್ನೂ ನೆನಪಿಸಿದ್ದಾರೆ. ಆದ್ದರಿಂದ ಈ ಅನ್ಯಾಯ ಪತ್ರದ ಅಗೋಚರ ಅಂಶಗಳನ್ನು ಗುರುತಿಸಿ ಎದುರಿಸುವುದು ಅನಿವಾರ್ಯವಾಗಿದೆ. ಚುನಾವಣೆ ಸಂದರ್ಭದಲ್ಲಿ ಇದು ಹೆಚ್ಚು ಮಹತ್ವದ್ದಾಗಿದೆ. ಜನರ ತೀರ್ಪು ಮತ್ತು ನ್ಯಾಯಾಲಯಗಳ ತೀರ್ಪಿನಲ್ಲಿ ನಂಬಿಕೆ ಇಲ್ಲದವರಿಗೆ ತಕ್ಕ ಪಾಠ ಕಲಿಸಬೇಕಿದೆ.

–ಕೃಪೆ ಪ್ರಜಾಶಕ್ತಿ (ಅನು: ಸಿಚಿ)



ಒಕ್ಕೂಟ ಸರ್ಕಾರವು 01 ಡಿಸೆಂಬರ್, 2018 ರಿಂದ ಜಾರಿಗೆ ಬರುವಂತೆ ಪಿಎಂ–ಕಿಸಾನ್ ಯೋಜನೆಯನ್ನು ಪ್ರಾರಂಭಿಸಿತು. ದೇಶಾದ್ಯಂತ ಕೃಷಿ ಯೋಗ್ಯ ಭೂಮಿ ಹೊಂದಿರುವ ಎಲ್ಲಾ ರೈತ ಕುಟುಂಬಗಳಿಗೆ ಆದಾಯದ ಬೆಂಬಲವನ್ನು ಒದಗಿಸುವುದು ಈ ಯೋಜನೆಯ ಉದ್ದೇಶ, ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಸಂಬಂಧಿಸಿದ ವೆಚ್ಚಗಳನ್ನು, ಹಾಗೆಯೇ ದೇಶೀಯ ಅಗತ್ಯಗಳನ್ನು ನೋಡಿಕೊಳ್ಳಲು ಇದು ಅನುವು ಮಾಡಿಕೊಡುತ್ತದೆ, ಅಂತಹ ವೆಚ್ಚಗಳನ್ನು ಪೂರೈಸಲು ಸಾಲದಾತರ ಹಿಡಿತದಲ್ಲಿ ಬೀಳದಂತೆ ರೈತರನ್ನು ರಕ್ಷಿಸಲು ಮತ್ತು ಕೃಷಿ ಚಟುವಟಿಕೆಗಳಲ್ಲಿ ಅವರ ನಿರಂತರತೆಯನ್ನು ಖಚಿತಪಡಿಸಿಕೊಳ್ಳಲು ಯೋಜನೆಯು ಉದ್ದೇಶಿಸಿದೆ ಎಂದು ಸರ್ಕಾರ ಹೇಳುತ್ತದೆ. ಆದರೆ, ಈ ಯೋಜನೆಯ ಹಿಂದೆ ಮೋದಿ ಸರ್ಕಾರದ ಹಲವು ಬಗೆಯ ಬಚ್ಚಿಟ್ಟ ಅಜೆಂಡಾಗಳಿವೆ.

ಮೋದಿ–10 ವರ್ಷಗಳು / ಭಾಗ–44

ಕಿಸಾನ್ ಸಮ್ಮಾನ್ ಯೋಜನೆಯ ಮರೆಯಲ್ಲಿವೆ ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಜಾರಿಗೆ ತರುವ ಹುನ್ನಾರಗಳು


"ನರೇಂದ್ರ ಮೋದಿಯವರು 'ಕಿಸಾನ್ ಸಮ್ಮಾನ್' ಯೋಜನೆಯ ಮೂಲಕ ರೈತರ ಖಾತೆಗೆ ಪ್ರತಿ ವರ್ಷ 6,000 ರೂ. ಹಾಕುತ್ತಿದ್ದಾರೆ. ಇದರಿಂದ ರೈತರ ಆದಾಯ ಹೆಚ್ಚಾಗಿದೆ. ಇದು ರೈತರ ಆರ್ಥಿಕ ಅಗತ್ಯಗಳನ್ನು ಪೂರೈಸಲು ಕಾರಣವಾಗಿದೆ. ರೈತರಿಗೆ ವರ್ಷಕ್ಕೆ 60 ಸಾವಿರ ಕೋಟಿ ರೂಪಾಯಿಗಳನ್ನು ಮೋದಿ ಸರ್ಕಾರ ಕೊಡುತ್ತಿದೆ. 2022–23 ರಲ್ಲಿ ಒಟ್ಟು ರೂ. 58,201.85 ಕೋಟಿಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಲಾಗಿದೆ. ಯೋಜನೆ ಪ್ರಾರಂಭವಾದಾಗಿಂದ 2023 ರ ಜುಲೈ ವರೆಗೆ 11 ಕೋಟಿಗೂ ಹೆಚ್ಚು ರೈತರಿಗೆ 2.60 ಲಕ್ಷ ಕೋಟಿ ರೂ.ಗಳನ್ನು ಸರ್ಕಾರ ವಿತರಿಸಿದೆ." ಬಿಜೆಪಿ ಸರ್ಕಾರದ ಸಾಧನೆಗಳ ಘೋಷಣೆಗಳಲ್ಲಿ ಇದೂ ಒಂದು. ಈ ಯೋಜನೆಯ ಮೂಲಕ, ಕೃಷಿ ಯೋಗ್ಯ ಭೂಮಿ ಹೊಂದಿರುವ ರೈತರ ಖಾತೆಗಳಿಗೆ ನಾಲ್ಕು ತಿಂಗಳಿಗೆ 2,000 ರೂ.ಗಳಂತೆ, ಮೂರು ಕಂತುಗಳಲ್ಲಿ ವರ್ಷಕ್ಕೆ 6,000 ರೂ ಗಳನ್ನು ನೇರ ನಗದು ಯೋಜನೆ (ಡಿಬಿಟಿ) ಮೂಲಕ ಹಾಕುತ್ತಿದೆ. ಇದು ತಿಂಗಳಿಗೆ 500 ರೂ. ದಿನಕ್ಕೆ 16 ರೂಪಾಯಿ 70 ಪೈಸೆ!! ಒಂದು ರೈತ ಕುಟುಂಬಕ್ಕೆ ದಿನಕ್ಕೆ ಇಷ್ಟು ಹಣ ಕೊಟ್ಟು ರೈತರ ಆದಾಯ ಹೆಚ್ಚಾಗಿದೆ ಎಂದು ಬಿಜೆಪಿಯವರು ಹೇಳತೊಡಗಿದ್ದಾರೆ.

ಸಿ. ಸಿದ್ದಯ್ಯ

ಮೋದಿ ರೈತರಿಗೆ ಇಷ್ಟಾದರೂ ಹಣದ ನೆರವು ನೀಡುತ್ತಿದ್ದಾರಲ್ಲವೇ? ಹಿಂದಿನ ಯಾವ ಸರ್ಕಾರವೂ ರೈತರಿಗೆ ಇಂತಹ ನೆರವು ನೀಡಿರಲ್ಲಿಲ್ಲ. ಇದನ್ನೂ ಟೀಕಿಸುವ ಅಗತ್ಯ ಏನಿದೆ? ಇಂತಹ ಪ್ರಶ್ನೆಗಳೂ ಎದುರಾಗಬಹುದು. ಆದರೆ, ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (PM-KISAN), ಯೋಜನೆಯ ಹಿಂದೆ ಮೋದಿ ಸರ್ಕಾರದ ಹಲವು ಬಗೆಯ ಬಚ್ಚಿಟ್ಟ ಅಜೆಂಡಾಗಳಿವೆ. ಅವುಗಳಲ್ಲಿ, ರಸಗೊಬ್ಬರ ಸೇರಿದಂತೆ ಕೃಷಿಗೆ ಬಳಕೆ ಮಾಡುವ ಪರಿಕರಗಳ ಮೇಲೆ ಮತ್ತು ವಿದ್ಯುತ್ ಬಳಕೆಗೆ ಹಾಗೂ ಕೃಷಿ ಸಾಲಗಳ ಮೇಲಿನ ಬಡ್ಡಿ ರಿಯಾಯ್ತಿಗೆ ಸರ್ಕಾರ ಕೊಡುತ್ತಿರುವ ಧನಸಹಾಯಗಳನ್ನು ಕಡಿತ ಮಾಡುವ ಮತ್ತು ಕ್ರಮೇಣವಾಗಿ ಸಬ್ಸಿಡಿ ವ್ಯವಸ್ಥೆಯನ್ನು, ಪಡಿತರ ವ್ಯವಸ್ಥೆಯನ್ನು ನಾಶಮಾಡುವ, ಎಲ್ಲವನ್ನೂ ಮುಕ್ತ ಮಾರುಕಟ್ಟೆಗೆ ತೆರೆದಿಡುವ ತಂತ್ರಗಳಿವೆ. ಕೃಷಿಯನ್ನು ಕಾರ್ಪೊರೇಟ್ ಕೃಷಿಯನ್ನಾಗಿ ಮಾಡುವ ತಂತ್ರವೂ ಅಡಗಿದೆ. ವಿಶ್ವಸಂಸ್ಥೆಯ ಜೊತೆ ಮಾಡಿಕೊಂಡಿರುವ ಗ್ಯಾಟ್ ಒಪ್ಪಂದದ ಷರತ್ತುಗಳನ್ನು ಪೂರೈಸುವ ಗುರಿಯೂ ಇದರಲ್ಲಿದೆ.

ರಸಗೊಬ್ಬರ ವಲಯವನ್ನು ಅನಿಯಂತ್ರಿತ ಮಾಡುವ ಕುರಿತು ಶಾಂತ ಕುಮಾರ್ ಸಮಿತಿ ವರದಿ ಹೇಳುವುದೇನು?

"ಆಹಾರ ನಿರ್ವಹಣೆಯ ಸಂಪೂರ್ಣ ವ್ಯವಸ್ಥೆಯು ರಾಷ್ಟ್ರೀಯ ಮತ್ತು ಕುಟುಂಬದ ಮಟ್ಟದಲ್ಲಿ ಆಹಾರ ಭದ್ರತೆಯನ್ನು ಒದಗಿಸುವ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವುದರಿಂದ, ದೇಶದಲ್ಲಿ ಉತ್ಪಾದಕತೆ ಮತ್ತು ಒಟ್ಟಾರೆ ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ರೈತರಿಗೆ ಸಾಕಷ್ಟು ಪ್ರೋತ್ಸಾಹದ ಅಗತ್ಯವಿದೆ ಎಂದು ಅರಿತುಕೊಳ್ಳಬೇಕು. ಭಾರತವು ರಸಗೊಬ್ಬರಗಳ ಮೇಲೆ ದೊಡ್ಡ ಪ್ರಮಾಣದ ಸಬ್ಸಿಡಿಯನ್ನು ನೀಡುತ್ತದೆ (2015 ರ ಬಜೆಟ್ ನಲ್ಲಿ ರೂ.72,000 ಕೋಟಿಗಳಿಗಿಂತ ಹೆಚ್ಚು ಮತ್ತು ಸುಮಾರು ರೂ.30,000–35,000 ಕೋಟಿಗಳ ಬಾಕಿ ಬಿಲ್ಲುಗಳು). ಡಿಎಪಿ ಮತ್ತು ಎಂಒಪಿ ಬೆಲೆಗಳಿಗೆ ಹೋಲಿಸಿದರೆ ಯೂರಿಯಾ ಬೆಲೆಗಳನ್ನು ಅತ್ಯಂತ ಕಡಿಮೆ ಮಟ್ಟದಲ್ಲಿ ನಿರ್ವಹಿಸಲಾಗುತ್ತದೆ. ಎನ್, ಪಿ ಮತ್ತು ಕೆಯ ಹೆಚ್ಚು ಅಸಮತೋಲನದ ಬಳಕೆಯನ್ನು ಸೃಷ್ಟಿಸುತ್ತದೆ. ರೈತರಿಗೆ ನೇರ ನಗದು ಸಬ್ಸಿಡಿ (ಪ್ರತಿ ಎಕರೆಗೆ ಸುಮಾರು ರೂ. 7000) ನೀಡಬೇಕೆಂದು ಉನ್ನತ ಮಟ್ಟದ ಸಮಿತಿ (HLC) ಶಿಫಾರಸು ಮಾಡುತ್ತದೆ ಮತ್ತು ರಸಗೊಬ್ಬರ ವಲಯವನ್ನು ನಂತರ ಅನಿಯಂತ್ರಿತ ಮಾಡಬಹುದು. ಇದು ಯೂರಿಯಾವನ್ನು ಕೃಷಿಯೇತರ ಬಳಕೆಗಳಿಗೆ ಹಾಗೂ ನೆರೆಯ ದೇಶಗಳಿಗೆ ರಫ್ತು ಮಾಡಲು ಸಹಾಯ ಮಾಡುತ್ತದೆ ಮತ್ತು ರಸಗೊಬ್ಬರ ಬಳಕೆಯ ದಕ್ಷತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ರೈತರಿಗೆ ಈ ರೀತಿಯ ನೇರ ನಗದು ಸಬ್ಸಿಡಿಯು ರಸಗೊಬ್ಬರಗಳು ಅಥವಾ ಇತರ ಒಳಹರಿವುಗಳನ್ನು ಖರೀದಿಸಲು, ಹೆಚ್ಚಿನ ಬಡ್ಡಿದರದಲ್ಲಿ ಲೇವಾದೇವಿದಾರರಿಂದ ಸಾಲ ಪಡೆಯುವವರಿಗೆ ಸಹಾಯ ಮಾಡಲು ಬಹಳ ಸಹಾಯ ಮಾಡುತ್ತದೆ ಎಂದು ಗಮನಿಸಬಹುದು." ಇದು ಶಾಂತ ಕುಮಾರ್ ವರದಿಯ ಶಿಫಾರಸ್ಸುಗಳಲ್ಲಿನ ಒಂದು ಅಂಶ. ಜನವರಿ–2015 ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.



ಭಾರತ ಸರ್ಕಾರವು ಆಗಸ್ಟ್ 2014 ರಲ್ಲಿ ಶಾಂತ ಕುಮಾರ್ ಅಧ್ಯಕ್ಷರಾಗಿ, ಆರು ಸದಸ್ಯರ ಉನ್ನತ ಮಟ್ಟದ ಸಮಿತಿಯನ್ನು (HLC) ಸ್ಥಾಪಿಸಿತು. ಕನಿಷ್ಠ ಬೆಂಬಲ ಬೆಲೆ (MSP) ಕಾರ್ಯಾಚರಣೆಗಳು, ಖರೀದಿ, ಸಂಗ್ರಹಣೆ ಮತ್ತು ಧಾನ್ಯಗಳ ವಿತರಣೆಯಲ್ಲಿ ಭಾರತದ ಆಹಾರ ನಿಗಮ (ಎಫ್‌ಸಿಐ)ದ ಪಾತ್ರವನ್ನು ಮರುನಿರ್ದೇಶಿಸುವ ಮೂಲಕ, ಸಂಪೂರ್ಣ ಆಹಾರ ಧಾನ್ಯ ನಿರ್ವಹಣಾ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುವುದು ಹೇಗೆ, ಉದ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆ (TPDS) ಇವುಗಳು ಸಮಿತಿಯ ಮುಂದಿದ್ದ ಪ್ರಮುಖ ವಿಷಯವಾಗಿತ್ತು. (ಪತ್ರಿಕಾ ಮಾಹಿತಿ ಬ್ಯೂರೋ, ಭಾರತ ಸರ್ಕಾರ; ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯ; 22–ಜನವರಿ–2015).

ರಸಗೊಬ್ಬರ ವಲಯವನ್ನು ಅನಿಯಂತ್ರಿತಗೊಳಿಸುವ, ಆ ಮೂಲಕ ರಸಗೊಬ್ಬರವನ್ನೂ ಮುಕ್ತ ಮಾರುಕಟ್ಟೆಗೆ ತೆರೆದಿಡುವ, ಇವುಗಳಿಗೆ ಕೊಡುತ್ತಿರುವ ಸಬ್ಸಿಡಿಯನ್ನು ಸಂಪೂರ್ಣವಾಗಿ ತೆಗೆದುಹಾಕುವ ನಿಟ್ಟಿನಲ್ಲಿ ಕಿಸಾನ್ ಸಮ್ಮಾನ್ ಯೋಜನೆ ಜಾರಿಗೆ ತರಲಾಗಿದೆ ಎಂಬುದು ಇದರಿಂದ ತಿಳಿಯುತ್ತದೆ. ಪೆಟ್ರೋಲ್, ಡೀಸಲ್, ಅಡುಗೆ ಅನಿಲ ಇವುಗಳನ್ನು ಅನಿಯಂತ್ರಿತಗೊಳಿಸಿ, ಇವುಗಳನ್ನು ಮುಕ್ತ ಮಾರುಕಟ್ಟೆಗೆ ತೆರೆದಿಟ್ಟಿರುವ ಪರಿಣಾಮದಿಂದ, ಅವುಗಳ ದರಗಳು ನಿಯಂತ್ರಣವಿಲ್ಲದೆ ಹೇಗೆ ಏರುತ್ತಿವೆ ಎಂಬುದನ್ನು ನಾವೀಗಾಗಲೇ ಅನುಭವಿಸುತ್ತಿದ್ದೇವೆ.

ಕೃಷಿ ಭೂಮಿ ಹೊಂದಿರದ ಕಾರ್ಮಿಕರಿಗೆ ಏಕಿಲ್ಲ?

PM-KISAN ಯೋಜನೆಯ ಫಲಾನುಭವಿಗಳು ಕೃಷಿಯೋಗ್ಯ ಭೂಮಿ ಹೊಂದಿರುವ ರೈತರನ್ನು ಮಾತ್ರ ಒಳಗೊಂಡಿರುತ್ತಾರೆ. ಈ ಯೋಜನೆಯು ದೇಶದ ಶೇ. 55 ರಷ್ಟಿರುವ ಕೃಷಿ ಕಾರ್ಮಿಕರನ್ನು ಒಳಗೊಳ್ಳುವುದಿಲ್ಲ. ಕೃಷಿ ಕಾರ್ಮಿಕರಿಗೆ ತಮ್ಮದೆಂಬ ಸ್ವಂತ ಜಮೀನು ಇರುವುದಿಲ್ಲ. ಇವರು ಬೇರೆಯವರ ಜಮೀನಿನಲ್ಲಿ ಕೆಲಸ ಮಾಡುತ್ತಾರೆ. ಇವರು ಕೂಲಿ ಅಥವಾ ಬೇರೊಬ್ಬರ ಜಮೀನಿನಲ್ಲಿ ತಾವು ಬೆಳೆದ ಬೆಳೆಯಲ್ಲಿ ಪಾಲು ಪಡೆಯುವ ಮೂಲಕ ಆದಾಯ ಗಳಿಸುತ್ತಾರೆ. ಕೃಷಿ ಕಾರ್ಮಿಕರಲ್ಲಿ ಕೃಷಿಕರು ಮತ್ತು ಗ್ರಾಮೀಣ ಕಾರ್ಮಿಕರು ಸೇರಿದ್ದಾರೆ. ಭಾರತದ ಒಟ್ಟು ಕೃಷಿ ಕಾರ್ಮಿಕರಲ್ಲಿ ಭೂರಹಿತ ಕೃಷಿ ಕಾರ್ಮಿಕರ ಪಾಲು 1951 ರಲ್ಲಿ ಶೇ. 28 ರಷ್ಟಿತ್ತು. ಇದು 2011 ರ ಸಮೀಕ್ಷೆಯ ಪ್ರಕಾರ ಶೇ. 55 ಕ್ಕೆ (ಒಟ್ಟು 26 ಕೋಟಿ ಕೃಷಿಕರಲ್ಲಿ ಕೃಷಿ ಕಾರ್ಮಿಕರ ಪಾಲು 14.4 ಕೋಟಿ) ಹೆಚ್ಚಾಗಿತ್ತು. ಅರ್ಧಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರುವ ಕೃಷಿ ಭೂಮಿ ಹೊಂದಿರದ ಕಾರ್ಮಿಕರಿಗೆ ಕಿಸಾನ್ ಸಮ್ಮಾನ್ ನಂತಹ ಆದಾಯ ಬೆಂಬಲದ ಯೋಜನೆ ಏಕಿಲ್ಲ?

ಭೂರಹಿತ ಕೃಷಿ ಕಾರ್ಮಿಕರೂ ಕೃಷಿಕರಲ್ಲವೇ? ಕೃಷಿಯಲ್ಲಿ ಇವರ ಪಾಲೂ ಇದೆಯಲ್ಲವೇ? ಅನೇಕ ರಾಜ್ಯಗಳಲ್ಲಿ ಭೂರಹಿತ ರೈತರ ದೊಡ್ಡ ಭಾಗವಾಗಿರುವ ಹಿಡುವಳಿದಾರ ರೈತರು, ಆದಾಯ ಬೆಂಬಲ ಪ್ರಯೋಜನಗಳನ್ನು ಪಡೆಯುವುದಿಲ್ಲ. ಮೋದಿ ಸರ್ಕಾರ ಭೂರಹಿತ ಕೃಷಿಕರನ್ನು ಈ ಯೋಜನೆಯಲ್ಲಿ ಸೇರಿಸಲು ಮುಂದಾಗಲಿಲ್ಲ. ಮಾತ್ರವಲ್ಲ, ಕೃಷಿ ಕಾರ್ಮಿಕರ ಬದುಕಿಗೆ ನೆರವಾಗುತ್ತಿರುವ, ಕೆಲಸ ಮಾಡಿ ಕೂಲಿ ಪಡೆಯುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೂ ಅನುದಾನ ಕಡಿತ ಮಾಡುತ್ತಾ ಬಂದಿದೆ. ಇದರಿಂದಲೇ ಕಿಸಾನ್ ಸಮ್ಮಾನ್ ತಂದಿರುವ ಸರ್ಕಾರದ ಉದ್ದೇಶ ಏನೆಂಬುದು ಅರಿವಾಗುತ್ತದೆ.

ಭೂರಹಿತ ಕೃಷಿಕರ ಪರಿಸ್ಥಿತಿ ಹೀಗಿದ್ದರೆ, ಅನೇಕ ರಾಜ್ಯಗಳಲ್ಲಿ ಭೂಮಿ ಹೊಂದಿರುವ ಬಹಳಷ್ಟು ರೈತರೂ ಕಿಸಾನ್ ಸಮ್ಮಾನ್ ಯೋಜನೆಯ ಲಾಭ ಪಡೆಯಲು ಸಾಧ್ಯವಾಗಿಲ್ಲ. ಸರಿಯಾದ ಭೂ ದಾಖಲೆಗಳ ಲಭ್ಯತೆ ಇಲ್ಲದಿರುವುದು, ಆಧಾರ್ ಡೇಟಾದ ಜನಸಂಖ್ಯಾ ದೃಢೀಕರಣ, ತಪ್ಪಾದ ಬ್ಯಾಂಕ್ ಖಾತೆಗಳು, ಗ್ರಾಮೀಣ ಪ್ರದೇಶಗಳಲ್ಲಿ ಕಳಪೆ ಇಂಟರ್ನೆಟ್ ಸಂಪರ್ಕ–PMKISAN ಪೋರ್ಟಲ್‌ನಲ್ಲಿ ಡೇಟಾ ಅಪ್‌ಲೋಡ್ ಮಾಡಲು ಅಡ್ಡಿಯುಂಟುಮಾಡುತ್ತದೆ.

ರಸಗೊಬ್ಬರದ ಮೇಲೂ ಜಿಎಸ್‌ಟಿ

ಒಂದೆಡೆ, ಕಿಸಾನ್ ಸಮ್ಮಾನ್ ಯೋಜನೆಯ ಮೂಲಕ ಒಕ್ಕೂಟ ಸರ್ಕಾರ ಪುಟ 14 ಕ್ಕೆ

C2+50% ಸೂತ್ರದಂತೆ ಬೆಂಬಲ ಬೆಲೆ ನಿಗದಿ ಮಾಡಿದ್ದರೆ

ಕೃಷಿ ಭೂಮಿ ಇರುವ ರೈತರಿಗೆ ಕಿಸಾನ್ ಸಮ್ಮಾನ್ ಮೂಲಕ ದಿನವೊಂದಕ್ಕೆ 17 ರೂ. ನೆರವು ನೀಡುವ ಬದಲಾಗಿ, ರೈತರು ಬೆಳೆದ ಬೆಳೆಗಳಿಗೆ ಡಾ. ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ C2+50% ಸೂತ್ರದಂತೆ ಬೆಂಬಲ ಬೆಲೆ ನಿಗದಿ ಮಾಡಿದ್ದರೆ, ರೈತರಿಗೆ ಬಹಳಷ್ಟು ಆದಾಯ ಬರುತ್ತಿತ್ತು. ಉದಾಹರಣೆಗೆ, ಒಂದು ನಿರ್ದಿಷ್ಟ ಗುಣಮಟ್ಟದ ಭತ್ತಕ್ಕೆ ಇಂದಿನ ಕನಿಷ್ಟ ಬೆಂಬಲ ಬೆಲೆ (MSP) ಕ್ವಿಂಟಲ್ ಗೆ ರೂ.2183 ಆಗಿದೆ. ರಾಜ್ಯಗಳ C2 ವೆಚ್ಚದ ಸೂತ್ರದ ಪ್ರಕಾರ ಸರಾಸರಿ ಕ್ವಿಂಟಲ್ ಗೆ ರೂ. 2139. C2+50 % ಸೂತ್ರದಂತೆ ಇದು ಕ್ವಿಂಟಲ್ ಗೆ ರೂ.3208.50 ಆಗಿರಬೇಕು. ಸರ್ಕಾರದ ಇಂದಿನ ಬೆಂಬಲ ಬೆಲೆಯ ನೀತಿಯಿಂದಾಗಿ ರೈತರು ಒಂದು ಕ್ವಿಂಟಲ್ ಭತ್ತಕ್ಕೆ ಅಂದಾಜು 1,069 ರೂಪಾಯಿ ನಷ್ಟ ಹೊಂದುತ್ತಾರೆ. C2+50 % ಸೂತ್ರದಂತೆ ಬೆಂಬಲ ಬೆಲೆ ನಿಗದಿಯಾಗಿದ್ದರೆ, ಒಂದು ಎಕರೆಯಲ್ಲಿ ಸರಾಸರಿ 40 ಕ್ವಿಂಟಲ್ ಭತ್ತ ಬೆಳೆಯುವ ರೈತ, ಒಂದು ಬೆಳೆಗೆ 42 ಸಾವಿರ ರೂ.ಗಳ ಹೆಚ್ಚುವರಿ ಹಣ ಪಡೆಯುತ್ತಿದ್ದರು.

‘ಪತಂಜಲಿ’ಯ ಬಾಬಾ ರಾಮ್ ದೇವ್– ಬಾಲಕೃಷ್ಣರಿಗೆ ಸುಪ್ರಿಂ ಕೋರ್ಟ್ ಛೀಮಾರಿ’.........


ಪುಟ 16 ರಿಂದ

ಔಷಧೀಯ ಗುಣಗಳಿವೆ ಎಂದು ಹೇಳಿ, ಗೋಮೂತ್ರ ಕುಡಿಯಲು ಶಿಫಾರಸ್ಸು ಮಾಡುವ ರಾಮದೇವ್, 2021 ರ ಮೇನಲ್ಲಿ, ಹಿಂದೆ ‘ಅಲೋಪತಿ’ ಎಂದು ಕರೆಯಲಾಗುತ್ತಿದ್ದ, ಆಧುನಿಕ ವೈದ್ಯಕೀಯ ವಿಜ್ಞಾನವನ್ನು ‘ಸ್ಟುಪಿಡ್ ಸೈನ್ಸ್’ (ಮೂರ್ಖ ವಿಜ್ಞಾನ) ಎಂದು ದೂಷಿಸಿದ್ದರು. ಇದಲ್ಲದೇ ಆಧುನಿಕ ವೈದ್ಯಕೀಯ ಪದ್ಧತಿಯ ಔಷಧಗಳಿಂದ ತೀವ್ರ ಅಡ್ಡ ಪರಿಣಾಮಗಳು ಉಂಟಾಗುತ್ತವೆ ಎಂದೂ, ಇದನ್ನು ಅರಿತು ಸಾಕಷ್ಟು ಜನ ‘ಅಲೋಪತಿ’ ವೈದ್ಯರು ಆಯುರ್ವೇದ ಪದ್ಧತಿಯ ಕಡೆಗೆ ಬರುತ್ತಿದ್ದಾರೆ ಎಂದೂ, ಸದ್ಯದಲ್ಲಿಯೇ ಹೀಗೆ ತಾನು ಒಂದು ಸಾವಿರ ವೈದ್ಯರನ್ನು ‘ಅಲೋಪತಿ’ ಪದ್ಧತಿಯಿಂದ ಆಯುರ್ವೇದಕ್ಕೆ ಕರೆ ತರುತ್ತೇನೆ ಎಂದೂ ಸಾರಿದ್ದರು.

ಯಾವುದೇ ಒಬ್ಬ ತರ್ಕಬದ್ಧವಾಗಿ ಯೋಚಿಸುವ ಸಾಮಾನ್ಯ ವ್ಯಕ್ತಿ ತನ್ನ ಜೀವನಾನುಭವದ ಆಧಾರದಲ್ಲಿ ಹಲವು ವೈಜ್ಞಾನಿಕ ಸತ್ಯಗಳನ್ನು ಅರ್ಥ ಮಾಡಿಕೊಳ್ಳಬಲ್ಲ. ಗಮನಿಸಿ, ಯಾವ ವೈದ್ಯಕೀಯ ಪದ್ಧತಿಯೂ ಪರಿಪೂರ್ಣ ಅಲ್ಲ. ಯಾವ ಪದ್ದತಿಯ ಔಷಧ–ಚಿಕಿತ್ಸೆಗಳೂ ಅಡ್ಡ ಪರಿಣಾಮಗಳಿಂದ ಮುಕ್ತವಲ್ಲ. ಪರಿಣಾಮ ಇದ್ದ ಮೇಲೆ ಕೆಲವು ಅಡ್ಡಪರಿಣಾಮಗಳೂ ಇದ್ದೇ ಇರುತ್ತವೆ ಎನ್ನುತ್ತದೆ ವಿಜ್ಞಾನ. ಆಧುನಿಕ ವೈದ್ಯಕೀಯ ವಿಜ್ಞಾನದಲ್ಲಿ ಅಡ್ಡ ಪರಿಣಾಮಗಳಿವೆ ನಿಜ. ಆದರೆ ಆ ಅಡ್ಡ ಪರಿಣಾಮಗಳ ಕುರಿತು ವೈದ್ಯಕೀಯ ವಿಜ್ಞಾನವೇ ಸಂಶೋಧನೆ ನಡೆಸುತ್ತದೆ. ಅಡ್ಡ ಪರಿಣಾಮಗಳು ಇರುವುದನ್ನು ಒಪ್ಪಿಕೊಳ್ಳುತ್ತದೆ. ಮತ್ತು ಅಡ್ಡ ಪರಿಣಾಮದ ಸಮಸ್ಯೆ ನಿವಾರಿಸಲೂ ಹೊಸ ಹೊಸ ಸಂಶೋಧನೆಗಳನ್ನು ಕೈಗೊಂಡು, ಔಷಧ–ಚಿಕಿತ್ಸಾ ವಿಧಾನವನ್ನು ನಿರಂತರ ಸುಧಾರಿಸಲು ಶ್ರಮಿಸುತ್ತದೆ. ಇಂತಹ ಸ್ವಯಂ ವಿಮರ್ಶೆ, ಸ್ವಯಂ ತನ್ನನ್ನು ತಾನೇ ಸುಧಾರಿಸಿಕೊಳ್ಳುವ ಕ್ರಮ–ಧೋರಣೆ ಎಲ್ಲ ವೈದ್ಯಕೀಯ ಪದ್ಧತಿಗಳಲ್ಲೂ ಬರಬೇಕು. ಇದು ಒಂದು ವೈದ್ಯಕೀಯ ಪದ್ಧತಿಯನ್ನು ಮತ್ತೊಂದರ ವಿರುದ್ಧ ಎತ್ತಿ ಕಟ್ಟುವ ಪ್ರಶ್ನೆ ಅಲ್ಲ. ಪ್ರಾಚೀನ ಭಾರತದ ವಿಜ್ಞಾನ ಪರಂಪರೆಯ ಬಗೆಗೆ, ಆಯುರ್ವೇದ ವೈದ್ಯ ಪದ್ಧತಿಯ ಬಗೆಗೆ ಆಳವಾದ ಅಧ್ಯಯನ ಮಾಡಿ, ಆ ಬಗೆಗೆ ಅಪಾರ ಮೆಚ್ಚುಗೆ–ಗೌರವ ಇಟ್ಟುಕೊಂಡಿದ್ದ ಭಾರತದ ಖ್ಯಾತ ವಿಮಾನ ವಿಜ್ಞಾನಿ ರೊದ್ದಂ ನರಸಿಂಹ ಅವರ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ರೊದ್ದಂ ಅವರ ಪ್ರಕಾರ ಆಯುರ್ವೇದವು ಜಗತ್ತಿಗೆ ಭಾರತದ ಹೆಮ್ಮೆಯ ಕೊಡುಗೆ. ಆದರೆ ನೂರಾರು–ಸಾವಿರಾರು ವರ್ಷಗಳ ಹಿಂದೆ ಜೀವ ರಸಾಯನ ವಿಜ್ಞಾನ ಈಗಿನಂತೆ ಬೆಳೆದಿರಲಿಲ್ಲ. ಹೀಗಾಗಿ ಆಯುರ್ವೇದದ ಔಷಧ–ಚಿಕಿತ್ಸೆಗಳನ್ನು ಈಗ ವೈಜ್ಞಾನಿಕ ವಿಧಾನದಲ್ಲಿ ಸಂಶೋಧನೆಗೆ ಪರಿಶೀಲನೆಗೆ ಗುರಿಪಡಿಸಬೇಕು. ಅದರಲ್ಲಿ ಸತ್ವಯುತವಾದುದನ್ನು ಮಾತ್ರ ಒಪ್ಪಿಕೊಳ್ಳಬೇಕು. ನಾವು ಈ ಮಾತನ್ನು ಎಲ್ಲ ವೈದ್ಯಕೀಯ ಪದ್ಧತಿಗಳಿಗೂ ಅನ್ವಯಿಸಬಹುದು.

ಸತ್ಯವನ್ನು ಮರೆಮಾಡುವ ‘ಕಣ್ಣಿನ ಪೊರೆ’

ಇಂದು ಆಧುನಿಕ ವೈದ್ಯಕೀಯ ವಿಜ್ಞಾನದಲ್ಲಿ ಹಿಂದೆಲ್ಲ ಪರಿಹಾರಗಳಿಲ್ಲದೇ ಕಗ್ಗಂಟಾಗಿದ್ದ ನೂರೆಂಟು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಪರಿಣಾಮಕಾರಿ ಪರಿಹಾರ ಕಂಡುಕೊಳ್ಳುವುದು ಸಾಧ್ಯವಾಗಿದೆ. ಹಿಂದೆ ‘ಪವಾಡ’ಗಳು ಎನ್ನಲಾಗುತ್ತಿದ್ದಂತಹ ಸಾಧನೆ ಮಾಡುವುದು ಸಾಧ್ಯವಾಗುತ್ತಿದೆ. ಕಣ್ಣಿನಲ್ಲಿ ಪೊರೆ ಬೆಳೆದು ಕಣ್ಣು ಏನೂ ಕಾಣದಂತಾಗಿದ್ದವರಿಗೂ ಪೊರೆ ತೆಗೆದು ಕಣ್ಣು ಕಾಣುವಂತೆ ಮಾಡಲಾಗುತ್ತದೆ. ಕಣ್ಣಿಲ್ಲದವರಿಗೆ ಸತ್ತ ವ್ಯಕ್ತಿಯ ಕಣ್ಣುಗಳನ್ನು ಹಾಕಿ ಕಣ್ಣು ಕಾಣುವಂತೆ ಮಾಡಲಾಗುತ್ತದೆ. ಅಪಘಾತಗಳಲ್ಲಿ ಕೈ ಅಥವಾ ಕಾಲು ತುಂಡಾಗಿ ದೂರ ಹೋಗಿ ಬಿದ್ದಿದ್ದರೂ ತಕ್ಷಣದ ಕ್ರಮವಹಿಸಿದರೆ ಅವುಗಳನ್ನು ಮತ್ತೆ ಜೋಡಿಸಿ ಕೈ ಕಾಲುಗಳು ಕೆಲಸ ಮಾಡುವಂತೆ ಮಾಡಲಾಗುತ್ತದೆ. ಹೊಟ್ಟೆಯಿಂದ ಹೊಕ್ಕು ಬೆನ್ನಿನಲ್ಲಿ ಹೊರಬಂದ ಸರಳನ್ನು ತೆಗೆದು ವ್ಯಕ್ತಿಯನ್ನು ಬದುಕಿಸಿಕೊಡಲಾಗುತ್ತದೆ. ನಾನಾ ಕಾರಣಗಳಿಗೆ ಸಹಜ ಹೆರಿಗೆ ಕಷ್ಟವಾದರೆ ತಾಯಿ ಮತ್ತು ಮಗುವಿಗೆ ಅಪಾಯವಾಗುವುದನ್ನು ತಪ್ಪಿಸಲು ತಾಯಿಯ ಹೊಟ್ಟೆಯನ್ನು ಕೊಯ್ದು ಮಗುವನ್ನು ಹೊರತೆಗೆದು ಇಬ್ಬರ ಜೀವವನ್ನೂ ರಕ್ಷಿಸಲಾಗುತ್ತದೆ. ಅಪಘಾತಗಳಲ್ಲಿ ರಕ್ತನಷ್ಟವಾಗಿ ಸಾವಿನ ಅಂಚು ತಲುಪಿದ್ದ ವ್ಯಕ್ತಿಗೂ ಸೂಕ್ತವಾದ ಗುಂಪಿನ ರಕ್ತವನ್ನು ನೀಡಿ ಜೀವವನ್ನು ಉಳಿಸಲಾಗುತ್ತದೆ. ರಕ್ತನಾಳದ ಮೂಲಕವೇ ಹೃದಯಕ್ಕೆ ಸೂಕ್ತ ಸಾಧನವನ್ನು ಕಳಿಸಿ ಎದೆಯನ್ನು ಹೃದಯವನ್ನು ಕೊಯ್ಯದೇ ಹಲವಾರು ಬಗೆಯ ಶಸ್ತ್ರ ಚಿಕಿತ್ಸೆಗಳನ್ನು ಮಾಡಿ, ಸಾಧನಗಳನ್ನು ಜೋಡಿಸಿ ಹೃದಯದ



ಸಮಸ್ಯೆಗಳನ್ನು ನಿವಾರಿಸಲಾಗುತ್ತದೆ. ಬೆಂಗಳೂರಿನ ಒಂದು ಆಧುನಿಕ ಆಸ್ಪತ್ರೆಯ ರಕ್ತ ಪರೀಕ್ಷೆಗಳ ಪಟ್ಟಿಯಲ್ಲಿ ಸು. 350 ಕ್ಕೂ ಹೆಚ್ಚು ಬಗೆಯ ರಕ್ತ ಪರೀಕ್ಷೆ ಮಾದರಿಗಳಿವೆ. ಹೀಗೆ ಅಗತ್ಯವಾದ ರಕ್ತ ಪರೀಕ್ಷೆ, ಮಲ, ಮೂತ್ರ ಪರೀಕ್ಷೆಗಳ ಮೂಲಕ ಎಷ್ಟೋ ರೋಗಗಳನ್ನು ಅಥವಾ ಅನಾರೋಗ್ಯದ ಕಾರಣಗಳನ್ನು ನಿಖರವಾಗಿ ಕಂಡುಕೊಂಡಲು ಸಾಧ್ಯವಾಗುತ್ತದೆ. ಚಿಕಿತ್ಸೆ ಸುಲಭವಾಗುತ್ತದೆ. ಪ್ಲೇಗ್, ದಡಾರ, ಸಿಡುಬು ಮುಂತಾದ ಎಷ್ಟೋ ಭೀಕರ ಕಾಯಿಲೆಗಳನ್ನು ಜಗತ್ತಿನಿಂದಲೇ ಅಳಿಸಿ ಹಾಕಲಾಗಿದೆ. ಪೋಲಿಯೋ ಅದೇ ಹಾದಿಯಲ್ಲಿದೆ. ‘ಮನೋರೋಗಕ್ಕೆ ಮದ್ದಿಲ್ಲ’ ಎನ್ನಲಾಗುವ ಮಾತನ್ನೇ ಸುಳ್ಳು ಮಾಡಿ ಆಧುನಿಕ ವೈದ್ಯ ವಿಜ್ಞಾನವು ಮನೋರೋಗಕ್ಕೂ ಪರಿಣಾಮಕಾರಿ ಔಷಧಗಳನ್ನು ಕಂಡು ಹಿಡಿದಿದೆ. ಜಗತ್ತಿನಲ್ಲಿ ಕೋಟಿ ಕೋಟಿ ಜನರ ಮಾನಸಿಕ ಆರೋಗ್ಯವನ್ನು ಕಾಪಾಡಿದೆ. ಹೀಗೆ ಬರೆಯುತ್ತಾ ಹೋದರೆ ಅದೇ ಒಂದು ದೊಡ್ಡ ಪಟ್ಟಿಯಾಗುತ್ತದೆ. ಇಷ್ಟಾದರೂ ಯಾಕೋ ಕೆಲವರಿಗೆ ಹಳೆಯ ವೈದ್ಯಕೀಯ ಪದ್ಧತಿಗಳನ್ನು ವೈಭವೀಕರಿಸುವುದರಲ್ಲಿ ಮತ್ತು ಆಧುನಿಕ ವೈದ್ಯಕೀಯ ಪದ್ಧತಿಯನ್ನು ನಿಂದಿಸುವುದರಲ್ಲಿ ಆಸಕ್ತಿ. (ವ್ಯಾಪಾರೀಕರಣ ಎಂಬುದು ಎಲ್ಲ ವೈದ್ಯಕೀಯ ಪದ್ಧತಿಯಲ್ಲೂ ಇದೆ. ಅದನ್ನು ವೈದ್ಯಕೀಯ ವಿಜ್ಞಾನಕ್ಕೆ ತಳುಕು ಹಾಕಬಾರದು.)

ಆಧುನಿಕ ವೈದ್ಯಕೀಯ ವಿಜ್ಞಾನ ಪದ್ಧತಿಗೆ ಪರ್ಯಾಯ ಎಂದು ಹೇಳಿಕೊಳ್ಳುವ ಪದ್ಧತಿಗಳ ಎಷ್ಟೋ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ‘ತುರ್ತು ಚಿಕಿತ್ಸೆ ಲಭ್ಯವಿಲ್ಲ’ ಎಂಬ ದೊಡ್ಡ ಬೋರ್ಡುಗಳನ್ನು ಆಸ್ಪತ್ರೆಯ ಮುಂಬಾಗಿಲಿನಲ್ಲಿಯೇ ಹಾಕಿರುವುದನ್ನು ನಾವು ಯಾರಾದರೂ ನೋಡಬಹುದು. ಇದರ ಅರ್ಥವೇನು?

ವೈದ್ಯರೂ ಮನುಷ್ಯರೇ

ಆಧುನಿಕ ವೈದ್ಯ ಪದ್ಧತಿಯ ವೈದ್ಯರೂ ಮನುಷ್ಯರೇ. ಆಧುನಿಕ ವೈದ್ಯಕೀಯ ಪದ್ಧತಿಯಿಂದ ವೈದ್ಯರಿಗೆ ಯಾವುದೇ ಕಾಯಿಲೆ ಬರದಂತೆ ತಡೆಯಬಹುದು ಎಂದು ವೈದ್ಯಕೀಯ ವಿಜ್ಞಾನ ಎಲ್ಲಿಯೂ ಪ್ರತಿಪಾದಿಸಿಲ್ಲ. ಹೀಗಾಗಿ ಈ ವಿಷಯದಲ್ಲಿ ರಾಮ್ ದೇವ್ ಅವರ ಪ್ರಶ್ನೆ ಹಾಸ್ಯಾಸ್ಪದ ಎನ್ನದೇ ಬೇರೆ ದಾರಿಯಿಲ್ಲ.

ಆಯುರ್ವೇದ ಮತ್ತು ಅಡ್ಡ ಪರಿಣಾಮಗಳು

ಆಯುರ್ವೇದ ಪದ್ಧತಿಯ ಔಷಧ–ಚಿಕಿತ್ಸೆಗಳಲ್ಲಿ ಅಡ್ಡ ಪರಿಣಾಮಗಳಿಲ್ಲ ಎಂದು ತಪ್ಪಾಗಿ ಗ್ರಹಿಸಲಾಗಿದೆ ಮತ್ತು ಆ ರೀತಿ ವ್ಯವಸ್ಥಿತವಾಗಿ ನಂಬಿಸಲಾಗಿದೆ. ಆದರೆ ಅದು ನಿಜವಲ್ಲ. ಆಯುರ್ವೇದ ಔಷಧಗಳಲ್ಲಿ ಅರ್ಸೆನಿಕ್, ಸೀಸ, ಪಾದರಸ ಮುಂತಾದ ಅಪಾಯಕಾರಿ ರಾಸಾಯನಿಕ ವಸ್ತುಗಳು, ಆರೋಗ್ಯಕ್ಕೆ ಮಾರಕವಾಗಬಹುದಾದ ಅಪಾಯಕಾರಿ ಮಟ್ಟದಲ್ಲಿ ಇರುವುದನ್ನು ಹಲವಾರು ಸಂಶೋಧನೆಗಳಲ್ಲಿ ಪತ್ತೆ ಹಚ್ಚಲಾಗಿದೆ. (ಉದಾ: ಚಂಡಿಘಡದ ಆಯುರ್ವೇದ ಉತ್ಪನ್ನಗಳ ಕುರಿತು 2017 ರ ಸಂಶೋಧನೆ. ಎನ್.ಎಲ್.ಎಮ್.– ಅಧ್ಯಯನ ವರದಿ)

ಆತಂಕಗಳ ದುರ್ಬಳಕೆ–ಸುಳ್ಳೌಷಧ

ಕರ್ನಾಟಕದಲ್ಲಿ ಡಾ. ಕಜೆ ಎಂಬ ಆಯುರ್ವೇದ ವೈದ್ಯರು ತಾವು ಕೊರೊನಾಗೆ ಔಷಧ ಕಂಡು ಹಿಡಿದಿರುವುದಾಗಿ ಪ್ರಚಾರ ಮಾಡಿಕೊಂಡದ್ದು ನಮಗೆಲ್ಲ ಗೊತ್ತು. ಅವರೇ ಹೇಳಿಕೊಂಡಂತೆ ಅವರು ಔಷಧ ಪ್ರಯೋಗ ಮಾಡಿದ್ದು ಕೇವಲ ಹತ್ತು ಜನರ ಮೇಲೆ. ಅದೂ ಸಹ ಬೇರೆ ರೀತಿಯ ಗಂಭೀರ ಆರೋಗ್ಯ ಸಮಸ್ಯೆಗಳಿಲ್ಲದ ಆರೋಗ್ಯವಂತ ವ್ಯಕ್ತಿಗಳ ಮೇಲೆ. ಆ ಹೊತ್ತಿಗಾಗಲೇ ಭಾರತವೂ ಸೇರಿದಂತೆ ಜಗತ್ತಿನಲ್ಲಿ ಕೋಟ್ಯಂತರ ಜನರು ಕೊರೊನ ಸೋಂಕಿಗೆ ತುತ್ತಾಗಿ, ಯಾವ ಚಿಕಿತ್ಸೆ–ಔಷಧವೂ ಇಲ್ಲದೇ ಅವರಿಗೆ ತಾನೇ ತಾನಾಗಿಯೇ ಕಾಯಿಲೆ ವಾಸಿಯಾಗಿತ್ತು, ಎಷ್ಟೋ ಜನಕ್ಕೆ ಕೊರೊನ ಸೋಂಕು ಬಂದು ಹೋಗಿರುವುದು ಸಹ ಗೊತ್ತಾಗಿಲ್ಲ ಎಂಬುದನ್ನು ವಿಜ್ಞಾನ ಗುರುತಿಸಿತ್ತು. ಆಧುನಿಕ ವಿಜ್ಞಾನದಲ್ಲಿ ಒಂದು ಔಷಧ ಗ್ರಾಹಕರ ಬಳಕೆಗೆ ಸಿಗುವ ಮುಂಚೆ, ಅದು ಪರಿಣಾಮಕಾರಿ ಮತ್ತು ಅಪಾಯರಹಿತ ಎಂದು ನಿರ್ಧರಿಸುವ ಸಂಬಂಧ ಹಲವಾರು ಹಂತಗಳ, ಹಲವಾರು ರೀತಿಯ ಪ್ರಯೋಗಗಳು, ಪರಿಶೀಲನೆ, ಮರು ಪರಿಶೀಲನೆ, ತಜ್ಞ ಸಂಸ್ಥೆಗಳ ವಿಚಾರಣೆ–ವಿಶ್ಲೇಷಣೆಗಳನ್ನು ಹಾದು ಬರಬೇಕಾಗುತ್ತದೆ. ಹಾಗೆ ಸಹಸ್ರಾರು ಜನರ ಮೇಲೆ ಕ್ಲಿನಿಕಲ್ ಪ್ರಯೋಗಗಳ ಫಲಿತಾಂಶವನ್ನು ಎಚ್ಚರಿಕೆಯಿಂದ ಗಮನಿಸಲಾಗುತ್ತದೆ. ಇಂತಹ ಯಾವ ಪರಿಶೀಲನೆ, ಪ್ರಯೋಗ, ವಿಶ್ಲೇಷಣೆಗಳೇ ಇಲ್ಲದೇ, ಸತ್ಯವನ್ನು ಮರೆಮಾಚಿ ಕೊರೊನ ಬಗೆಗೆ ಸಾಮಾನ್ಯ ಜನರಲ್ಲಿದ್ದ ಆತಂಕದ ಭಾವನೆಯನ್ನು ದುರ್ಬಳಕೆ ಮಾಡಿಕೊಂಡು ದುರ್ಲಾಭ ಮಾಡಿಕೊಂಡಿದೆ ಎಂಬ ಕಾರಣಕ್ಕೇ ಚೆನ್ನೈ ಹೈಕೋರ್ಟ್ ಪತಂಜಲಿಗೆ ದಂಡ ವಿಧಿಸಿದ್ದು.

ಅಪಾರ ಆಸ್ತಿ–ಪಾಸ್ತಿ ಗಳಿಕೆ

2022 ರಲ್ಲಿ ಬಾಬಾ ರಾಮ್ ದೇವ್ ಅವರ ವೈಯುಕ್ತಿಕ ಆಸ್ತಿ 1,600 ಕೋಟಿ ರೂಪಾಯಿಗಳು ಎಂದು ಅಂದಾಜಿಸಲಾಗಿತ್ತು. ಪತಂಜಲಿ ಆಯುರ್ವೇದ ಲಿ.ನ ಶೇ. 96 ರಷ್ಟು ಪಾಲು ಹೊಂದಿರುವ ಅದರ ಸಿ.ಇ.ಓ. ಬಾಲಕೃಷ್ಣ ಅವರ ಆಸ್ತಿ 2.3 ಶತಕೋಟಿ ಅಮೆರಿಕನ್ ಡಾಲರ್(191,583,215,000 ರೂಪಾಯಿ) ಎಂದು ಹೇಳಲಾಗಿದೆ. 2020 ರ ಒಂದೇ ವರ್ಷದ ಪತಂಜಲಿಯ ವಹಿವಾಟು 9,022.71 ಕೋಟಿ ಎಂದು ದಾಖಲಾಗಿದೆ.

ಸಾವಿರಾರು ಕೋಟಿ ರೂಪಾಯಿಗಳ ವಹಿವಾಟು, ಅಪಾರ ಆಸ್ತಿಪಾಸ್ತಿಗಳನ್ನು ಹೊಂದಿರುವ ಈ ಪತಂಜಲಿ ಸಂಸ್ಥೆಯ ಉತ್ಪನ್ನಗಳನ್ನು ಉತ್ಪಾದಿಸುವ ಕಾರ್ಮಿಕರ ಪರಿಸ್ಥಿತಿಯನ್ನು ನೋಡಿ. ಪತಂಜಲಿ ಉತ್ಪನ್ನಗಳು ತಯಾರಾಗುವ ಹರಿದ್ವಾರದ ಘಟಕದಲ್ಲಿ ದುಡಿಯುವ ಕಾರ್ಮಿಕರಿಗೆ ದಿನಕ್ಕೆ 12 ಗಂಟೆಗಳ ಕೆಲಸ. ಪಿ.ಎಫ್. ಇಲ್ಲ. ಇತರೆ ಕಾರ್ಮಿಕ ಸೌಲಭ್ಯಗಳಿಲ್ಲ. 2016 ರಲ್ಲಿ ಈ ಕಾರ್ಮಿಕರ ತಿಂಗಳ ಸಂಬಳ 6,000 ರೂಪಾಯಿಗಳು. ಅಸಲಿಗೆ ಕಾರ್ಮಿಕರನ್ನು ‘ಕಾರ್ಮಿಕರು’ ಎಂದೇ ಗುರುತಿಸಲು ಸಂಸ್ಥೆ ತಯಾರಿಲ್ಲ. 2005 ರಲ್ಲಿ ಕನಿಷ್ಟ ಕೂಲಿಗಾಗಿ ಕಾರ್ಮಿಕರು ಸಿ.ಐ.ಟಿ.ಯು. ನೇತೃತ್ವದಲ್ಲಿ ಕಾರ್ಮಿಕ ಸಂಘದ ಮಾನ್ಯತೆಗಾಗಿ ಮುಷ್ಕರ ಹೂಡಿದಾಗ ಸಂಸ್ಥೆಯು ಇಲ್ಲಿ ಕೆಲಸ ಮಾಡುವವರು ‘ಸ್ವಯಂ ಸೇವಕರು’ ಕಾರ್ಮಿಕರಲ್ಲ ಎಂದು ವಾದಿಸಿತು. ರಾಮ್ ದೇವ್ ಮುಂತಾದವರು ಘಟಕಕ್ಕೆ ಭೇಟಿ ಕೊಟ್ಟಾಗ ಇಲ್ಲಿನ ಕಾರ್ಮಿಕರು ಅವರ ಕಾಲಿಗೆರಗಿ ಆಶೀರ್ವಾದ ಪಡೆದುಕೊಳ್ಳುವುದು ಕಡ್ಡಾಯವಂತೆ. ಹೇಗಿದೆ. ‘ಕಾರ್ಖಾನೆ’ ಪರಿಸ್ಥಿತಿ.!! ಇದೇ ಸಂದರ್ಭದಲ್ಲಿ ಕಾರ್ಮಿಕರಿಂದ ತಿಳಿದು ಬಂದ ಮತ್ತೊಂದು ಅಘಾತಕಾರಿ ಅಂಶವೆಂದರೆ ಪತಂಜಲಿಯ ಉತ್ಪನ್ನಗಳಲ್ಲಿ ಮನುಷ್ಯನ ಮೂಳೆ ಹಾಗೂ ಪ್ರಾಣಿಗಳ ಅಯವಯಗಳನ್ನು ಬೆರೆಸಲಾಗುತ್ತದೆ ಎಂಬುದು. ನಂತರ ನಡೆದ ವೈಜ್ಞಾನಿಕ ಪರೀಕ್ಷೆಗಳಲ್ಲಿ ಈ ಬೆರಕೆ ನಿಜ ಎಂಬುದು ಸಾಬೀತಾಯಿತು.

ಸದ್ಯಕ್ಕೆ ಸುಪ್ರಿಂ ಕೋರ್ಟಿನಲ್ಲಿ ಪತಂಜಲಿ ಸಂಸ್ಥೆಯ ಸುಳ್ಳು ಜಾಹಿರಾತುಗಳ ವಿರುದ್ಧ ನಡೆಯುತ್ತಿರುವ ವಿಚಾರಣೆಯು ಪತಂಜಲಿ ಸಂಸ್ಥೆಯ ಒಟ್ಟು ಮೋಸ, ಅವವ್ಯಹಾರ, ವಂಚನೆಗಳ ಕುರಿತು ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ದಾರಿಯಾಗಲಿ ಎಂದು ಆಶಿಸೋಣ. ಆದರೆ ಹಾಗೆ ಆಗುತ್ತದೆಯೇ ಎಂಬುದು ಪ್ರಶ್ನೆ.

ಕಾರ್ಮಿಕ ವರ್ಗ ಮತ್ತು ನವ–ಫ್ಯಾಸಿಸಂನ ಪ್ರಾಬಲ್ಯ

ನವ–ಉದಾರವಾದದ ಆಳ್ವಿಕೆಯಲ್ಲಿ ಘಟಿಸುವ ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣ. ವಿಶ್ವಾದ್ಯಂತ ಸಾರ್ವಜನಿಕ ವಲಯದಲ್ಲಿ ಕೆಲಸಮಾಡುವವರು ಖಾಸಗಿ ವಲಯದಲ್ಲಿ ಕೆಲಸ ಮಾಡುವವರಿಗಿಂತಲೂ ಸಾಮಾನ್ಯವಾಗಿ ಹೆಚ್ಚು ಉತ್ತಮವಾಗಿ ಸಂಘಟಿತರಾಗಿದ್ದಾರೆ. ಉದಾಹರಣೆಗೆ, ಅಮೆರಿಕಾದಲ್ಲಿ, ಖಾಸಗಿ ವಲಯದಲ್ಲಿ ಕೇವಲ ಶೇ. 7ರಷ್ಟು ಮಂದಿ ಕೆಲಸಗಾರರು ಸಂಘಟಿತರಾಗಿದ್ದರೆ, ಸಾರ್ವಜನಿಕ ವಲಯದಲ್ಲಿ ಶೇ. 33ರಷ್ಟು ಮಂದಿ ಸಂಘಟಿತರಾಗಿದ್ದಾರೆ (ಇವರಲ್ಲಿ ಶಿಕ್ಷಣ ವಲಯದಲ್ಲಿ ಸಂಘಟಿತರಾಗಿರುವವರೂ ಸೇರಿದ್ದಾರೆ). ಆದ್ದರಿಂದ, ಖಾಸಗೀಕರಣವು ಕಾರ್ಮಿಕರ ಸಂಘಟನಾ ಬಲವನ್ನು ಕುಗ್ಗಿಸುವ ಪರಿಣಾಮವನ್ನು ಹೊಂದಿದೆ. ಈ ಆಯಾಮದ ಬಗ್ಗೆ ಚರ್ಚೆಗಳು ನಡೆಯುವುದೇ ಇಲ್ಲ. ಖಾಸಗೀಕರಣವು ಕೊನೆಯ ಪಕ್ಷ ಅಂಚಿನ ದೇಶಗಳಲ್ಲಿ ನಾವೀನ್ಯತೆಯನ್ನು ಕುಗ್ಗಿಸುವಲ್ಲಿ, ಆರ್ಥಿಕ ಸ್ವಾವಲಂಬನೆಯನ್ನು ತಗ್ಗಿಸುವಲ್ಲಿ ಮತ್ತು ಪರಾವಲಂಬನೆಯನ್ನು ಹೆಚ್ಚಿಸುವಲ್ಲಿ ಬೀರಿದ ಪರಿಣಾಮವನ್ನು ಬಹಳವಾಗಿ ಗುರುತಿಸಲಾಗಿದೆಯಾದರೂ, ಕಾರ್ಮಿಕರ ಹೋರಾಡುವ ಶಕ್ತಿಯನ್ನು ಕುಂದಿಸುವಲ್ಲಿ ಅದು ಬೀರಿದ ಪರಿಣಾಮದ ಬಗ್ಗೆ ಚರ್ಚೆಗಳು ನಡೆದಿಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್ ಅನುವಾದ: ಕೆ.ಎಂ.ನಾಗರಾಜ್

ರಷ್ಯಾದ ಬೋಲ್ಶೆವಿಕ್ ಕ್ರಾಂತಿಯು ಕಾರ್ಮಿಕ ವರ್ಗವನ್ನು ತಮ್ಮ ತಮ್ಮ ದೇಶಗಳಲ್ಲೂ ಅದೇ ರೀತಿಯ ಕ್ರಾಂತಿಯಲ್ಲಿ ತೊಡಗುವ ಪ್ರಭಾವ ಬೀರಿತ್ತು. ಯೂರೋಪಿನಲ್ಲಿ ಜರುಗಿದ ಇಂಥಹ ಕ್ರಾಂತಿಗಳು ಯಶಸ್ವಿಯಾಗಲಿಲ್ಲ. ಫ್ಯಾಸಿಸಂ ಪ್ರವರ್ಧಮಾನಕ್ಕೆ ಬರುವ ಮೊದಲು ಸಂಭವಿಸಿ ಯಶಸ್ವಿಯಾಗದ ಕಾರ್ಮಿಕ ವರ್ಗದ ಈ ಕ್ರಾಂತಿಗಳಿಗೂ ಮತ್ತು ಫ್ಯಾಸಿಸಂಗೂ ಒಂದು ಸಂಬಂಧವಿದೆ ಎಂಬ ಅಭಿಪ್ರಾಯವನ್ನು ಸ್ವತಃ ಫ್ಯಾಸಿಸಂಗೆ ಬಲಿಯಾದ ಜರ್ಮನ್ ತತ್ವಜ್ಞಾನಿ ವಾಲ್ಟರ್ ಬೆಂಜಮಿನ್ ವ್ಯಕ್ತಪಡಿಸಿದ್ದರು. ಬೋಲ್ಶೆವಿಕ್ ಕ್ರಾಂತಿಯನ್ನು ಜರ್ಮನಿಯಲ್ಲಿ ಆಗುಮಾಡುವಲ್ಲಿ ಅನೇಕ ಪ್ರಯತ್ನಗಳು ವಿಫಲವಾದವು. ಹೋರಾಡಿ ದಣಿದ ಜರ್ಮನಿಯ ಶ್ರಮಜೀವಿಗಳ ನಿಷ್ಠೆಯು ಕಮ್ಯುನಿಸ್ಟರು ಮತ್ತು ಸೋಷಿಯಲ್ ಡೆಮೊಕ್ರಾಟರ ನಡುವೆ ಹಂಚಿಹೋಯಿತು. ನಂತರ, ಅಧಿಕಾರ ಹಿಡಿದ ಸೋಷಿಯಲ್ ಡೆಮೊಕ್ರಾಟರು ರೋಸಾ ಲಕ್ಸೆಂಬರ್ಗ್, ಕಾರ್ಲ್ ಲೀಬ್ನೆಕ್ಟ್ ಮತ್ತು ಇತರ ಅನೇಕರ ರಕ್ತವನ್ನು ಚೆಲ್ಲಾಡಿದರು. ಹಾಗಾಗಿ, ಕಮ್ಯುನಿಸ್ಟರು ಮತ್ತು ಸೋಷಿಯಲ್ ಡೆಮೊಕ್ರಾಟರು ಬದ್ಧ ವೈರಿಗಳಾದರು. ಈ ಎಲ್ಲವೂ, 1930ರ ದಶಕದ ಆರ್ಥಿಕ ಬಿಕ್ಕಟ್ಟು ಸ್ಫೋಟಿಸಿದಾಗ, ಏಕಸ್ವಾಮ್ಯ ಬಂಡವಾಳವು, ಅದರಲ್ಲೂ ವಿಶೇಷವಾಗಿ ಜರ್ಮನಿಯಲ್ಲಿ ಹುಟ್ಟಿದ ಏಕಸ್ವಾಮ್ಯ ಬಂಡವಾಳದ ಒಂದು ಸ್ತರವು ಒದಗಿಸಿದ ಬೆಂಬಲದ ಆಧಾರದ ಮೇಲೆ ಅಧಿಕಾರವನ್ನು ವಶಪಡಿಸಿಕೊಳ್ಳುವುದು ಫ್ಯಾಸಿಸ್ಟರಿಗೆ ಸುಲಭವಾಯಿತು.

ಬೆಂಜಮಿನ್ ಅವರ ಈ ಪ್ರತಿಪಾದನೆಯು ಸೈದ್ಧಾಂತಿಕವಾಗಿ ಮಹತ್ವದ್ದಾಗಿತ್ತು. ಏಕೆಂದರೆ, ಅದು ಫ್ಯಾಸಿಸಂಅನ್ನು ಶ್ರಮಜೀವಿಗಳ ಹೋರಾಟಗಳ ಮುನ್ನಡೆಗೆ ಒಂದು ಅಡಚಣೆ ಎಂದು ನೋಡಲಿಲ್ಲ. ಫ್ಯಾಸಿಸಂಅನ್ನು ಅದು ಶ್ರಮಜೀವಿಗಳ ಮುನ್ನಡೆ ನಿಂತು ಹೋದ ಹೋರಾಟಗಳ ಒಂದು ಪರಿಣಾಮವೆಂದು ನೋಡಿತು. ಬೃಹತ್ ನಿರುದ್ಯೋಗ ಮತ್ತು ಜನರ ಸಂಕಷ್ಟಗಳಿಗೆ ಕಾರಣವಾದ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಶ್ರಮಜೀವಿಗಳ ಹೋರಾಟಗಳ ಮುನ್ನಡೆಯನ್ನು ತಡೆಯುವುದೇ ಫ್ಯಾಸಿಸಂನ ಗುರಿಯಾಗಿತ್ತು.

ಭಾರತದಿಂದ ಹಿಡಿದು ಹಂಗೇರಿ, ಅರ್ಜೆಂಟೀನಾ, ಬ್ರೆಜಿಲ್, ಇಟಲಿ, ಫ್ರಾನ್ಸ್, ಜರ್ಮನಿ ಮತ್ತು ಅಮೆರಿಕಾದವರೆಗೆ ವಿಶ್ವದ ಅನೇಕ ದೇಶಗಳಲ್ಲಿ ಗೋಚರವಾದ ನವ–ಫ್ಯಾಸಿಸಂ ಈಗ ಬಲಗೊಳ್ಳುತ್ತಿದೆ. ಈ ವಿದ್ಯಮಾನವು ಜರುಗುವ ಮೊದಲು ಶ್ರಮಜೀವಿಗಳ ಯಾವ ವಿಫಲ ಕ್ರಾಂತಿಯೂ ಸಂಭವಿಸಿಲ್ಲ. ಆದರೆ, ಫ್ಯಾಸಿಸಂ ಪ್ರವರ್ಧಮಾನಕ್ಕೆ ಬರುವಲ್ಲಿ ಬೆಂಜಮಿನ್ ಉಲ್ಲೇಖಿಸಿದ ಒಂದು ಷರತ್ತಿನ ಈಡೇರಿಕೆಯಾಗಿದೆ. ಅಂದರೆ, ಕಾರ್ಮಿಕ ವರ್ಗದ ದುರ್ಬಲ ಪರಿಸ್ಥಿತಿಯ ಅಂಶವು ಪ್ರಸ್ತುತ ಸಂದರ್ಭದಲ್ಲೂ ಪೂರೈಸಲ್ಪಟ್ಟಿದೆ. ಸಂಪೂರ್ಣವಾಗಿ ವಿಭಿನ್ನವಾದ ಒಂದು ಅಂಶವು ಕಾರ್ಮಿಕ ವರ್ಗವನ್ನು ದುರ್ಬಲಗೊಳಿಸಿದೆ. ವಿಭಿನ್ನವಾದ ಈ ಅಂಶವು ಯಾವುದೆಂದರೆ, ಅದು ನವ–ಉದಾರವಾದಿ ಆಳ್ವಿಕೆಯ ಕಾರ್ಯಾಚರಣೆ.

ನವ–ಉದಾರವಾದವು ಕನಿಷ್ಠ ಮೂರು ವಿಭಿನ್ನ ರೀತಿಯ ಪ್ರತಿಕೂಲ ಪರಿಣಾಮಗಳನ್ನು ಬೀರುವ ಮೂಲಕ ಕಾರ್ಮಿಕ ವರ್ಗದ ಶಕ್ತಿಯನ್ನು ಕುಂದಿಸುತ್ತದೆ. ಮೊದಲನೆಯದು, ರಾಷ್ಟ್ರ ಮಟ್ಟದಲ್ಲಿ ಸಂಘಟಿತವಾದ ಕಾರ್ಮಿಕ ವರ್ಗದ ಸ್ವರೂಪವು ಹಾಗೆಯೇ ಉಳಿದಿದೆ. ಆದರೆ, ಬಂಡವಾಳವು ಜಾಗತೀಕರಣಗೊಂಡಿದೆ. ಹಾಗಾಗಿ, ರಾಷ್ಟ್ರೀಯ ಸ್ವರೂಪ ಹೊಂದಿದ ಕಾರ್ಮಿಕ ವರ್ಗವು ಅಂತಾರಾಷ್ಟ್ರೀಯ ಸ್ವರೂಪ ಪಡೆದ ಬಂಡವಾಳದೊಂದಿಗೆ ಹೋರಾಡಬೇಕಾಗುತ್ತದೆ. ಈ ಕಾರಣದಿಂದಾಗಿ, ರಾಷ್ಟ್ರ ಮಟ್ಟದ ಕಾರ್ಮಿಕ ವರ್ಗದ ಹೋರಾಟದ ಶಕ್ತಿಯು ಅಂತಾರಾಷ್ಟ್ರೀಯ ಬಂಡವಾಳದ ಎದುರಿನಲ್ಲಿ ಕುಬ್ಜವಾಗುತ್ತದೆ. ಕಾರ್ಮಿಕ ವರ್ಗವು ಒಂದು ವೇಳೆ ಉಗ್ರ ಹೋರಾಟಕ್ಕಿಳಿದರೆ, ಉತ್ಪಾದನೆಯನ್ನು ಬೇರೆಡೆಗೆ ಸ್ಥಳಾಂತರಿಸುವುದಾಗಿ ಬಂಡವಾಳವು ಒಡ್ಡುವ ಬೆದರಿಕೆಯನ್ನು ಎದುರಿಸಬೇಕಾಗುತ್ತದೆ. ಹಾಗಾಗಿ, ಕಾರ್ಮಿಕ ವರ್ಗವು ಒಂದು ರೀತಿಯ ನಿರ್ಬಂಧಗಳಿಗೆ ಒಳಗಾಗಿರುತ್ತದೆ. ಈ ಅಂಶವನ್ನು ಅರ್ಥಶಾಸ್ತ್ರಜ್ಞ ಜೋಸೆಫ್ ಸ್ಟಿಗ್ಲಿಟ್ಜ್ ತಮ್ಮ ಅಧ್ಯಯನದ ಮೂಲಕ ಜಗತ್ತಿಗೆ ತೋರಿಸಿದ್ದಾರೆ. ಅಮೆರಿಕಾದಲ್ಲಿ, ವರ್ಷ 2011ರಲ್ಲಿ ಪುರುಷ ಕಾರ್ಮಿಕರ ಸರಾಸರಿ ನಿಜ ವೇತನವು, 1968ರಲ್ಲಿ ಇದ್ದುದಕ್ಕಿಂತಲೂ ತುಸು ಕೆಳಗಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಈ ಅಂಶವು ಕಾರ್ಮಿಕರ ಹೋರಾಡುವ ಶಕ್ತಿಯು ಕ್ಷೀಣಿಸಿದೆ ಎಂಬುದಕ್ಕೆ ಒಂದು ಪುರಾವೆಯಾಗುತ್ತದೆ.

ಎರಡನೆಯದು, ನವ–ಉದಾರವಾದಿ ಆಳ್ವಿಕೆಯಲ್ಲಿ ಶ್ರಮ ಮೀಸಲು ಪಡೆಯ ಗಾತ್ರವು, ಹೋಲಿಕೆಯ ದೃಷ್ಟಿಯಲ್ಲಿ, ಏರಿಕೆಯಾಗಿರುವುದು ಕಂಡುಬರುತ್ತದೆ. ಈ ಏರಿಕೆಯ ಅಂಶವೂ ಕಾರ್ಮಿಕ ವರ್ಗದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತದೆ ಮತ್ತು ಬಂಡವಾಳಶಾಹಿ ಬಿಕ್ಕಟ್ಟು ಸೃಷ್ಟಿಸುವ ನಿರುದ್ಯೋಗವು ಶ್ರಮ ಮೀಸಲು ಪಡೆಯ ಗಾತ್ರದ ಏರಿಕೆಗೆ ಕಾರಣವಾಗುತ್ತದೆ. ಇತ್ತೀಚಿನ ಬಿಕ್ಕಟ್ಟಿಗೂ ಮುನ್ನವೇ ಮೆಟ್ರೋಪಾಲಿಟನ್ ದೇಶಗಳಿಂದ ಜಾಗತಿಕ ದಕ್ಷಿಣದ ದೇಶಗಳಿಗೆ ಸ್ಥಳಾಂತರಗೊಂಡ ಬಂಡವಾಳವೂ ನಿರುದ್ಯೋಗವನ್ನು ಹೆಚ್ಚಿಸಿತ್ತು. ಬಂಡವಾಳದ ಈ ಸ್ಥಳಾಂತರವು ಮೆಟ್ರೋಪಾಲಿಟನ್ ದೇಶಗಳಲ್ಲಿ ದೊರಕುತ್ತಿದ್ದ ಉದ್ಯೋಗಗಳನ್ನು ಕಡಿತಗೊಳಿಸಿತು. ಅದೇ ಸಮಯದಲ್ಲಿ ಜಾಗತಿಕ ದಕ್ಷಿಣದ ದೇಶಗಳಲ್ಲಿ ಕಿರು ಉತ್ಪಾದನೆಯ ಮೇಲೆ ಮತ್ತು ಅದಕ್ಕಿಂತಲೂ ಮಿಗಿಲಾಗಿ ರೈತ ಕೃಷಿಯ ಮೇಲೆ ನವ–ಉದಾರವಾದಿ ಆಳ್ವಿಕೆಯು ಹೇರಿದ ಕ್ರಮಗಳಿಂದಾಗಿ, ನಿರ್ಗತಿಕ ರೈತರು ಮತ್ತು ಕಿರು ಉತ್ಪಾದಕರು ಉದ್ಯೋಗ ಅರಸಿ ನಗರಗಳಿಗೆ ವಲಸೆ ಹೋಗುವಂತೆ ಮಾಡಿತು. ಅದೇ ಸಮಯದಲ್ಲಿ ದೇಶದಲ್ಲಿ ಉದ್ಯೋಗಗಳ ಲಭ್ಯತೆಯೂ ಕಡಿಮೆಯಾಯಿತು. ಏಕೆಂದರೆ, ವಿದೇಶ ವ್ಯಾಪಾರದ ಉದಾರೀಕರಣವು ಪರಿಚಯಿಸಿದ ಉನ್ನತ ತಂತ್ರಜ್ಞಾನದ ಬಳಕೆ ಮತ್ತು ತೀವ್ರ ಪೈಪೋಟಿಯ ಅಂಶಗಳು ಉದ್ಯೋಗಾವಕಾಶಗಳನ್ನು ಕಡಿತಗೊಳಿಸಿದವು. ಹಾಗಾಗಿ, ಬಿಕ್ಕಟ್ಟು ಆರಂಭವಾಗುವ ಮುನ್ನವೇ ಎಲ್ಲೆಡೆಯೂ ಶ್ರಮ ಮೀಸಲು ಪಡೆಯ ಸಾಪೇಕ್ಷ ಗಾತ್ರವು ಏರಿಕೆಯಾಗಿದ್ದ ಕಾರಣದಿಂದಾಗಿ, ಎಲ್ಲೆಡೆಯೂ ಕಾರ್ಮಿಕ ವರ್ಗದ ಶಕ್ತಿ ಕುಂದಿತು.



ಕಾರ್ಮಿಕ ವರ್ಗವನ್ನು ದುರ್ಬಲಗೊಳಿಸುವ ಮೂರನೇ ಅಂಶವೆಂದರೆ, ನವ–ಉದಾರವಾದದ ಆಳ್ವಿಕೆಯಲ್ಲಿ ಘಟಿಸುವ ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣ. ವಿಶ್ವಾದ್ಯಂತ ಸಾರ್ವಜನಿಕ ವಲಯದಲ್ಲಿ ಕೆಲಸಮಾಡುವವರು ಖಾಸಗಿ ವಲಯದಲ್ಲಿ ಕೆಲಸ ಮಾಡುವವರಿಗಿಂತಲೂ ಸಾಮಾನ್ಯವಾಗಿ ಹೆಚ್ಚು ಉತ್ತಮವಾಗಿ ಸಂಘಟಿತರಾಗಿದ್ದಾರೆ. ಉದಾಹರಣೆಗೆ, ಅಮೆರಿಕಾದಲ್ಲಿ, ಖಾಸಗಿ ವಲಯದಲ್ಲಿ ಕೇವಲ ಶೇ. 7ರಷ್ಟು ಮಂದಿ ಕೆಲಸಗಾರರು ಸಂಘಟಿತರಾಗಿದ್ದರೆ, ಸಾರ್ವಜನಿಕ ವಲಯದಲ್ಲಿ ಶೇ. 33ರಷ್ಟು ಮಂದಿ ಸಂಘಟಿತರಾಗಿದ್ದಾರೆ (ಇವರಲ್ಲಿ ಶಿಕ್ಷಣ ವಲಯದಲ್ಲಿ ಸಂಘಟಿತರಾಗಿರುವವರೂ ಸೇರಿದ್ದಾರೆ). ಆದ್ದರಿಂದ, ಖಾಸಗೀಕರಣವು ಕಾರ್ಮಿಕರ ಸಂಘಟನಾ ಬಲವನ್ನು ಕುಗ್ಗಿಸುವ ಪರಿಣಾಮವನ್ನು ಹೊಂದಿದೆ. ಈ ಆಯಾಮದ ಬಗ್ಗೆ ಚರ್ಚೆಗಳು ನಡೆಯುವುದೇ ಇಲ್ಲ. ಖಾಸಗೀಕರಣವು ಕೊನೆಯ ಪಕ್ಷ ಅಂಚಿನ ದೇಶಗಳಲ್ಲಿ ನಾವೀನ್ಯತೆಯನ್ನು ಕುಗ್ಗಿಸುವಲ್ಲಿ, ಆರ್ಥಿಕ ಸ್ವಾವಲಂಬನೆಯನ್ನು ತಗ್ಗಿಸುವಲ್ಲಿ ಮತ್ತು ಪರಾವಲಂಬನೆಯನ್ನು ಹೆಚ್ಚಿಸುವಲ್ಲಿ ಬೀರಿದ ಪರಿಣಾಮವನ್ನು ಬಹಳವಾಗಿ ಗುರುತಿಸಲಾಗಿದೆಯಾದರೂ, ಕಾರ್ಮಿಕರ ಹೋರಾಡುವ ಶಕ್ತಿಯನ್ನು ಕುಂದಿಸುವಲ್ಲಿ ಅದು ಬೀರಿದ ಪರಿಣಾಮದ ಬಗ್ಗೆ ಚರ್ಚೆಗಳು ನಡೆದಿಲ್ಲ.

ಕಾರ್ಮಿಕರ ಹೋರಾಡುವ ಶಕ್ತಿಯ ಇಳಿಕೆಯು ಅವರು ರಾಷ್ಟ್ರವ್ಯಾಪಿಯಾದ ಮತ್ತು ಪ್ರಭಾವಶಾಲಿಯಾದ ನಿರ್ದಿಷ್ಟ ಅಲ್ಪಕಾಲಿಕ



ಬೃಹತ್ ಹೋರಾಟಗಳನ್ನು ಸಂಘಟಿಸುವುದು ಸಾಧ್ಯವಿಲ್ಲ ಎಂಬುದನ್ನು ಸೂಚಿಸುವುದಿಲ್ಲ. ಭಾರತದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಇಂತಹ ಹಲವು ಹೋರಾಟಗಳನ್ನು ನಾವು ನೋಡಿದ್ದೇವೆ. ಆದರೆ, ನಿರ್ದಿಷ್ಟ ಕೈಗಾರಿಕೆಗಳ ಕಾರ್ಮಿಕರ ಹಕ್ಕೊತ್ತಾಯಗಳು ಅಥವಾ ಇಡೀ ಅರ್ಥವ್ಯವಸ್ಥೆಗೆ ಸಂಬಂಧಿಸಿದ ಹಕ್ಕೊತ್ತಾಯಗಳು ಈಡೇರುವವರೆಗೂ ಕಾರ್ಮಿಕರು ಹೋರಾಟಗಳಲ್ಲಿ ನಿರಂತರವಾಗಿ ತೊಡಗುವುದು, ಅಂದರೆ, 1970ರ ದಶಕದ ಐತಿಹಾಸಿಕ ರೈಲ್ವೇ ನೌಕರರ ಅನಿರ್ದಿಷ್ಟ ಮುಷ್ಕರ (ಅದಕ್ಕೂ ಮುನ್ನ ರೈಲು–ಚಾಲಕರ ಮುಷ್ಕರ ನಡೆದಿತ್ತು) ನಡೆದ ರೀತಿಯಲ್ಲಿ ಹೋರಾಟಗಳನ್ನು ಇಂದು ಸಂಘಟಿಸುವುದು ಹೆಚ್ಚು ಕಷ್ಟಕರವಾಗುತ್ತದೆ.

ಜರ್ಮನಿಯಲ್ಲಿ ಫ್ಯಾಸಿಸಂ ಪ್ರವರ್ಧಮಾನಕ್ಕೆ ಬರಲು ಅಲ್ಲಿ ಸಂಭವಿಸಿದ ವಿಫಲ ಕ್ರಾಂತಿಗಳು ಕಾರಣವಾಗಿದ್ದವು ಮತ್ತು ಈ ವಿದ್ಯಮಾನಗಳು ಅಂತಿಮವಾಗಿ ಕಾರ್ಮಿಕರ ಹೋರಾಟದ ಶಕ್ತಿಯನ್ನು ದುರ್ಬಲಗೊಳಿಸುವಲ್ಲಿ ಪರಿಣಮಿಸಿದವು ಎಂಬುದನ್ನು ವಾಲ್ಟರ್ ಬೆಂಜಮಿನ್ 1930ರ ದಶಕದಲ್ಲಿ ಹೇಳಿದ್ದರು. ಆದರೆ, ಇಂದಿನ ಜಗತ್ತಿನಲ್ಲಿ ಕಾರ್ಮಿಕರ ಹೋರಾಟದ ಶಕ್ತಿಯು ನವ–ಉದಾರವಾದದ ಕಾರ್ಯಾಚರಣೆಯ ಒಂದು ಅನಿವಾರ್ಯ ಪರಿಣಾಮವಾಗಿ ದುರ್ಬಲಗೊಳ್ಳುತ್ತದೆ. ಈ ಅಂಶ ಮಾತ್ರವೇ ಫ್ಯಾಸಿಸಂ ಬಲಗೊಳ್ಳುವ ವಿದ್ಯಮಾನದ ವಿವರಣೆಯಾಗುವುದಿಲ್ಲ. ಆದರೆ, ಕಾರ್ಮಿಕರ ಸಂಘಟನೆಗಳು ದುರ್ಬಲಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ನವ–ಉದಾರವಾದವು ಅನಿವಾರ್ಯವಾಗಿ ಸೃಷ್ಟಿಸುವ ಆರ್ಥಿಕ ಬಿಕ್ಕಟ್ಟು, ನವ–ಫ್ಯಾಸಿಸಂ ಬಲಗೊಳ್ಳುವ ಪ್ರಕ್ರಿಯೆಯನ್ನು ಸುಲಭಗೊಳಿಸುತ್ತದೆ.

ಉದಾರವಾದಿಗಳು, ಕಾರ್ಮಿಕರ ಹೋರಾಟದ ಶಕ್ತಿ–ನವ ಉದಾರವಾದ–ನವ ಫ್ಯಾಸಿಸಂ ಇವುಗಳ ಸಂಬಂಧವನ್ನು ಅರ್ಥಮಾಡಿಕೊಳ್ಳದೆ ಹೋಗುತ್ತಾರೆ. ಏಕೆಂದರೆ, ಸಾಮಾನ್ಯವಾಗಿ ಅವರು ಸಮಾಜವನ್ನು ವರ್ಗ ಪರಿಭಾಷೆಯ ದೃಷ್ಟಿಯಲ್ಲಿ ನೋಡಲು ನಿರಾಕರಿಸುತ್ತಾರೆ. ಬದಲಿಗೆ, ಅವರು ತಮ್ಮ ಗಮನವನ್ನು ವ್ಯಕ್ತಿಗಳ ಮೇಲೆ ಮತ್ತು ವ್ಯಕ್ತಿಗಳ ವರ್ಗೇತರ ಗುಂಪುಗಳ ಮೇಲೆ ಕೇಂದ್ರೀಕರಿಸುತ್ತಾರೆ. ಮತ್ತು, ಸಾಮಾನ್ಯವಾಗಿ ಅವರು ನವ–ಉದಾರವಾದದ ಸಮರ್ಥಕರೇ ಆಗಿರುತ್ತಾರೆ. ಹಾಗಾಗಿ, ಏಕಕಾಲದಲ್ಲಿ ವಿಶ್ವಾದ್ಯಂತ ಏಕೆ ನವ–ಫ್ಯಾಸಿಸಂ ಬಲಗೊಳ್ಳುತ್ತಿದೆ ಎಂಬುದನ್ನು ವಿವರಿಸಲು ಅವರಿಗೆ ಮಾತೇ ಹೊರಡುವುದಿಲ್ಲ. ಇಂದಿನ ನಿರ್ದಿಷ್ಟ ಸನ್ನಿವೇಶದಲ್ಲಿ ಟ್ರಂಪ್‌ಗಳು, ಮೋದಿಗಳು, ಬೋಲ್ಸನಾರೋಗಳು, ಮಿಲೀಗಳು ಮತ್ತು ಮೆಲೋನಿಗಳು ಏಕೆ ಹಠಾತ್ತಾಗಿ ಉದ್ಭವವಾಗುತ್ತಾರೆ ಮತ್ತು ಇವರೆಲ್ಲರೂ ಏಕಕಾಲದಲ್ಲಿ ಏಕೆ ಪ್ರತ್ಯಕ್ಷರಾಗುತ್ತಾರೆ ಎಂಬುದಕ್ಕೆ ಒಂದು ಅಂತಾರಾಷ್ಟ್ರೀಯ ಸಮಾನ ಸನ್ನಿವೇಶ/ಅಂಶ ಇರಲೇಬೇಕಾಗುತ್ತದೆ ಮತ್ತು ಕಾರ್ಮಿಕ ವರ್ಗದ ಬಲವನ್ನು ಕಾಲ **ಪುಟ 15 ಕ್ಕೆ**

ಮೋದಿ ಹೆಸರಿನಿಂದ ಮಾತ್ರ ಗೆಲ್ಲಲಾಗದು, ಹಣವೇ ಮುಖ್ಯ ಎಂಬುದನ್ನು ಪರೋಕ್ಷವಾಗಿ ಒಪ್ಪಿಕೊಂಡ ನಿರ್ಮಲಾ ಸೀತಾರಾಮನ್



ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ತಮ್ಮ ಬಳಿ ಹಣವಿಲ್ಲದ ಕಾರಣ ಸಂಸತ್ ಚುನಾವಣೆಗೆ ಸ್ಪರ್ಧಿಸುತ್ತಿಲ್ಲ ಎಂದು ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾರೆ. ಇದು ಕೆಲವು ಸತ್ಯಗಳನ್ನು ಬಹಿರಂಗಪಡಿಸುತ್ತದಲ್ಲದೆ, ಅನೇಕ ಅನುಮಾನಗಳಿಗೆ ಕಾರಣವಾಗುತ್ತದೆ. ನಿರ್ಮಲಮ್ಮ ಅವರ ಮಾತಿನ ಪ್ರಕಾರ, ಬಿಜೆಪಿ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ಅಭ್ಯರ್ಥಿಯ ಬಳಿ ಸಾಕಷ್ಟು ಹಣ ಇರಬೇಕು. ಚುನಾವಣೆಯಲ್ಲಿ ಸ್ಪರ್ಧಿಸಲು ಭಾರಿ ಹಣ ಖರ್ಚು ಮಾಡಬೇಕಾಗುತ್ತದೆ. ಹಣವೇ ಅಭ್ಯರ್ಥಿಯ ಅರ್ಹತೆ ಎಂದಾಗುತ್ತದೆ. ಅಂದರೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಅದ್ದೂರಿಯಾಗಿ ಹಣ ಖರ್ಚು ಮಾಡುತ್ತಾರೆ ಎಂದಾಯಿತು. ಹಣ ಖರ್ಚು ಮಾಡಲಾಗದವರನ್ನೂ ಬಿಜೆಪಿ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸುತ್ತಿದೆ ಎಂದೂ ಹೇಳಲಾಗುತ್ತಿದೆಯಲ್ಲವೇ? ಮೇಲಾಗಿ ಎಲ್ಲಾ ಮಾಧ್ಯಮಗಳಲ್ಲಿಯೂ, ಸಾಮಾಜಿಕ ಜಾಲತಾಣಗಳಲ್ಲಿಯೂ ಅಬ್ಬರಿಸುತ್ತಿರುವ ಬಿಜೆಪಿಗರು, ಮೋದಿಯವರ ಖಾತ್ರಿಯಿಂದಲೇ ಬಿಜೆಪಿ ಅಭ್ಯರ್ಥಿಗಳು ಗೆಲ್ಲುತ್ತಾರೆ ಎಂದು ಹೇಳುತ್ತಾರಲ್ಲವೆ? ಗೆಲ್ಲಲು ಮೋದಿಯವರ ಹೆಸರೊಂದೇ ಸಾಕು ಎನ್ನುತ್ತಾರಲ್ಲವೇ? ಆದರೆ, ಹಣ ಖರ್ಚು ಮಾಡಿ ಗೆಲ್ಲುತ್ತಾರೆ ಎಂದು ನಿರ್ಮಲ ಅವರು ಹೇಳಿದಂತಾಗುತ್ತದೆ.

ಬಿಜೆಪಿ ಬಳಿ ಹಣವಿಲ್ಲವೇ?!

ಆಡಳಿತಾರೂಢ ಬಿಜೆಪಿ ಇಡಿ, ಸಿಬಿಐ ಮತ್ತು ಐಟಿ ದಾಳಿ ನಡೆಸಿ, ಕಂಪನಿಗಳನ್ನು ಬೆದರಿಸಿ ಅಕ್ರಮವಾಗಿ ಚುನಾವಣಾ ಬಾಂಡ್‌ಗಳ ಮೂಲಕ ಸಂಗ್ರಹಿಸಲಾದ ರೂ. 8,500 ಕೋಟಿ ಎಲ್ಲಿಗೆ ಹೋಯಿತು? ಇಷ್ಟೂ ಹಣ ಕಮಲ ಪಕ್ಷದ ಖಾತೆಗೆ ಬಿದ್ದಿದೆಯಲ್ಲವೆ? ಆ ಹಣವನ್ನು ಚುನಾವಣೆ ಹೊರತು ಬೇರೆ ಉದ್ದೇಶಕ್ಕೆ ಬಳಸುತ್ತಾರೆಯೇ? ಎನ್ ಡಿಎಯ ಪಾಲುದಾರ ಪಕ್ಷಗಳಲ್ಲದೆ ಬಿಜೆಪಿ ದೇಶಾದ್ಯಂತ ಸುಮಾರು 450 ಸ್ಥಾನಗಳಲ್ಲಿ ಸ್ಪರ್ಧಿಸುತ್ತದೆ. ಚುನಾವಣಾ ಬಾಂಡ್ ಗಳಿಂದ ಬಂದ ಇಷ್ಟು ಹಣವನ್ನು ಪ್ರತಿ ಕ್ಷೇತ್ರದಲ್ಲಿ 20 ಕೋಟಿ ರೂ.ನಂತೆ ಖರ್ಚು ಮಾಡಬಹುದು. ಅಂದರೆ ಪಕ್ಷದ ನಿಧಿಯನ್ನು ಅಭ್ಯರ್ಥಿಗಳಿಗೆ ನೀಡುವುದಿಲ್ಲವೇ? 20 ಕೋಟಿ ರೂ.ಗಳನ್ನು ಒಂದು ಅಭ್ಯರ್ಥಿಗೆ ಪಕ್ಷವೇ ವೆಚ್ಚ ಮಾಡುತ್ತದೆ, ಅಷ್ಟು ಹಣ ಸಾಕಾಗುವುದಿಲ್ಲ ಎಂದಾದರೆ, ಕಮಲ ಪಕ್ಷ ಚುನಾವಣೆಯಲ್ಲಿ ಇದಕ್ಕಿಂತಲೂ ದೊಡ್ಡ ಮೊತ್ತವನ್ನು ಖರ್ಚು ಮಾಡುತ್ತದೆ ಎಂದರ್ಥ! ಬಿಜೆಪಿ ಪಕ್ಷಕ್ಕೆ ಮತ್ತು ಅದರ ಅಭ್ಯರ್ಥಿಗಳಿಗೆ ಚುನಾವಣಾ ಬಾಂಡ್ ಮೂಲಕವಲ್ಲದೆ, ದೊಡ್ಡ ದೊಡ್ಡ ಉದ್ಯಮಿಗಳಿಂದ, ರಾಷ್ಟ್ರ ಮಟ್ಟದ ಮತ್ತು ಸ್ಥಳೀಯ ಗುತ್ತಿಗೆದಾರರಿಂದಲೂ ಸಾಕಷ್ಟು ರಹಸ್ಯ ದೇಣಿಗೆಗಳು ಬರುತ್ತವೆ.

ಖರ್ಚನ್ನು ಸರಕಾರವೇ ಭರಿಸಬೇಕು

ಸುಮಾರು 15 ವರ್ಷಗಳ ಕಾಲ ಈ ದೇಶವನ್ನು ಆಳಿದ ಪಕ್ಷದ ಪ್ರಮುಖ ಹುದ್ದೆಗಳಲ್ಲಿ ಇದ್ದು, ಹತ್ತು ವರ್ಷ ಕೇಂದ್ರ ಸಂಪುಟದ ಸಚಿವರಾಗಿ ಜವಾಬ್ದಾರಿ ನಿರ್ವಹಿಸಿದವರು, ಸಂಸತ್ ಚುನಾವಣೆಗೆ ಸ್ಪರ್ಧಿಸಲು ತಮ್ಮ ಬಳಿ ಹಣವಿಲ್ಲ ಎಂದು ಹೇಳುವುದಾದರೆ, ಚುನಾವಣೆಗೆ ಸ್ಪರ್ಧಿಸಬಯಸುವ ಸಾಮಾನ್ಯ ಪ್ರಜೆಗಳ ಪಾಡೇನು? ಹೆಚ್ಚು ಹಣ ಹೊಂದಿರುವವರೇ ಸಂಸತ್ ಸದಸ್ಯರಾಗಲು, ಶಾಸಕರಾಗಲು ಸಾಧ್ಯ ಎನ್ನುವುದಾದರೆ ಭಾರತದಲ್ಲಿ ಪ್ರಜಾಪ್ರಭುತ್ವ ಹೇಗೆ ಸಾಧ್ಯ? ಆದ್ದರಿಂದಲೇ ಕಮ್ಯೂನಿಸ್ಟ್ ಪಕ್ಷಗಳು ಮತ್ತು ಪ್ರಗತಿಪರರು ಚುನಾವಣೆಯಲ್ಲಿ ಖರ್ಚು ಮಾಡುವ ಹಣವನ್ನು ರಾಜಕೀಯ ಪಕ್ಷಗಳಿಗೆ ಸರಕಾರವೇ ಭರಿಸಬೇಕು, ಹಿಂದಿನ ಚುನಾವಣೆಯಲ್ಲಿ ಪಕ್ಷ ಪಡೆದ ಶೇಕಡವಾರು ಮತಗಳಿಗೆ ಅನುಗುಣವಾಗಿ ಹಣ ಪಾವತಿಯಾಗಬೇಕು ಮತ್ತು ಪಕ್ಷವು ಪಡೆದ ಮತಗಳ ಅನುಪಾತಕ್ಕೆ ಅನುಗುಣವಾಗಿ ಶಾಸಕಾಂಗ ಸಭೆಗಳಿಗೆ ಸದಸ್ಯರನ್ನು ಆಯ್ಕೆ ಮಾಡುವಂತಹ ನಿಯಮಗಳೊಂದಿಗೆ ಚುನಾವಣಾ ಸುಧಾರಣೆಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸುತ್ತಿದ್ದಾರೆ. ಅಂತಹ ಸುಧಾರಣೆಗಳಿಗಾಗಿ ಬಹುಕಾಲದಿಂದ ಬೇಡಿಕೆಗಳಿವೆ. ಇದರಿಂದ ಆದ್ಯತಾ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಪಕ್ಷವು ಪಡೆದ ಮತಗಳ ಅನುಪಾತಕ್ಕೆ ಅನುಗುಣವಾಗಿ ಶಾಸಕಾಂಗಗಳಿಗೆ ಆಯ್ಕೆಯಾಗುತ್ತಾರೆ. ಚುನಾವಣೆಗಳಲ್ಲಿ ಹಣ ತೊಡಗಿಸದ ರೀತಿಯಲ್ಲಿ ಬದಲಾವಣೆಗಳನ್ನು ಮಾಡಿದರೆ ಮಾತ್ರ ಪ್ರಜಾಪ್ರಭುತ್ವವು ಅರಳುತ್ತದೆ. ಅಪರಾಧಿಗಳು ಶಾಸಕಾಂಗಕ್ಕೆ ಆಯ್ಕೆಯಾಗಬಾರದು.

ಚುನಾವಣೆಯಲ್ಲಿ ಹಣವೇ ಪ್ರಮುಖ ಪಾತ್ರ ವಹಿಸುತ್ತದೆ ಎಂಬ ವಿತ್ತ ಸಚಿವರ ಮಾತುಗಳ ಸಾರವನ್ನು ತೆಗೆದುಕೊಂಡರೆ ಚುನಾವಣಾ ಸುಧಾರಣೆಗಳ ಅಗತ್ಯ ಎಷ್ಟಿದೆ ಎಂಬುದು ತಿಳಿಯುತ್ತದೆ. ಆದರೆ ಮೋದಿ ಸರಕಾರ ಈಗಿನ ಪ್ರಜಾಪ್ರಭುತ್ವವನ್ನೂ ಮುಂದುವರಿಯಲು ಬಿಡದೆ, ಒಂದು ರಾಷ್ಟ್ರ ಒಂದು ಚುನಾವಣೆಯ ಹೆಸರಿನಲ್ಲಿ ಏಕಪಕ್ಷೀಯ ಸರ್ವಾಧಿಕಾರದತ್ತ ಹೆಜ್ಜೆ ಹಾಕುತ್ತಿದೆ. ಇಂತಹ ಷಡ್ಯಂತ್ರಗಳನ್ನು ವಿಫಲಗೊಳಿಸಬೇಕು. ಅದಕ್ಕೆ ಇರುವ ಏಕೈಕ ಮಾರ್ಗವೆಂದರೆ ಈ ಕಾರ್ಪೊರೇಟ್-ಹಿಂದುತ್ವ ಸಮ್ಮಿಶ್ರ ಆಡಳಿತವನ್ನು ಕೊನೆಗೊಳಿಸುವುದು ಅತಿ ಮುಖ್ಯ. ●

ಕಿಸಾನ್ ಸಮ್ಮಾನ್ ಯೋಜನೆಯ ಮರೆಯಲ್ಲಿವೆ ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು........ ಪುಟ 11 ರಿಂದ

ರೈತರಿಗೆ ಒಂದಷ್ಟು ಹಣಕಾಸಿನ ನೆರವು ನೀಡುತ್ತಿದೆ. ಜೊತೆಗೆ, ರೈತರಿಗೆ ಅವರು ಕೃಷಿಗೆ ಮಾಡುವ ವೆಚ್ಚ ಕಡಿಮೆಗೊಳಿಸುವ ಉದ್ದೇಶದಿಂದ ರಸಗೊಬ್ಬರಗಳ ಮೇಲಿನ ಸಬ್ಸಿಡಿಗೆ ಸರ್ಕಾರವು ತನ್ನ ಬಜೆಟ್ ನಿಂದ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದೆ. ಮತ್ತೊಂದೆಡೆ ರಸಗೊಬ್ಬರಗಳ ಮೇಲೆ ಅಥವಾ ಅವುಗಳನ್ನು ತಯಾರಿಸಲು ಬಳಸುವ ಕಚ್ಚಾ ವಸ್ತುಗಳ ಮೇಲೆ ಸರ್ಕಾರ ತೆರಿಗೆ ವಿಧಿಸುತ್ತದೆ. ಇದೊಂದು ಅರ್ಥಹೀನವಾಗಿದೆ. ತೆರಿಗೆ ವಿಧಿಸುವುದರಿಂದ ರಸಗೊಬ್ಬರದ ವೆಚ್ಚವನ್ನು ಹೆಚ್ಚಿಸುತ್ತದೆ, ರಸಗೊಬ್ಬರದ ಬೆಲೆ ಹೆಚ್ಚಾಗುತ್ತದೆ, ಬೆಲೆ ಹೆಚ್ಚಳಕ್ಕೆ ಅನುಗುಣವಾಗಿ ಉತ್ಪಾದಕರಿಗೆ ಸಬ್ಸಿಡಿ ರೂಪದಲ್ಲಿ ಸರ್ಕಾರ ಹೆಚ್ಚುವರಿ ಹಣ ಕೊಡುತ್ತದೆ. ಇದು ಒಂದು ಕೈಯಿಂದ ತೆಗೆದುಕೊಂಡು ಇನ್ನೊಂದು ಕೈಯಿಂದ ಹಿಂತಿರುಗಿಸುವ ವಿಶಿಷ್ಟ ಪ್ರಕರಣವಾಗಿದೆ.

ಕೇಂದ್ರ ಸರ್ಕಾರ ರಸಗೊಬ್ಬರ ಮತ್ತು ಅವುಗಳನ್ನು ಉತ್ಪಾದಿಸಲು ಬೇಕಾದ ಕಚ್ಚಾ ವಸ್ತುಗಳ ಮೇಲೆ ಜಿ.ಎಸ್.ಟಿ ವಿಧಿಸುತ್ತದೆ. ಸಲ್ಫ್ಯೂರಿಕ್ ಆಮ್ಲ ಮತ್ತು ಅಮೋನಿಯದಂತಹ ಕಚ್ಚಾ ವಸ್ತು(RM) ಗಳಿಗೆ ಶೇ. 18, ಫಾಸ್ಪರಿಕ್ ಆಮ್ಲಕ್ಕೆ ಶೇ. 12 ಜಿ.ಎಸ್.ಟಿ. ವಿಧಿಸಲಾಗುತ್ತದೆ.

ರಸಗೊಬ್ಬರ ಪೂರೈಕೆ ಸರಪಳಿಯ ಎರಡು ಪ್ರಮುಖ ಘಟಕಗಳಿಗೆ ಎರಡು ವಿಭಿನ್ನ ಆಡಳಿತಗಳ ಅಡಿಯಲ್ಲಿ ತೆರಿಗೆ ವಿಧಿಸಲಾಗುತ್ತದೆ: ಒಂದು GST ಅಡಿಯಲ್ಲಿ ಮತ್ತು ಇನ್ನೊಂದು GST ಪೂರ್ವ ಆಡಳಿತದ ಅಡಿಯಲ್ಲಿ. ಯೂರಿಯಾ ಮತ್ತು ಡಿ-ಅಮೋನಿಯಂ ಫಾಸ್ಫೇಟ್ (ಡಿಎಪಿ) ನಂತಹ ಎಲ್ಲಾ ಸಿದ್ಧಪಡಿಸಿದ ರಸಗೊಬ್ಬರಗಳಿಗೆ ಜಿಎಸ್‌ಟಿ ಅಡಿಯಲ್ಲಿ ಶೇ. 5 ತೆರಿಗೆ ವಿಧಿಸಲಾಗುತ್ತದೆ. ಹೆಚ್ಚಿನ RM ಗಳು ಸಹ GST ಅಡಿಯಲ್ಲಿ ಒಳಗೊಳ್ಳುತ್ತವೆ. ಆದಾಗ್ಯೂ, ಎಲ್ಲಾ ದೇಶೀಯ ಯೂರಿಯಾ ತಯಾರಿಕೆಗೆ ಬಳಸಲಾಗುವ ನೈಸರ್ಗಿಕ ಅನಿಲ (NG), ಪೂರ್ವ GST ಆಡಳಿತದ ಅಡಿಯಲ್ಲಿ ತೆರಿಗೆ ವಿಧಿಸಲಾಗುತ್ತದೆ.

ರಸಗೊಬ್ಬರ ಕಂಪನಿಗಳಿಗೆ ಲಕ್ಷಾಂತರ ಕೋಟಿ ರೂಪಾಯಿ ಸಬ್ಸಿಡಿ ಹಣ!

ಇಲ್ಲೊಂದು ಜನಸಾಮಾನ್ಯರಿಗೆ ಅರ್ಥವಾಗದ ನಡೆಗಳು ನಡೆಯುತ್ತಿವೆ. ಕೇಂದ್ರ ಸರ್ಕಾರ ಪ್ರತಿ ವರ್ಷವೂ ಬಜೆಟ್ ಮೂಲಕ ರಸಗೊಬ್ಬರ ತಯಾರಕರು ಮತ್ತು ಆಮದುದಾರರಿಗೆ ಸಬ್ಸಿಡಿ ನೀಡುತ್ತದೆ. ನವ ಉದಾರವಾದಿ ನೀತಿಗಳನ್ನು ಅಳವಡಿಸಿಕೊಂಡ ನಂತರದ ಅವಧಿಯಲ್ಲಿ ರಸಗೊಬ್ಬರ ಸಬ್ಸಿಡಿಯು 1990-91ರಲ್ಲಿ 4,389 ಕೋಟಿ ರೂ. ನಿಂದ 2008-09 ರಲ್ಲಿ 75,849 ಕೋಟಿ ರೂ.ಗೆ ಹೆಚ್ಚಳವಾಯಿತು. 2021-22ರಲ್ಲಿ ರೂ. 2.54 ಲಕ್ಷ ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, 2022-23ನೇ ಸಾಲಿಗೆ ರೂ. 1.05 ಲಕ್ಷ ಕೋಟಿಗೆ ಸೀಮಿತಗೊಳಿಸಿತು. 2022-23ರ ಪರಿಷ್ಕೃತ ಮೊತ್ತ 2,25,222 ಕೋಟಿ ರೂ. ಗಳಾದರೆ, 2023-24ರ ಅಂದಾಜು ಮೊತ್ತ 1,75.103 ಕೋಟಿ ರೂ.ಗಳಿಗೆ ಕಡಿತ ಮಾಡಿದೆ. ಸರ್ಕಾರ ಈ ಪ್ರಮಾಣದಲ್ಲಿ ಕಂಪನಿಗಳಿಗೆ ಸಬ್ಸಿಡಿ ಹಣ ಕೊಡುತ್ತಿದ್ದರೂ ಕೂಡಾ, ರಸಗೊಬ್ಬರದ ಬೆಲೆ ಏರುತ್ತಲೇ ಇದೆ. ಇದಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ಪದಾರ್ಥಗಳ ಬೆಲೆ ಏರಿಕೆ ಕಾರಣ ಎಂದು ಉತ್ಪಾದನಾ ಕಂಪನಿಗಳು ಸಮರ್ಥಿಸಿಕೊಳ್ಳುತ್ತಿವೆ.

ಇದು ನಿಜವಲ್ಲ. ಅಂತಾರಾಷ್ಟ್ರೀಯ ಮಟ್ಟದಲ್ಲಿ ರಸಗೊಬ್ಬರಕ್ಕೆ ಬೇಕಾದ ಕಚ್ಚಾ ವಸ್ತುಗಳ ಬೆಲೆ ಇಳಿಕೆಯಾದ ನಂತರವೂ, ದೇಶದಲ್ಲಿ ರಸಗೊಬ್ಬರಗಳ ಬೆಲೆ ಶೇ.30 ರಷ್ಟು ಹೆಚ್ಚಾಗಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆಗೆ ಅನುಗುಣವಾಗಿ ಇಲ್ಲಿಯೂ ಜಾರಿಗೆ ತಂದಿದ್ದರೆ ರಸಗೊಬ್ಬರಗಳ ಬೆಲೆಯಲ್ಲಿ ಇಂದಿನ ಬೆಲೆಯ ಅರ್ಧದಷ್ಟು ಕಡಿಮೆಯಾಗುತ್ತಿತ್ತು. ಆದರೆ, ಕೇಂದ್ರ ಸರ್ಕಾರ ದರ ಕಡಿತದ ಲಾಭವನ್ನು ತಾನೇ ಉಳಿಸಿಕೊಂಡು, ಜೊತೆಗೆ ಸಬ್ಸಿಡಿಯನ್ನೂ ಕಡಿತಗೊಳಿಸಿ ರೈತರ ಮೇಲೆ ಹೊರೆ ಹಾಕಿದೆ.

ಒಂದು ಲಕ್ಷ ಕೋಟಿ ವಾಪಸ್

ಮತ್ತೊಂದಡೆ, 2018-23ರ ನಡುವಿನ ಐದು ವರ್ಷಗಳ ಅವಧಿಯಲ್ಲಿ ಕೇಂದ್ರ ಕೃಷಿ ಇಲಾಖೆಯಿಂದ ಕೃಷಿ ಕ್ಷೇತ್ರಕ್ಕೆ ಮೀಸಲಿಟ್ಟಿದ್ದ ಹಣವನ್ನು ಅಕ್ಷರಶಃ ಒಂದು ಲಕ್ಷ ಕೋಟಿ ಹಣವನ್ನು ಕೇಂದ್ರ ಸರ್ಕಾರ ಮಂಜೂರು ಮಾಡದೆ ವಾಪಸ್ ಕಳುಹಿಸಿದೆ. ಇದೇ ಅವಧಿಯಲ್ಲಿ ಕೃಷಿ ನಷ್ಟ ಮತ್ತು ಸಾಲದ ಸಮಸ್ಯೆಯಿಂದ ದೇಶಾದ್ಯಂತ ಲಕ್ಷಗಟ್ಟಲೆ ರೈತರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಸರ್ಕಾರದ ಅಂಕಿ ಅಂಶಗಳು ತೋರಿಸುತ್ತಿವೆ.

ಮುಕ್ತ ಆರ್ಥಿಕ ನೀತಿಗಳ ಜಾರಿಯ ಗುರಿಯೊಂದಿಗೆ ಕೇಂದ್ರದ ಬಿಜೆಪಿ ಸರ್ಕಾರ ರೈತರನ್ನು, ಕೃಷಿ ಕಾರ್ಮಿಕರನ್ನು ಸಂಕಷ್ಟಕ್ಕೆ ಸಿಲುಕಿಸಲು, ರೈತರ ಕೃಷಿಯನ್ನು ಕಾರ್ಪೊರೇಟ್ ಕೃಷಿಯನ್ನಾಗಿಸುವ ಮೂಲಕ ರೈತರನ್ನು ಮತ್ತು ಕೃಷಿ ಕಾರ್ಮಿಕರನ್ನು ಕೃಷಿಯಿಂದ ಹೊರದಬ್ಬಲು ಮುಂದಾಗಿದೆ, ಎಲ್ಲವನ್ನು ಮುಕ್ತ ಮಾರುಕಟ್ಟೆಗೆ ತೆರೆದಿಡುವ ಗುರಿಯೊಂದಿಗೆ ಪಡಿತರ ವ್ಯವಸ್ಥೆಯನ್ನು ನಾಶಮಾಡಲು ಮುಂದಾಗಿದೆ. ಇಂತಹ ಜನವಿರೋಧಿ, ಕೃಷಿ ವಿರೋಧಿ ಮತ್ತು ದೇಶ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಇಂದಿನ ಚುನಾವಣೆಯನ್ನು ಪ್ರತಿರೋಧದ ಒಂದು ಅಸ್ತ್ರವನ್ನಾಗಿ ಬಳಸಿಕೊಳ್ಳೋಣ. ●



ದಲಿತರ ಮತ ಬಿಜೆಪಿ-ಜೆಡಿಎಸ್‌ಗಿಲ್ಲ: ದಲಿತರ-ಕೃಷಿ ಕೂಲಿಕಾರರ ದುಂಡು ಮೇಜಿನ ಸಭೆ ಘೋಷಣೆ

ಪ್ರಸ್ತುತ ನಡೆಯುತ್ತಿರುವ ಸಾರ್ವತ್ರಿಕ ಚುನಾವಣೆಯಲ್ಲಿ ದಲಿತರ ಮತ್ತು ಕೃಷಿಕೂಲಿಕಾರರ ಮತಗಳು ಬಿಜೆಪಿ-ಜೆಡಿಎಸ್ ಪಕ್ಷಗಳ ಅಭ್ಯರ್ಥಿಗಳಿಗಿಲ್ಲ ಎಂದು 'ದಲಿತರ-ಕೃಷಿ ಕೂಲಿಕಾರರ ದುಂಡು ಮೇಜಿನ ಸಭೆ' ಘೋಷಿಸಿದೆ. ಏಪ್ರಿಲ್ 2, 2024 ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ.

ದೇಶದ ಪ್ರಜಾಪ್ರಭುತ್ವವನ್ನು ಬಲಗೊಳಿಸಲು, ಬಿ.ಆರ್. ಅಂಬೇಡ್ಕರ್ ಅವರ ಆಶಯಗಳನ್ನು ಸಫಲಗೊಳಿಸಲು, ಸಂವಿಧಾನ ರಕ್ಷಣೆಗೆ ಸನ್ನದ್ದರಾಗಬೇಕೆಂದು ದಲಿತರಿಗೆ ಕರೆಕೊಟ್ಟಿರುವ ಈ ಸಭೆಯು, ಸಂವಿಧಾನದ ಮೇಲೆ ದಾಳಿ ಮಾಡುತ್ತಿರುವ, ಮನುವಾದವನ್ನು ಜಾರಿಗೆ ತರುತ್ತಿರುವ ಕೋಮುವಾದಿಗಳನ್ನು ಅಧಿಕಾರದಿಂದ ಕಿತ್ತೊಗೆಯಲು ಹಾಗೂ ದೇಶವನ್ನು ಲೂಟಿ ಮಾಡುತ್ತಿರುವ ಕಾರ್ಪೊರೇಟ್ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಬಿಜೆಪಿ ಮತ್ತು ಜೆಡಿಎಸ್ ಕೂಟವನ್ನು ಸೋಲಿಸುವಂತೆ ಜನತೆಗೆ ದುಂಡು ಮೇಜಿನ ಸಭೆ ಕರೆಕೊಟ್ಟಿದೆ.

ಸಭೆಯಲ್ಲಿ ಮಾತನಾಡಿದ ವಿವಿಧ ಸಂಘಟನೆಗಳ ಮುಖಂಡರು, ಮೋದಿ ಸರ್ಕಾರದ ಸಂವಿಧಾನ ವಿರೋಧಿ ಮತ್ತು ದಲಿತ ವಿರೋಧಿ ನೀತಿಗಳನ್ನು ಬಲವಾಗಿ ಟೀಕಿಸಿದರು. ಕೇಂದ್ರದ ಬಿಜೆಪಿ ಸರ್ಕಾರ 'ಸಬ್ ಕಾ ಸಾತ್, ಸಬ್ ಕಾ ವಿಕಾಸ್' ಎಂಬ ಘೋಷಣೆಯ ಮೂಲಕ ಎಲ್ಲರಿಗೂ ರಕ್ಷಣೆ ಮತ್ತು ಭದ್ರತೆಯನ್ನು ಒದಗಿಸುವ ವಾತಾವರಣವನ್ನು ಸೃಷ್ಟಿಸಲಾಗಿದೆ ಎಂದು ಹೇಳುತ್ತಿದೆ. ಇದು ಅತ್ಯಂತ ಸುಳ್ಳು. ಮೋದಿ ಸರ್ಕಾರ ಸಂವಿಧಾನದ ಮೇಲೆ ದಾಳಿ ನಡೆಸುತ್ತಿದೆ, ದಲಿತರು ಮತ್ತು ತಳಸಮುದಾಯಗಳ ಹಿತಾಶಕ್ತಿಗಳನ್ನು ಪೋಷಿಸುವ ಮತ್ತು ಅವರ ಹಕ್ಕುಗಳನ್ನು ಸಂರಕ್ಷಿಸುವ ಉದ್ದೇಶ ಬಿಜೆಪಿಗಿಲ್ಲ. ಲೋಕಸಭಾ ಚುನಾವಣೆಯಲ್ಲಿ 400ಕ್ಕಿಂತ ಹೆಚ್ಚು ಸಂಸದರನ್ನು ಆಯ್ಕೆ ಮಾಡಿದರೆ, ಸಂವಿಧಾನವನ್ನು ಬದಲಾಯಿಸಲಾಗುವುದು ಎಂದು ಬಿಜೆಪಿ ಸಂಸದರು ಬಹಿರಂಗವಾಗಿ ಹೇಳುತ್ತಿದ್ದಾರೆ. ಅಷ್ಟೇ ಅಲ್ಲ, ದೆಹಲಿಯ ಜಂತರ್ ಮಂತರ್ ನಲ್ಲಿ ಸಂವಿಧಾನ ಪ್ರತಿಯನ್ನು ಬಿಜೆಪಿಯವರೇ ಸುಟ್ಟುಹಾಕಿದರೂ ಕೇಂದ್ರ ಸರ್ಕಾರ ಇವರ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಆರೋಪಿಸಿದರು.

ಸರ್ವೋಚ್ಚ ನ್ಯಾಯಾಲಯವು 2018ರ ಒಂದು ತೀರ್ಪಿನಲ್ಲಿ 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯಿದೆ'ಯನ್ನು ದುರ್ಬಲಗೊಳಿಸಿದಾಗಲೂ ಬಿಜೆಪಿ ಮೌನವಾಗಿ ಅದರ ಪರವಾಗಿತ್ತು. ಇದರ ವಿರುದ್ಧ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ದಲಿತರು ವ್ಯಾಪಕ ಪ್ರತಿಭಟನೆ ನಡೆಸಿದರು, ಈ ಹೋರಾಟಗಳಲ್ಲಿ 9ಕ್ಕೂ ಹೆಚ್ಚು ಜನರು ಸಾವಿಗೀಡಾದರು. ದಲಿತ ಕಾರ್ಯಕರ್ತರ ಮೇಲೆ ಬಿಜೆಪಿ ಕಾರ್ಯಕರ್ತರು ಗುಂಡು ಹಾರಿಸಿದರು. ಇಂತಹ ಅಪರಾಧಿಗಳ ವಿರುದ್ಧ ಸರ್ಕಾರಗಳು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಮುಖಂಡರು ಆರೋಪಿಸಿದ್ದಾರೆ.

ಈ ಹಿನ್ನಲೆಯಲ್ಲಿ ರಾಜ್ಯದಾದ್ಯಂತ ದಲಿತರು ಮತ್ತು ಕೃಷಿ ಕೂಲಿಕಾರರನ್ನು ಜಾಗೃತಗೊಳಿಸಲು ವ್ಯಾಪಕವಾಗಿ ತೊಡಗಿಸಿಕೊಳ್ಳಲು ಸಭೆ ನಿರ್ಣಯಿಸಿತು. ಇದಕ್ಕಾಗಿ ರಾಜ್ಯಾದ್ಯಂತ ಕ್ಷೇತ್ರಾವಾರು ದಲಿತ ಸಂಘಟನೆಗಳ ದುಂಡು ಮೇಜಿನ ಸಭೆ ನಡೆಸಬೇಕು, ಮೀಸಲು ಲೋಕಸಭಾ ಕ್ಷೇತ್ರಗಳಲ್ಲಿ ದಲಿತ ಸಂಘಟನೆಗಳು ಐಕ್ಯತೆಯಿಂದ ಪ್ರಚಾರಾಂದೋಲನ ನಡೆಸುವ ಮೂಲಕ ದಲಿತರನ್ನು ಜಾಗೃತಗೊಳಿಸಬೇಕು. ಈ ನಿಟ್ಟಿನಲ್ಲಿ ಇಂದಿನಿಂದಲೇ ಕಾರ್ಯೋನ್ಮುಖರಾಗಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಗಿದೆ.

ದುಂಡು ಮೇಜಿನ ಸಭೆಯಲ್ಲಿ ದಲಿತ ಹಕ್ಕುಗಳ ಸಮಿತಿ (DHS) ಯ ರಾಜ್ಯಾಧ್ಯಕ್ಷರಾದ ಗೋಪಾಲ ಕೃಷ್ಣ ಹರಳಹಳ್ಳಿ ಮತ್ತು ಬಿ. ರಾಜಶೇಖರ ಮೂರ್ತಿ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಮುಖಂಡರಾಡ ಮಾವಳ್ಳಿ ಶಂಕರ್, ಕರ್ನಾಟಕ ರಾಜ್ಯ ಎಸ್.ಸಿ./ಎಸ್.ಟಿ. ನೌಕರರ ಸಮನ್ವಯ ಸಮಿತಿ ಮುಖಂಡರಾದ ಡಿ.ಶಿವಶಂಕರ್, ದಲಿತ ಸಂಘರ್ಷ ಸಮಿತಿ (ಭೀಮ ವಾದ) ಯ ಮುಖಂಡರಾದ ಡಾ.ಮೋಹನ್ ರಾಜ್, ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ (AIAWU) ದ ಮುಖಂಡರಾದ ಪುಟ್ಟಮಾದು, ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನ (AIDRM) ಸಂಘಟನೆಯ ಡಾ. ಮಹೇಶ್ ಕುಮಾರ್ ರಾಥೋಡ್, 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಹೆಚ್. ಜನಾರ್ದನ(ಜನ್ನಿ) ಮತ್ತು ಇನ್ನಿತರ ಪ್ರಗತಿಪರ ಮುಖಂಡರು, ಕಾರ್ಯಕರ್ತರು ಈ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿದ್ದರು. ●

ಕಾರ್ಮಿಕ ವರ್ಗ ಮತ್ತು ನವ-ಫ್ಯಾಸಿಸಂನ.... ಪುಟ 13 ರಿಂದ

ಕ್ರಮದಲ್ಲಿ ಕುಂದಿಸಿದ ನಂತರ ನವ-ಉದಾರವಾದವು ತಲುಪಿದ ದಾರಿಕಾಣದ ಹಂತವೇ ಈ ಸಮಾನ ಸನ್ನಿವೇಶ/ಅಂಶ ಎಂದು ಊಹಿಸುವುದು ತರ್ಕಸಮ್ಮತವಾಗಿದೆ. ಇವರೆಲ್ಲರೂ ತಮ್ಮ ತಮ್ಮ ದೇಶಗಳ ಜನರ ಒಂದು ಬಹು ದೊಡ್ಡ ಸಮುದಾಯ (majority) ದ್ವೇಷದ ಗುರಿಯಾಗಿ ಒಂದು ಅಲ್ಪ ಸಂಖ್ಯಾತ 'ಅನ್ಯ' ಪಂಗಡವನ್ನು ಆರಿಸಿಕೊಳ್ಳುತ್ತಾರೆ. ಈ 'ಅನ್ಯರು' ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಅಸ್ಮಿತೆ ಹೊಂದಿದವರಾಗಿರುತ್ತಾರೆ. ಪ್ರಸ್ತುತ ಸನ್ನಿವೇಶದಲ್ಲಿ ಇವರೆಲ್ಲರೂ (ಟ್ರಂಪ್‌ಗಳು, ಮೋದಿಗಳು, ಇತ್ಯಾದಿ) ತಮ್ಮ ದ್ವೇಷದ ಗುರಿಯಾಗಿ 'ಅನ್ಯ'ರನ್ನು ಗುರುತಿಸಲು ಒಂದು ಮೂಲ ಮತ್ತು ಸಮಾನ ಕಾರಣವಿದೆ. ಅದುವೇ ನವ-ಉದಾರವಾದ ಸೃಷ್ಟಿಸಿರುವ ಆರ್ಥಿಕ ಬಿಕ್ಕಟ್ಟು.

ಈ ಎಲ್ಲದರ ಬಗ್ಗೆ ಉಪಸಂಹಾರವಾಗಿ ಕೆಲವು ಅಭಿಪ್ರಾಯಗಳನ್ನು ಹೇಳಬಹುದು. ಮೊದಲನೆಯದು, ಪ್ರಜಾಪ್ರಭುತ್ವದ ರಕ್ಷಣೆಗಾಗಿ ಕಾರ್ಮಿಕರ ಸಂಘಟನೆಗಳು ಶಕ್ತಿಯುತವಾಗಿರುವುದು ಅವಶ್ಯವಾಗುತ್ತದೆ. ಆದರೆ, ಕಾರ್ಮಿಕ ಸಂಘಟನೆಗಳ ಬಗ್ಗೆ ಬಹುತೇಕ ಉದಾರವಾದಿಗಳು ಪೂರ್ಣವಾಗಿ ಭಿನ್ನವಾದ ಒಂದು ಅಭಿಪ್ರಾಯವನ್ನು - ಸಾಮಾನ್ಯವಾಗಿ ಒಂದು ವೈರತ್ವದ ಅಭಿಪ್ರಾಯ ಹೊಂದಿರುತ್ತಾರೆ ಎಂಬುದನ್ನು ಮತ್ತೊಮ್ಮೆ ಗಮನಿಸಬಹುದು. ಕಾರ್ಮಿಕರು "ತಮ್ಮ ಹಕ್ಕೊತ್ತಾಯಗಳನ್ನು ಈಡೇರಿಸುವಂತೆ ತಮ್ಮ ಮುಷ್ಕರಗಳ ಮೂಲಕ ಸಮಾಜದ ಮೇಲೆ ಒತ್ತಾಯ ಹೇರುತ್ತಾರೆ" ಎಂದು ಉದಾರವಾದಿಗಳು ಆರೋಪಿಸುತ್ತಾರೆ. ಇದು ದುಡಿಯುವ ಬಡವರ ಬಗ್ಗೆ ಅವರು ಹೊಂದಿರುವ ನಿರ್ದಯ ಮನೋಭಾವದ ಪ್ರತೀಕವಾಗಿದೆ ಮಾತ್ರವಲ್ಲ, ನೈತಿಕವಾಗಿ ಅಸಂಗತ ಎಂಬುದನ್ನು ಮತ್ತು ಸಮಾಜದ ಕಾರ್ಯವೈಖರಿಯ ಬಗ್ಗೆ ಅವರು ಹೊಂದಿರುವ ತಿಳುವಳಿಕೆಯು ಮೇಲು ಮೇಲಿನದು ಎಂಬುದನ್ನು ತೋರಿಸುತ್ತದೆ. ವಾಸ್ತವವಾಗಿ, ಕಾರ್ಮಿಕ ವರ್ಗವು ಒಂದು ವರ್ಗವಾಗಿ ಮಾತ್ರವಲ್ಲ, ಬಲಗೊಳ್ಳುತ್ತಿರುವ ಫ್ಯಾಸಿಸಂನ ವಿರುದ್ಧ ಒಂದು ಭದ್ರಕೋಟೆಯಾಗಿ ನಿಲ್ಲುವ ಕಾರಣದಿಂದ, ವ್ಯಕ್ತಿಗಳು ಹೊಂದಿರುವ ಮತ್ತು ಅನುಭವಿಸುವ ಸ್ವಾತಂತ್ರ್ಯಗಳನ್ನು ಉಳಿಸಿಕೊಳ್ಳುವುದು ಕಾರ್ಮಿಕ ವರ್ಗದಿಂದ ಮಾತ್ರ ಸಾಧ್ಯ. ಆದರೆ, ಒಂದೆಡೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಮತ್ತು ಇನ್ನೊಂದೆಡೆಯಲ್ಲಿ ಟ್ರೇಡ್ ಯೂನಿಯನ್ ಹಕ್ಕುಗಳನ್ನೂ ಇಡುವ ಉದಾರವಾದವು, ಟ್ರೇಡ್ ಯೂನಿಯನ್ ಹಕ್ಕುಗಳು ದಮನಕ್ಕೊಳಗಾದಾಗ ವ್ಯಕ್ತಿ ಸ್ವಾತಂತ್ರ್ಯವು ಊನವಾಗದೆ ಉಳಿಯುತ್ತದೆ ಎಂದು ನಂಬುತ್ತದೆ. ಇದು ಆಧಾರವಿಲ್ಲದ ನಂಬಿಕೆ.

ಎರಡನೆಯ ಅಭಿಪ್ರಾಯವೆಂದರೆ, ಸಾರ್ವಜನಿಕ ವಲಯವು ಪ್ರಜಾಪ್ರಭುತ್ವದ ಉಳಿವಿಗೆ ಅತ್ಯಗತ್ಯವಾಗುತ್ತದೆ. ಇದೂ ಸಹ ಉದಾರವಾದಿ ಅಭಿಪ್ರಾಯಕ್ಕೆ ವಿರುದ್ಧವಾದ ಸಂಗತಿಯಾಗಿದೆ ಎಂಬುದನ್ನು ಮತ್ತೊಮ್ಮೆ ಗಮನಿಸಬಹುದು. ಉದಾರವಾದಿಗಳ ಪ್ರಕಾರ, ಖಾಸಗಿ ಉದ್ಯಮ ಮತ್ತು ಉದಾರವಾದಿ ಪ್ರಜಾಪ್ರಭುತ್ವ, ಇವುಗಳು ಒಂದಕ್ಕೊಂದು ಪೂರಕವಾಗಿರುತ್ತವೆ. ಖಾಸಗಿ ವಲಯವನ್ನು ವ್ಯಾಪಕವಾಗಿ ಹೊಂದಿರುವ ಮತ್ತು ಸಾರ್ವಜನಿಕ ವಲಯವನ್ನು ನಗಣ್ಯವಾಗಿ ಹೊಂದಿರುವ ಒಂದು ಅರ್ಥವ್ಯವಸ್ಥೆಯು ಜನರಿಗೆ ಕೈಗೆಟುಕುವ ಬೆಲೆಯಲ್ಲಿ ಅಗತ್ಯ ಸೇವೆಗಳನ್ನು ಒದಗಿಸುವ ಸಾಮಾಜಿಕ ಉದ್ದೇಶಗಳನ್ನು ಈಡೇರಿಸುವಲ್ಲಿ, ಅಥವಾ ತಾಂತ್ರಿಕ ಸ್ವಾವಲಂಬನೆಯನ್ನು ಸಾಧಿಸುವಲ್ಲಿ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸುವಲ್ಲಿ ಅಸಮರ್ಥವಾಗಿರುತ್ತದೆ ಎಂಬ ಅಂಶವನ್ನು ಉದಾರವಾದಿ ದೃಷ್ಟಿಕೋನವು ಕಡೆಗಣಿಸಿದೆ: ಸಾರ್ವಜನಿಕ ವಲಯವು ಕಾರ್ಮಿಕ ಸಂಘಗಳೊಂದಿಗೆ ಬಲವಾದ ಸಂಬಂಧ ಹೊಂದಿದೆ ಮತ್ತು ಬಲಶಾಲಿಯಾದ ಕಾರ್ಮಿಕ ಸಂಘಗಳು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ ಮಾಡುತ್ತವೆ ಎಂಬ ಮಾತನ್ನು ಹೇಳಿದಾಗ ಅದು ಖಾಸಗಿ ವಲಯವನ್ನು ವ್ಯಾಪಕವಾಗಿ ಹೊಂದಿರುವ ಒಂದು ಅರ್ಥವ್ಯವಸ್ಥೆಯು ನವ-ಫ್ಯಾಸಿಸಂಗೆ ಸಮವೆಂದು ಭಾವಿಸುತ್ತದೆ ಎಂಬುದು ಅದರ ಅರ್ಥವಲ್ಲ. ಖಾಸಗಿ ವಲಯವನ್ನು ವ್ಯಾಪಕವಾಗಿ ಹೊಂದಿರುವ ಅರ್ಥವ್ಯವಸ್ಥೆಯು ನವ-ಫ್ಯಾಸಿಸಂನ ಆಕ್ರಮಣಕ್ಕೆ ಹೆಚ್ಚು ಪಕ್ಕಾಗಿರುತ್ತದೆ ಎಂಬುದು ಅದರ ಅರ್ಥ.

ಜಾರ್ಜಿ ಡಿಮಿಟ್ರೊವ್ ಅವರು ಕಮ್ಯುನಿಸ್ಟ್ ಅಂತಾರಾಷ್ಟ್ರೀಯದ ಏಳನೇ ಕಾಂಗ್ರೆಸ್‌ನಲ್ಲಿ ಯಾವುದನ್ನು "ಹಣಕಾಸು ಬಂಡವಾಳದ ಅತ್ಯಂತ ಪುನರ್ವಶತಾ ವಾದಿ (**revanchist**- ಅಂದರೆ, ದೇಶದ ಕಳೆದುಕೊಂಡ ಪ್ರದೇಶಗಳನ್ನು ಮತ್ತೆ ಪಡೆಯಲು ಹವಣಿಸುವ) ಮತ್ತು ಅತ್ಯಂತ ಪ್ರತಿಗಾಮಿ ವಿಭಾಗಗಳ ಮುಚ್ಚು ಮರೆ ಇಲ್ಲದ ಉಗ್ರ ಸರ್ವಾಧಿಕಾರ" ಎಂದು ಬಣ್ಣಿಸಿದ್ದರೊ ಆ ಫ್ಯಾಸಿಸಂ, ಟ್ರೇಡ್ ಯೂನಿಯನ್‌ಗಳನ್ನು ಹತ್ತಿಕ್ಕುತ್ತದೆ, ಮುಖಂಡರನ್ನು ಬಂಧಿಸುತ್ತದೆ ಮತ್ತು ಅವರನ್ನು ಸತಾಯಿಸುತ್ತದೆ ಎಂಬುದಷ್ಟೇ ವಿಷಯವಲ್ಲ; ಫ್ಯಾಸಿಸಂ ಬಲಗೊಳ್ಳಲು ಅನುವಾಗುವ ಆರ್ಥಿಕ ಬಿಕ್ಕಟ್ಟಿನಂಥಹ ಪರಿಸ್ಥಿತಿಗಳು ಇರುವಾಗ, ಕಾರ್ಮಿಕ ಸಂಘಗಳಿಲ್ಲದ ಅಥವಾ ಕಾರ್ಮಿಕ ಸಂಘಗಳು ದುರ್ಬಲಗೊಂಡ ಪರಿಸ್ಥಿತಿಗಳು ಫ್ಯಾಸಿಸಂ ಬಲಗೊಳ್ಳುವ ಪ್ರಕ್ರಿಯೆಯನ್ನು ಸುಗಮಗೊಳಿತ್ತವೆ ಎಂಬುದೂ ಸಹ ಮುಖ್ಯವಾದ ವಿಷಯವಾಗುತ್ತದೆ. ಸಂದರ್ಭೋಚಿತವಾಗಿ ಜರ್ಮನ್ ಬಿಷಪ್ ಮಾರ್ಟಿನ್ ನಿಮೊಲ್ಲರ್ ಅವರ ಸುಪ್ರಸಿದ್ಧ ಹೇಳಿಕೆಯನ್ನು ನಾವು ಜ್ಞಾಪಿಸಿಕೊಳ್ಳಬಹುದು:

"ಅವರು ಮೊದಲು ಬಂದರು ಸಮಾಜವಾದಿಗಳಿಗಾಗಿ,

ಆಗ ನಾನು ಮಾತನಾಡಲಿಲ್ಲ - ಏಕೆಂದರೆ ನಾನು ಸಮಾಜವಾದಿ ಅಲ್ಲ.

ನಂತರ ಅವರು ಬಂದರು ಟ್ರೇಡ್ ಯೂನಿಯನಿಸ್ಟ್‌ಗಳಿಗಾಗಿ,

ಆಗ ನಾನು ಮಾತನಾಡಲಿಲ್ಲ - ಏಕೆಂದರೆ ನಾನು ಟ್ರೇಡ್ ಯೂನಿಯನಿಸ್ಟ್ ಅಲ್ಲ.

ನಂತರ ಅವರು ಯೆಹೂದಿಗಳನ್ನು ಹುಡುಕಲು ಬಂದರು,

ಆಗ ನಾನು ಮಾತನಾಡಲಿಲ್ಲ - ಏಕೆಂದರೆ ನಾನು ಯಹೂದಿ ಅಲ್ಲ.

ನಂತರ ಅವರು ನನ್ನನ್ನೇ ಹುಡುಕಲು ಬಂದರು - ಆಗ ನನ್ನ ಪರವಾಗಿ ಮಾತನಾಡಲು ಯಾರೂ ಇರಲಿಲ್ಲ".

ಅಪರಾಧ ಪ್ರಜ್ಞೆ ಮತ್ತು ಹೊಣೆಗಾರಿಕೆ ಕುರಿತ ಅವರ ಈ ನುಡಿಗಳು ಇಂದಿಗೂ ಪ್ರಸ್ತುತವಾಗಿವೆ.

ಒಂದು ನವ-ಫ್ಯಾಸಿಸ್ಟ್ ಪ್ರಭುತ್ವದ ವಿರುದ್ಧ ಹೋರಾಡಲು ಮೈತ್ರಿಗಳ ರಾಜಕೀಯ ತಂತ್ರಗಾರಿಕೆಯಷ್ಟೇ ಸಾಲದು. ಅದಕ್ಕಾಗಿ ಕಾರ್ಮಿಕ ವರ್ಗದ ಶಕ್ತಿಯನ್ನು ಪುನಶ್ಚೇತನಗೊಳಿಸುವ ಒಂದು ಕಾರ್ಯತಂತ್ರವೂ ಬೇಕಾಗುತ್ತದೆ. ಈ ನಿಟ್ಟಿನಲ್ಲಿ, ಭಾರತದಲ್ಲಿ ಪ್ರಸ್ತುತ ಸಂಭವಿಸುತ್ತಿರುವ ರೈತರ-ಕಾರ್ಮಿಕರ ನಡುವಿನ ಸಮನ್ವಯವು ಒಂದು ನಿರ್ಣಾಯಕ ಹೆಜ್ಜೆಯಾಗಿದೆ. ●

NEW No. MAG(3)/NPP/205/2021-2022
JANASHAKTHI KANNADA VARA PATRIKE April 8-14, 2024 Price: Rs. 10/- Date of Publication: 05 April 2024 RNI No. KARKAN /2006/17926 Posted on 10-04-2024
Posted at BG PSO, BG - 560026 **Posted at Periodical Rate -** Rs. 2

ಸುಳ್ಳು ಜಾಹಿರಾತುಗಳನ್ನು ಕೊಟ್ಟಿರುವುದು, ಆಧುನಿಕ ವೈದ್ಯಕೀಯ ವಿಜ್ಞಾನವನ್ನು ಆಧಾರರಹಿತವಾಗಿ ದೂಷಣೆ ಮಾಡಿರುವುದು, ಸುಪ್ರಿಂ ಕೋರ್ಟಿನ ಎಚ್ಚರಿಕೆಯನ್ನು ಪರಿಗಣಿಸದೇ ನಿರ್ಲಕ್ಷ್ಯ ಮಾಡಿರುವುದು ಮುಂತಾದ ಕಾರಣಗಳಿಗಾಗಿ 'ಪತಂಜಲಿ ಆಯುರ್ವೇದ ಲಿ'ನ ಪ್ರಚಾರಕ ಬಾಬಾ ರಾಮದೇವ್, ಸಿ.ಇ.ಓ. ಆಚಾರ್ಯ ಬಾಲಕೃಷ್ಣ ಅವರಿಗೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿ ಎಚ್ಚರಿಕೆ ನೀಡಿದೆ.

ಸುಳ್ಳು ಜಾಹಿರಾತುಗಳು–ವೈದ್ಯಕೀಯ ವಿಜ್ಞಾನದ ದೂಷಣೆ

'ಪತಂಜಲಿ'ಯ ಬಾಬಾ ರಾಮ್ ದೇವ್–ಬಾಲಕೃಷ್ಣರಿಗೆ ಸುಪ್ರಿಂ ಕೋರ್ಟ್ ಛೀಮಾರಿ'

'ಕ್ರಮವಹಿಸದ್ದಕ್ಕಾಗಿ ಮೋದಿ ಸರ್ಕಾರಕ್ಕೂ ತರಾಟೆ'





ಆರ್. ರಾಮಕೃಷ್ಣ

'ಪತಂಜಲಿ ಆಯುರ್ವೇದ ಲಿ.' ಕಂಪನಿಯು, ಯಾವುದೇ ವೈಜ್ಞಾನಿಕ ಪರಿಶೀಲನೆ ಇಲ್ಲದೇ, ಸಂಬಂಧಿಸಿದ ಪ್ರಾಧಿಕಾರದಿಂದ ಅನುಮತಿ ಅಥವಾ ಅಗತ್ಯ ಪ್ರಮಾಣ ಪತ್ರಗಳಿಲ್ಲದೇ ತನ್ನ ಆಯುರ್ವೇದ ಉತ್ಪನ್ನಗಳ ಬಗೆಗೆ ಸುಳ್ಳು ಜಾಹಿರಾತುಗಳನ್ನು ನೀಡಿರುವ ಪ್ರಕರಣದಲ್ಲಿ ಹಾಗೂ ಆಧುನಿಕ ವೈದ್ಯಕೀಯ ವಿಜ್ಞಾನದ ಬಗೆಗೆ ಜನರಲ್ಲಿ ತಪ್ಪು ಅಭಿಪ್ರಾಯಗಳು ಮೂಡುವಂತೆ ಆಧಾರರಹಿತ ದೂಷಣೆ ಮಾಡಿರುವ ಪ್ರಕರಣದಲ್ಲಿ ದೇಶದ ಸುಪ್ರಿಂ ಕೋರ್ಟ್ ಯೋಗ ಗುರು, 'ಪತಂಜಲಿ ಆಯುರ್ವೇದ ಲಿ.'ದ 'ಪ್ರಚಾರಕ' ಬಾಬಾರಾಮ್ ದೇವ್ ಮತ್ತು ಸಂಸ್ಥೆಯ ಸಿ.ಇ.ಓ. ಬಾಲಕೃಷ್ಣ ಅವರಿಗೆ ಏಪ್ರಿಲ್ 2, 2024 ರಂದು ಛೀಮಾರಿ ಹಾಕಿ ಎಚ್ಚರಿಕೆಯನ್ನು ನೀಡಿದೆ. ನ್ಯಾಯಾಲಯದ ಸತತ ನಿರ್ದೇಶನ ಮತ್ತು ಎಚ್ಚರಿಕೆಗಳನ್ನು ನಿರ್ಲಕ್ಷಿಸಿ ಅದೇ ಅದೇ ತಪ್ಪು ಜಾಹಿರಾತುಗಳನ್ನು ಪ್ರಕಟ ಮಾಡಿರುವ ಸಂಬಂಧ ತೀವ್ರವಾದ ಆಕ್ಷೇಪವನ್ನು ಎತ್ತಿರುವ ಸುಪ್ರೀಂ ಕೋರ್ಟ್ ಈ ಸಂಬಂಧ ರಾಮ್ ದೇವ್ ಮತ್ತು ಬಾಲಕೃಷ್ಣ ಅವರು ಸಲ್ಲಿಸಿರುವ ಲಿಖಿತ ಕ್ಷಮಾಪಣೆಯು ಅದು ಕೇವಲ ಬಾಯುಪಚಾರಕ್ಕೆ ನೀಡಿದ ಹೇಳಿಕೆಯಂತಿದೆ ಎಂದಿದ್ದು, ಒಪ್ಪಿಕೊಳ್ಳಲು ನಿರಾಕರಿಸಿದೆ. ಅದೇ ಪ್ರಸಂಗದಲ್ಲಿ ಸುಪ್ರೀಂ ಕೋರ್ಟ್ ಪತಂಜಲಿಯ ನಕಲಿ ಔಷಧಿಗಳನ್ನು ಅಧಿಕೃತವಾಗಿ ಪ್ರೋತ್ಸಾಹಿಸುತ್ತಿರುವ ಕೇಂದ್ರ ಸರಕಾರದ ನಡೆಯ ಕುರಿತು ಸಹ ತನ್ನ ತೀವ್ರವಾದ ಆಕ್ಷೇಪಣೆಯನ್ನು ಎತ್ತಿದೆ. ಭಾರತೀಯ ವೈದ್ಯಕೀಯ ಸಂಘ(ಐ.ಎಂ.ಎ.) ಪರವಾಗಿ ವೈದ್ಯರು ಈ ಸಂಬಂಧ ಮೊಕದ್ದಮೆ ಹೂಡಿದ್ದು ಪ್ರಕರಣದ ವಿಚಾರಣೆ ಪ್ರಗತಿಯಲ್ಲಿದೆ.

ಇದು ಹೊಸತಲ್ಲ

ನ್ಯಾಯಲಯಗಳ ಛೀಮಾರಿಯಾಗಲಿ, ಎಚ್ಚರಿಕೆಗಳಾಗಲಿ, ದಂಡಗಳಾಗಲಿ ಪತಂಜಲಿಯ 'ಬಾಬಾ' ರಾಮದೇವ್ ಹಾಗೂ 'ಆಚಾರ್ಯ' ಬಾಲಕೃಷ್ಣ ಅವರಿಗೆ ಹೊಸತೇನು ಅಲ್ಲ. 2023 ರಲ್ಲಿ ಚೆನ್ನೈ ಉಚ್ಚ ನ್ಯಾಯಲಯವು ಇಂತಹದ್ದೇ ಕಾರಣಗಳಿಗಾಗಿ 'ಪತಂಜಲಿ ಆಯುರ್ವೇದ ಲಿ.'ಗೆ 11 ಲಕ್ಷ ರೂಪಾಯಿಗಳ ದಂಡ ವಿಧಿಸಿದ ಇತಿಹಾಸವಿದೆ. ಇನ್ನು ಇಂತಹ ಎಷ್ಟೋ ಬಾನಾಗಡಿಗಳ ಪ್ರಸಂಗಗಳಿವೆ. 75 ಕೋಟಿ ರೂಪಾಯಿಗಳ ಜಿ.ಎಸ್.ಟಿ. ತೆರಿಗೆ ಇಳಿಕೆಯ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸದೇ ವಂಚಿಸಿದ ಪ್ರಕರಣದಲ್ಲೂ ಪತಂಜಲಿ ಸಿಕ್ಕಿ ಬಿದ್ದಿತ್ತು. ದೇಶದ ರಕ್ಷಣಾ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡು ಪತಂಜಲಿಯು ಪೂರೈಸಿದ 'ಆಮ್ಲ' ಜ್ಯೂಸ್ ತೀರಾ ಕಳಪೆ ಎಂಬ ಕಾರಣಕ್ಕೆ ಒಪ್ಪಂದ ರದ್ದಾಗಿರುವ ಪ್ರಕರಣವೂ ಇದೆ. ನ್ಯೂಡಲ್ ಮತ್ತು ಹಸುವಿನ ತುಪ್ಪಗಳ ವಿಷಯದಲ್ಲೂ ಪತಂಜಲಿಯ ಉತ್ಪನ್ನಗಳು ಕಳಪೆ ಎಂಬ ಕಳಂಕಕ್ಕೆ ತುತ್ತಾಗಿವೆ. ಜಾಹಿರಾತುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಪ್ರಮಾಣೀಕರಿಸುವ ಸರಕಾರದ ಅಧಿಕೃತ ಸಂಸ್ಥೆಯು 'ಪತಂಜಲಿ'ಯ ಒಟ್ಟು 33 ಉತ್ಪನ್ನಗಳನ್ನು ಮತ್ತು ಆ ಸಂಬಂಧದ ಜಾಹಿರಾತುಗಳನ್ನು ಪರಿಶೀಲಿಸಿ ಅದರಲ್ಲಿ 23 ಉತ್ಪನ್ನಗಳ ಜಾಹಿರಾತು ಪ್ರಚಾರವು ಸುಳ್ಳು ಎಂದು ಸ್ಪಷ್ಟೀಕರಿಸಿದೆ.

ಇಷ್ಟೆಲ್ಲಾ ಮೋಸ, ವಂಚನೆ, ಕರಾಳ ಇತಿಹಾಸ ಇರುವ ಕಂಪನಿಯು ಇಲ್ಲಿಯವರೆಗೆ ಗಂಭೀರವಾದ ಶಿಕ್ಷೆಗೆ ಗುರಿಯಾಗದೇ ಬಜಾವಾಗುತ್ತ ಬಂದದ್ದು ಹೇಗೆ ಎಂಬ ಪ್ರಶ್ನೆಯೂ ಮೂಡುತ್ತದೆ.

ಬಾಬಾ ರಾಮದೇವ್ ಕಾವಿಧಾರಿ. ಸಾಧು, ಸಂತರು, ಕಾವಿ, ಆಯುರ್ವೇದ, ಸ್ವದೇಶಿ ಉತ್ಪನ್ನಗಳು ಮುಂತಾದ ವಿಷಯಗಳಲ್ಲಿ ಜನ ಸಾಮಾನ್ಯರಲ್ಲಿರುವ ಗೌರವ, ಸೆಳೆತದ ಭಾವನೆಯನ್ನು ಪತಂಜಲಿ ತನ್ನ ದುರ್ಲಾಭಕ್ಕೆ ಬಳಕೆ ಮಾಡಿಕೊಳ್ಳುತ್ತಾ ಬಂದಿದೆ. ಸರಕಾರಗಳೂ, ಅದರಲ್ಲೂ ಬಿಜೆಪಿ ನೇತೃತ್ವದ ಸರಕಾರಗಳು ಈ ಪತಂಜಲಿಯ ವ್ಯವಹಾರಗಳಿಗೆ ಇಂಬು ಕೊಡುತ್ತಾ ಶಾಮೀಲಾಗುತ್ತಾ, ಅನುಕೂಲ ಮಾಡಿಕೊಡುತ್ತ ಬಂದಿವೆ. ರಾಜಕೀಯವಾಗಿಯೂ ಸೈದ್ಧಾಂತಿಕವಾಗಿಯೂ ರಾಮದೇವ್ ಬಿಜೆಪಿ ಮತ್ತು ಸಂಘ ಪರಿವಾರದ ಸಮರ್ಥಕರಾಗಿದ್ದಾರೆ. ಇಲ್ಲಿ 2014 ರ ಲೋಕಸಭಾ ಚುನಾವಣೆಗಳಿಗೂ ಮುಂಚೆ ದೇಶದಲ್ಲಿ ನಡೆದ 'ಭ್ರಷ್ಟಾಚಾರ ವಿರೋಧಿ ಹೋರಾಟ'ದಲ್ಲಿ ರಾಮದೇವ್ ಅವರ ಪಾತ್ರವನ್ನು ನೆನಪಿಸಿಕೊಳ್ಳಬಹುದು. 2017 ರಲ್ಲಿ ಹರಿದ್ವಾರದ 'ಪತಂಜಲಿ ರಿಸರ್ಚ್(!?) ಇನ್ಸಿಸ್ಟಿಟ್ಯೂಟ್' ಅನ್ನು ಉದ್ಘಾಟನೆ ಮಾಡಿದ್ದೇ ಪ್ರಧಾನಿ ಮೋದಿಯವರು. ಇನ್ನು ಕೊರೊನ ಸಂಬಂಧಿತವಾದ ನಕಲಿ ಔಷಧ 'ಕೊರೊನಿಲ್' ವಿಷಯದಲ್ಲಿ ಅದಕ್ಕೆ ಪ್ರೋತ್ಸಾಹ ಬೆಂಬಲ, ರಕ್ಷಣೆ ಕೊಟ್ಟವರು ಅಂದಿನ ಆರೋಗ್ಯ ಸಚಿವ ಹರ್ಷವರ್ಧನ್. ಪತಂಜಲಿ ವಿರುದ್ಧ ಯಾವುದಾದರೂ ಆಕ್ಷೇಪಣೆ, ಕ್ರಮವಹಿಸಿರುವುದು ಏನಾದರೂ ಇದ್ದರೆ ಅದು ಸಾರ್ವಜನಿಕರ ಒತ್ತಾಯ, ಸನ್ನಿವೇಶಗಳ ಒತ್ತಡದಿಂದ ಹೊರತು ಕೇಂದ್ರ ಸರಕಾರದ ಇಚ್ಚೆಯಿಂದ ಅಲ್ಲ.

ಭಾವನೆಗಳ ದುರ್ಬಳಕೆ

'ಗಿಡಮೂಲಿಕೆಗಳು', 'ಆರ್ಯುವೇದ', 'ಸ್ವದೇಶಿ ಉತ್ಪನ್ನಗಳು', 'ದೇಶಪ್ರೇಮ' ಮುಂತಾದ ಹೆಸರಿನಲ್ಲಿ ದುರ್ಲಾಭಕೋರತನದ ದೈತ್ಯ ಸಂಸ್ಥೆಯನ್ನು ಕಟ್ಟಿ ಸಾವಿರಾರು ಕೋಟಿ ರೂಪಾಯಿಗಳ ವಹಿವಾಟು ನಡೆಸುತ್ತಿರುವ ವ್ಯಾಪಾರಿ ತಿಮಿಂಗಿಲಗಳಾದ ಈ ರಾಮದೇವ್ ಮತ್ತು ಬಾಲಕೃಷ್ಣ ಎಂಬ 'ಕಿಲಾಡಿ ಜೋಡಿ'ಯ ಇತಿಹಾಸ ಸಾಕಷ್ಟು ಕರಾಳ ಕತನಗಳಿಂದ ತುಂಬಿದೆ.

'ಆಧುನಿಕ ವಿಜ್ಞಾನ'ಕ್ಕೆ ರಾಮ್ ದೇವ್ ಸವಾಲು!!

ಆಯುರ್ವೇದ ಎಂಬುದು ಒಂದು ವೈದ್ಯಕೀಯ ಪದ್ಧತಿ. ಅದನ್ನು ಅನುಸರಿಸಲು, ಆ ಕುರಿತು ಸತ್ಯ ಆಧಾರಿತವಾದ ಪ್ರಚಾರ–ಪ್ರತಿಪಾದನೆ ಮಾಡಲು ಯಾರೂ ಆಕ್ಷೇಪ ಎತ್ತುವಂತಿಲ್ಲ. ಆದರೆ ಆಯುರ್ವೇದವೇ ಇರಲಿ, ಹೋಮಿಯೋ ಪತಿ, ಯುನಾನಿ, ಸಿದ್ದ ಯಾವುದೇ ಪದ್ಧತಿ ಇರಲಿ ಔಷಧವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮುಂಚೆ, ಅದು ಪರಿಣಾಮಕಾರಿಯೋ ಅಲ್ಲವೋ ಎಂಬ ವಿಷಯದಲ್ಲಿ ಮತ್ತು ಔಷಧವು ಸುರಕ್ಷಿತ, ಅದರಿಂದ ಅಪಾಯವಿಲ್ಲವೆಂಬ ವಿಷಯದಲ್ಲಿ ಸೂಕ್ತ ಪ್ರಾಧಿಕಾರದಿಂದ ಮಾನ್ಯತೆ ಮತ್ತು ದೃಢೀಕರಣಗಳು ಬೇಕೇ ಬೇಕು.

2020 ರಲ್ಲಿ ಜಗತ್ತಿನಾದ್ಯಂತ ಕೊರೊನ ವೈರಸ್ ಹರಡಿ ಆತಂಕ ಸೃಷ್ಟಿಯಾದಾಗ ಪತಂಜಲಿ ಸಂಸ್ಥೆಯು ಅತ್ಯಂತ ತ್ವರಿತವಾಗಿ 'ಕೊರೊನಿಲ್' ಎಂಬ ಔಷಧವನ್ನು ಅದು ಕೊರೊನ ಕಾಯಿಲೆಗೆ ಔಷಧಿ ಎಂದು ಹೇಳಿ ಬಿಡುಗಡೆ ಮಾಡಿತು. ಜೊತೆಗೆ ತನ್ನ ಔಷಧಕ್ಕೆ 'ವಿಶ್ವ ಆರೋಗ್ಯ ಸಂಸ್ಥೆ' ಮಾನ್ಯತೆ ನೀಡಿದೆ ಎಂದೂ ಹೇಳಿಕೊಂಡಿತು. ಪರಿಶೀಲನೆಯ ನಂತರ ಗೊತ್ತಾದದ್ದು 'ಕೊರೊನಿಲ್' ಔಷಧಕ್ಕೆ ವಿಶ್ವ ಆರೋಗ್ಯ ಸಂಸ್ಥೆಯು ಮಾನ್ಯತೆ ನೀಡಿಲ್ಲ ಮತ್ತು 'ಕೊರೊನಿಲ್' ಔಷಧಿಯ ಪರಿಣಾಮಕಾರಿತ್ವ ಮತ್ತು ಸುರಕ್ಷತೆ ಬಗೆಗೆ ಅಗತ್ಯ ಸಂಶೋಧನೆಗಳು ನಡೆದಿಲ್ಲ ಎಂಬುದು. ಇಂತಹ ಹಿನ್ನೆಲೆಯ ರಾಮ್ ದೇವ್ ಅವರು ಹಲವು ಬಾರಿ ಆಧುನಿಕ ವೈದ್ಯಕೀಯ ವಿಜ್ಞಾನವನ್ನು ದೂಷಿಸುವ ಮಾತನಾಡಿದ್ದಾರೆ. ಸವಾಲು ಎಸೆದಿದ್ದಾರೆ.

ತನ್ನ ಜಾಹಿರಾತೊಂದರಲ್ಲಿ, ಆಧುನಿಕ ವೈದ್ಯ ಪದ್ಧತಿಯನ್ನು ಪಾಲಿಸುವ ವೈದ್ಯರೇ ಸಾಯುತ್ತಿದ್ದಾರೆಂಬಂತೆ ಬಿಂಬಿಸಿದ ಪತಂಜಲಿಯ ರಾಮ್ ದೇವ್, 'ಅಲೋಪತಿ'(ಆಧುನಿಕ ವೈದ್ಯಕೀಯ ವಿಜ್ಞಾನ)ಪದ್ಧತಿಯು 'ಸರ್ವಗುಣ ಸಂಪನ್ನ' ಎನ್ನುವುದಾದರೆ 'ಅಲೋಪತಿ' ವೈದ್ಯರಿಗೇಕೆ ಕಾಯಿಲೆಗಳು ಬರುತ್ತವೆ? ಎಂದು ಪ್ರಶ್ನೆ ಎತ್ತಿದ್ದಾರೆ.

ಕೊರೊನ ಸೋಂಕಿನ ಸಂದರ್ಭದಲ್ಲಿ ವ್ಯಕ್ತಿಯು ಉಸಿರು ಬಿಗಿಹಿಡಿದು ಕೊರೊನ ವೈರಸ್ ಸೋಂಕು ಪತ್ತೆ ಹಚ್ಚಬಹುದು, ಒಬ್ಬ ವ್ಯಕ್ತಿ ಒಂದು ನಿಮಿಷ ಉಸಿರು ಬಿಗಿ ಹಿಡಿಯವುದು ಸಾಧ್ಯವಾದರೆ ಆ ವ್ಯಕ್ತಿಗೆ ಸೋಂಕು ಇಲ್ಲ ಎಂದು ತೀರ್ಮಾನಿಸಬಹುದು ಎಂಬ ಅಪಾಯಕಾರಿ ಪರೀಕ್ಷಾ ಮಾದರಿ ಪ್ರತಿಪಾದಿಸಿದ್ದರು. ಸಾಸಿವೆ ಎಣ್ಣೆಯನ್ನು ಮೂಗಿನಲ್ಲಿ ಹಾಕಿಕೊಳ್ಳುವ ಮೂಲಕ ಕೊರೊನ ನಿವಾರಿಸಬಹುದು ಎಂದೂ ರಾಮದೇವ್ ಹೇಳಿದ್ದರು. ಇವೆರಡಕ್ಕೂ ಯಾವುದೇ ವೈಜ್ಞಾನಿಕ ಆಧಾರವಿರಲಿಲ್ಲ.

'ಅಲೋಪತಿ' ಪದ್ಧತಿ ಒಬ್ಬ ಕ್ರೂರ ವ್ಯಕ್ತಿಯನ್ನು ಸಭ್ಯ ವ್ಯಕ್ತಿಯನ್ನಾಗಿ ಪರಿವರ್ತಿಸಬಲ್ಲುದೇ ಎಂದು ಒಮ್ಮೆ ರಾಮದೇವ್ ಸವಾಲು ಹಾಕಿದ್ದರು. ಈ ಮಾತಿನ ಇಂಗಿತಾರ್ಥ ಏನೆಂದರೆ ಆಯುರ್ವೇದವು ಒಬ್ಬ ಕ್ರೂರಿ ಮನುಷ್ಯನನ್ನು ಸಭ್ಯ ವ್ಯಕ್ತಿಯನ್ನಾಗಿ ಮಾಡಬಲ್ಲದು ಎಂಬುದೇ ಆಗಿದೆ. ಯಾವ ಔಷಧವೂ, ಯಾವ ವೈದ್ಯಕೀಯ ಪದ್ಧತಿಯೂ ಒಬ್ಬ ವ್ಯಕ್ತಿಯ ಮನೋಧರ್ಮವನ್ನು ಬದಲಾಯಿಸಲಾರದು. ವ್ಯಕ್ತಿಯ ಕ್ರೌರ್ಯ, ಸಭ್ಯತೆ ಎಲ್ಲವೂ ಸಾಮಾಜಿಕವಾದದ್ದು. ಅದು ಬಹುತೇಕ ಸಾಮಾಜಿಕ ಪರಿಸರದಿಂದ ಸಾಮಾಜಿಕ ವ್ಯವಸ್ಥೆಯ ಪರಿಣಾಮದಿಂದ ರೂಪುಗೊಳ್ಳುವಂತದ್ದು, ನಿರ್ಧಾರವಾಗುವಂತದ್ದು.

ಹಸು, ಎಮ್ಮೆ ಮುಂತಾದ ಪ್ರಾಣಿಗಳ ಮಲ ಮೂತ್ರಗಳು ಆ ಪ್ರಾಣಿಗಳ ದೇಹವು ಬೇಡವೆಂದು ಮಾಡಿದ ವಿಸರ್ಜನೆ. ಈ ಮಲಮೂತ್ರಗಳಲ್ಲಿ ಅಪಾಯಕಾರಿಯಾದ ನಾನಾ ರಾಸಾಯನಿಕಗಳು, ಸೂಕ್ಷ್ಮಜೀವಿಗಳು ಇರುತ್ತವೆ ಎಂಬುದು ವಿಜ್ಞಾನದ ಸಂಶೋಧನೆಯಲ್ಲಿ ಸಾಬೀತಾದ ವಿಷಯ. ಆದರೆ ಗೋಮೂತ್ರದಲ್ಲಿ **ಪುಟ 12 ಕ್ಕೆ**

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**